
# ಅಖಿಲ ಭಾರತ ಪತ್ರಿಕೆ

**ಡಿಸೆಂಬರ್ 2025**



# ಚಿರಂತನ ಯಜ್ಞ

**ಬೆಲೆ : 15/-**



ಫೋಟೊ: ಇಮೇಜಿಂಗ್ ಸಾವಿತ್ರಿ

ಆತ್ಮದಾಭೀಪ್ಸೆಯಲಿ ಅವನು ಹೀಗೆ ಮೃಣ್ಮಯದ ಜೀವವನ್ನು
ವಿವರ್ಜಿತದಲ್ಲಿ ಉತ್ತರೋತ್ತರಕೆ ಎತ್ತರಿಸಿಕೊಂಡನಿನ್ನು,
ಅವನಾತ್ಮವೀಗ ಹೊಸ–ಹುಟ್ಟಿಗಾಗಿ ವೈರಾಜ್ಯ ವ್ಯಾಪ್ತಿಯೊಳಗೆ
ತಾ ಸ್ಪಂದಗೊಳಲು ನೆಲೆ ನಿಂತನೀಗ ಅವನಾಗ ವ್ಯಾಪ್ತದೊಳಗೆ
ಜಡದ–ಜಂಜಡದ ನಶ್ವರದ ವಸ್ತು–ವಿಷಯಗಳ ಮಧ್ಯೆ ರಕ್ತಿ
ಅದರೊಳಗೆ ಸಿಲುಕಿ ತಾ ಕರಗದಂತೆ ಪಡೆದಿಹನು ಈಗ ಮುಕ್ತಿ
ಮತ್ತಿದೋ ಚಲಿಸಿ ಪರಿಶುದ್ಧ ಭೂಮ–ಚಿನ್ಮಯದ –ಭುವನದೊಳಗೆ
ಅಪರೂಪದುಸಿರ ಸಮತಾಪನೀಯ–ಮಂಡಲದಿ ನೆಲೆಸಿ ಬೆಳಗೆ

**– ಪುಟ್ಟು ಕುಲಕರ್ಣಿ**
**(‘ಸಾವಿತ್ರಿ’; ದಳ 7 ರೇಣು 2 ಪುಟ)**

**ಅಖಿಲ ಭಾರತ ಪತ್ರಿಕೆ**

**ಡಿಸೆಂಬರ್ 2025**

ಸಂಪುಟ: 35 ಸಂಚಿಕೆ: 12


## ಪರಿವಿಡಿ


**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


### ಚಿರಂತನ ಯಜ್ಞ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಶಾಶ್ವತದ ಸಾನಿಧ್ಯ** 6
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್
ಅನು: ಡಾ॥ ಮಹಾದೇವ ಸಕ್ರಿ

**ಶ್ರೀಮಾತೆಯವರ ದೃಷ್ಟಿಯಲ್ಲಿ ಸಾವಿತ್ರಿ** 23
ಅನು: ಡಾ॥ ಮಹಾದೇವ ಸಕ್ರಿ
ಅನು: ಶ್ರೀ ಕಿಶೋರಕುಮಾರ ಕಾಸಾರ
ಅನು: ಡಾ॥ ಕೆ.ಎಸ್. ಆಮೂರ

**ಸಾವಿತ್ರಿಯ ಸ್ಪಂದ** 36
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ ‘ಗೀತಾ ಪ್ರಬಂಧಗಳು’** 43
ಅನು: ಜಾನ್ವಿ

**ಶ್ರೀ ಅರವಿಂದರ ‘ಉರ್ವಶಿ’** 52
ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ)

**ವಾರ್ತಾಪತ್ರ** 71

## ಸಂಪಾದಕರ ಟಿಪ್ಪಣಿ

ಶ್ರೀ ಅರವಿಂದರು ಆತ್ಮರೂಪಿಗಳಾಗಿದ್ದು ದಿನಾಂಕ 5 ಡಿಸೆಂಬರ 1950 ರಂದು. ಆದರೆ ತಮ್ಮ ಮೃಣ್ಮಯದ ದೇಹವನ್ನು ಮುಕ್ತಗೊಳಿಸುವ ಮುನ್ನ ಈ ಭೂ–ಬದುಕಿಗೆ ಮೂರು ಅಪೂರ್ವವಾದ ಕಾಣಿಕೆಗಳನ್ನು ನೀಡಿದ್ದಾರೆ. ಪ್ರಪ್ರಥಮವಾಗಿ 'ಸುಪ್ರಕಾಶಿತ ಮಾನಸವನ್ನು' ಶ್ರೀಮಾತೆಯವರಿಗೆ ಧಾರೆಯೆರೆದದ್ದು, ಜೊತೆಗೆ ಇದು ಮಾನವೀಯತೆಯ ಸ್ವರೂಪದಲ್ಲಿ ಯಾರು ಸ್ವೀಕರಿಸಲು ಸಿದ್ಧರಿರುವರೋ ಅವರೆಲ್ಲರಿಗೂ ಲಭ್ಯಗೊಳ್ಳುವಂತಾಯಿತು. ಎರರಡನೇಯದಾಗಿ ಶ್ರೀ ಅರವಿಂದರು ಪಂಚ ಭೂತಾತ್ಮಕವಾಗುವ ಮೂಲಕ ಅಧಿಮಾನಸೀಯ ಚೇತನವನ್ನು ಜಡದಲ್ಲಿಯೂ ನೆಲೆಸುವಂತೆ ಮಾಡಿದ್ದು ಒಂದು ಶಾಶ್ವತದ ಕಾಣಿಕೆಯಾಗಿದೆ. ಅಂತಿಮವಾಗಿ ಮಾನವ ಕುಲಕೆ 'ಸಾವಿತ್ರಿ'ಯನ್ನು ನೀಡಿರುವದು ಒಂದು ಅತ್ಯಪೂರ್ವವಾದ ಕಾಣಿಕೆಯಾಗಿದೆ.

ಶ್ರೀ ಅರವಿಂದರು ಪಂಚ ಭೂತಗಳಲ್ಲಿ ಲೀನವಾದ 75 ನೇ ವರ್ಷವಾಗಿದೆ, ಜೊತೆಗೆ 'ಸಾವಿತ್ರಿ'ಯ ಸ್ವರೂಪವೂ ರೂಹುಗೊಂಡು 75 ವರ್ಷಗಳಾಗಿವೆ. ಈ ವಿಷಯದ ಆಯಾಮದಲ್ಲಿ ಈ ಸಂಚಿಕೆ ರೂಪುಗೊಂಡಿದೆ. (ಎಐಎಮ್)

## ಸಂಪಾದಕೀಯ

### ಅಮರತ್ವದೊಡನೆ ಅನುಸಂಧಾನ

ಆತ್ಮದಾಭೀಪ್ಸೆಯಲಿ ಅವನು ಹೀಗೆ ಮೃಣ್ಮಯದ ಜೀವವನ್ನು
ವಿವರ್ಜಿತದಲ್ಲಿ ಉತ್ತರೋತ್ತರಕೆ ಎತ್ತರಿಸಿಕೊಂಡನಿನ್ನು,
ಅವನಾತ್ಮವೀಗ ಹೊಸ–ಹುಟ್ಟಿಗಾಗಿ ವೈರಾಜ್ಯ ವ್ಯಾಪ್ತಿಯೊಳಗೆ
ತಾ ಸ್ಪಂದಗೊಳಲು ನೆಲೆ ನಿಂತನೀಗ ಅವನಾಗ ವ್ಯಾಪ್ತದೊಳಗೆ
ಜಡದ–ಜಂಜಡದ ನಶ್ವರದ ವಸ್ತು–ವಿಷಯಗಳ ಮಧ್ಯೆ ರಕ್ತಿ
ಅದರೊಳಗೆ ಸಿಲುಕಿ ತಾ ಕರಗದಂತೆ ಪಡೆದಿಹನು ಈಗ ಮುಕ್ತಿ
ಮತ್ತಿದೋ ಚಲಿಸಿ ಪರಿಶುದ್ಧ ಭೂಮ–ಚಿನ್ಮಯದ –ಭುವನದೊಳಗೆ
ಅಪರೂಪದುಸಿರ ಸಮತಾಪನೀಯ–ಮಂಡಲದಿ ನೆಲೆಸಿ ಬೆಳಗೆ

**('ಸಾವಿತ್ರಿ'; ದಳ 7 ರೇಣು 2 ಪುಟ 486)**

ಜೀವನವು ದಿವ್ಯವಾದರೆ ಮರಣವು ದಿವ್ಯತ್ವವಾಗಿದೆ. ದಿವ್ಯಕ್ಕೂ ಭವಕ್ಕೂ ಅವಿನಾಭಾವವಾದ ಸಂಬಂಧವಿದೆ, ಆದರೆ ದಿವ್ಯತ್ವವು ಮಾತ್ರ ಸದಾ ಅವಕಾಶವನ್ನೇ ಆಧರಿಸಿಕೊಂಡಿರಲು ಅಭೀಪ್ಸೆ ಪಡುತ್ತದೆ. ಆದರೆ ಈ ಅಭೀಪ್ಸೆ ಈಡೇರಬೇಕೆಂದರೆ ಅದು 'ಜೀವನದ ಅನುಭವದ'ಲ್ಲಿಯೇ ಪಕ್ವವಾಗಿ ಪೂರ್ಣಗೊಳ್ಳಬೇಕಾಗುತ್ತದೆ. ಹೀಗಾಗಿ ಜನನ ಆಕಸ್ಮಿಕ; ಮರಣ ಖಚಿತ ಎನ್ನುವ ಮಾತನ್ನು ಮತ್ತೊಮ್ಮೆ ನಿಕಷಕ್ಕೆ ಒಡ್ಡಬೇಕಾಗಿದೆ. ಮರಣದ ಖಚಿತತೆ ಮಾನವ ಚಿಂತನೆಯ ಊಹೆ. ಆದರೆ ಇದೇ ಆಧಾರದಲ್ಲಿಯೇ ಜನನವೂ ಖಚಿತ ಎನ್ನುವ ಹಂತ ಗೋಚರಿಸುತ್ತದೆ. ಈ ಎರಡೂ ಹಂತಗಳು ವಿಕಾಸದ ಪಥದಲ್ಲಿ ನಡೆಯುವ, ಪರಿಪೂರ್ಣತೆಗಾಗಿ ಪಯಣಿಸುತ್ತಿರುವ ಪ್ರಕ್ರಿಯೆಗಳಾಗಿವೆ. ಹೀಗಾಗಿ ಜನನ–ಮರಣಗಳೆರಡೂ ರೂಪಾಂತರದ ಹಂತಗಳು ಎನ್ನುವದು 'ಅಮರತ್ವದ ಸಾರ'ವಾಗಿದೆ.

ಸಾವು ಎನ್ನುವದು ಸಗುಣ ಬ್ರಹ್ಮನಿಗೂ ತಪ್ಪಿಲ್ಲ. ಇದನ್ನೇ ಶಂಕರಾಚಾರ್ಯರೂ ಸಹಿತ 'ಬ್ರಹ್ಮನೂ ಸಹಿತ ಪಂಚತ್ವವನ್ನು ಹೊಂದುತ್ತಾನೆ'– ಎಂದು ಸೌಂದರ್ಯ ಲಹರಿಯಲ್ಲಿ ಹೇಳುತ್ತಾರೆ. ಅಂದರೆ ಯಾವುದು 'ರೂಪಧಾರಿ'ಯಾಗುತ್ತದೆ ಯೋ, ಆ ರೂಪಕ್ಕೆ ಕಾಲವು/ಸಮಯವು ನಿಗದಿಯಾಗುವದರಿಂದ, ಆ ರೂಪವು ಪರಿವರ್ತನೆ ಹೊಂದಲೇಬೇಕಾಗುತ್ತದೆ. ಈ ಪರಿವರ್ತನೆಯನ್ನು ಮಾನವ ಕುಲವು 'ಮರಣ'ವೆಂದು ಪರಿಗಣಿಸಿಕೊಂಡಿದೆ. ಅಂದರೆ ರೂಪ ಮಾತ್ರ ಬದಲಾಗುವದರಿಂದ ಇದನ್ನು 'ಸಾವು' ಎನ್ನುವ ಬದಲು 'ರೂಪಾಂತರ' ಎನ್ನುವದು ಸೂಕ್ತವಾಗುತ್ತದೆ.

ಆದರೆ ಸಾವನ್ನು ಧೈರ್ಯವಾಗಿ ಎದುರಿಸಿದ ಕೇವಲ ಮೂರು ಘಟನೆಗಳು ಮಾತ್ರ ಇಂದಿಗೂ ಜನಜನಿತವಾಗಿದೆ. ಮೊದಲನೇಯದು ನಚೀಕೇತನ ವಿಷಯ. ಎರಡನೇಯದು ಮಾರ್ಕಾಂಡೇಯ. ಮೂರನೇಯದು 'ಸತ್ಯವಾನ–ಸಾವಿತ್ರಿ'. ಮಾರ್ಕಾಂಡೇಯನಾದರೋ ಶಿವನ ಸಹಾಯದಿಂದ ಸಾವನ್ನು ದೂರ ಮಾಡಿಕೊಂಡವನು. ನಚೀಕೇತನ ವಿಷಯದಲ್ಲಿ ನೇರವಾಗಿ ಸಾವಿನೊಡನೆ ಸಂಭಾಷಿಸಿ ರಹಸ್ಯವನ್ನರಿಯಲು ಯತ್ನಿಸಿದ ಘಟನೆ. ಆದರೆ ಸಾವಿತ್ರಿ ಮಾತ್ರ ತನ್ನ ಪತಿಯ ಸಲುವಾಗಿ ಮೃತ್ಯು ದೇವತೆಯನ್ನೇ ಸೋಲಿಸಿ, ಅಮರತ್ವದ ಪಥವನ್ನು ತೋರಿದವಳು. ಪ್ರಾಣವು ದೇಹದಿಂದ ಹೊರಟ ನಂತರದಲ್ಲಿ, ಅದು ಅಮರತ್ವವಾಗುವ ಎಲ್ಲ ಹಂತಗಳನ್ನೂ 'ಸಾವಿತ್ರಿ'ಯಲ್ಲಿ ಕಾಣುತ್ತೇವೆ.

ಆದರೆ ಸಾವಿನ ಬಗೆಗೆ ಇರುವ ಭಯದಿಂದ, ನಮ್ಮದೇ ಗ್ರಂಥವಾಗಿರುವ 'ಗರುಡ ಪುರಾಣ'ವನ್ನೂ ಸಹಿತ ಅಧ್ಯಯನ ಪರಂಪರೆಯಿಂದ ದೂರವೇ ಇಟ್ಟಿದ್ದೇವೆ. ಆದರೆ ಶ್ರೀ ಅರವಿಂದರು ಈ 'ಜನನ–ಮರಣಗಳ' ಚಕ್ರದಾಚೆ ಅಮರತ್ವ ನೆಲೆಯಲ್ಲಿ ಶಾಶ್ವತವಾಗುವ ಪಥವನ್ನು ತೋರಿಸಿದ್ದಾರೆ.

ನಾನು ಸತ್ತಿದ್ದೇನೆ ಎಂದು ಹೇಳಲು ಯಾರಿಗೂ ಸಾಧ್ಯವಿಲ್ಲ; ಅದೇ ರೀತಿಯಲ್ಲಿ 'ನಾನು ಸತ್ತಿದ್ದೇನೆಯೇ' ಎಂದು ಪ್ರಶ್ನೆ ಕೇಳಲೂ ಸಹಿತ ಸಾಧ್ಯವಿಲ್ಲ. ಬೇರೆ ಯಾರಾದರೂ 'ಆ ವ್ಯಕ್ತಿಯ ಆ ಸ್ಥಿತಿಯ' ಬಗೆಗೆ ಹೇಳಬೇಕಾಗಿದೆ. ಹೀಗಾಗಿ 'ಅವನು ಸತ್ತಿದ್ದಾನೆ' ಎನ್ನುವ ಹೇಳಿಕೆ ಬರುತ್ತದೆ. ಆದರೆ ಈ 'ಅವನು ಸತ್ತಿದ್ದಾನೆ' ಎನ್ನುವ ಮಾತನ್ನು ಕೇಳಿದ ಆತ್ಮವು ನಗೆಯಾಡುತ್ತದೆಯಂತೆ. ಹೀಗಾಗಿ 'ಸಾವಿನ ಸ್ವಯಂ' ಅನುಭವವು ಸಾಧ್ಯವಿಲ್ಲ. ಮತ್ತೊಬ್ಬರ 'ಸಾವಿನ' ಮೂಲಕವೇ 'ಸಾವಿನ ರಹಸ್ಯ'ವನ್ನು ಅರಿಯಬೇಕಾದ ಅಪರೂಪದ ಸಂದರ್ಭವಿದೆ.

ಇಲ್ಲಿ ಸತ್ಯವಾನನ ಸಾವಿನ ಮೂಲಕವೇ 'ಸಾವಿನ ರಹಸ್ಯದ' ಬಗೆಗೆ 'ಸಾವಿತ್ರಿ' ತಿಳಿಸುತ್ತಾಳೆ. ಆದರೆ ಈ 'ಸಾವಿನ' ರಹಸ್ಯವನ್ನು ಅರಿತುಕೊಳ್ಳುವ, ಅದನ್ನು 'ಧರಿಸಿಕೊಳ್ಳುವ ಸಾಮರ್ಥ್ಯ' ಇರುವದು 'ಚೈತನ್ಯಕ್ಕೆ' ಮಾತ್ರ. ಹೀಗಾಗಿ ಇಲ್ಲಿ 'ಸಾವಿತ್ರಿ'ಯನ್ನು ಚೈತನ್ಯವಾಗಿ, ಸತ್ಯವಾನನ್ನು 'ಸಾಕಾರವಾಗಿ' ಅಧ್ಯಯನ ಮಾಡಬೇಕಿದೆ. ಈ ವಿಷಯಕ್ಕೆ ಪೂರವಾಗುವಂತೆ 'ಚೈತನ್ಯದ' ಭಾಷೆ ಮತ್ತು ಸಾಕಾರದ ಭಾಷಾ ವ್ಯವಸ್ಥೆಯನ್ನೂ ಅರಿತುಕೊಳ್ಳಬೇಕಿದೆ. ಜಗತ್ತಿನಾದ್ಯಂತ 'ಸಾವಿನ ಭಯ' ಇದ್ದೇ ಇದೆ. ಆದರೆ ಸಾವನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿರುವ ಉದಾಹರಣೆಗಳು ಕಡಿಮೆ. ನಮ್ಮ 'ಗರುಡ ಪುರಾಣ', ಇಜಿಪ್ತಿನ 'ಕಾ' ಗ್ರಂಥ, ಹಾಗೂ 'ಟಿಬೇಟಿನ ಬುಕ್ ಆಫ್ ಡೆಥ್'ದಂತಹ ಕೆಲವೇ ಕೃತಿಗಳು ಈ ವಿಷಯವಾಗಿ ವಿವರಣೆಗಳನ್ನು ಒದಗಿಸುತ್ತಿವೆ.

ಆದರೆ 'ಸಾವಿತ್ರಿ' ಈ 'ಸಾವಿನ ರಹಸ್ಯವನ್ನು' ಹಾಗೂ ಅದನ್ನು ಗೆಲ್ಲುವ ಸೂತ್ರವನ್ನು ತೋರುತ್ತಿದೆ. ಇದನ್ನು ಸ್ಪಷ್ಟವಾಗಿ;

'ಕಾ'ಲದಂಚಿನಲಿ ಹುಟ್ಟು–ಸಾವಿನಾ ಸಂಕೇತ ತೋರುತಲ್ಲಿ
ಅದು ಚಲಿಸುತಿಹುದು ಅದು ಸುತ್ತುತಿಹುದು ಮಿನುಮಿನುಗು ರೂಪದಲ್ಲಿ
ಜ್ಞಾತ ವಿಶ್ವದಾ ಅಂಚಿನಾಚೆಯಲಿ ಘನನಿಶೆಯ ಒಡಲಿನೊಳಗೆ
ಧಗಧಗಿಸಿ ಸತತ ಜ್ವಾಲೆಯದು ಪ್ರಬಲ ಕ್ರಿಯೆಯನ್ನು ಗೋಳದೊಳಗೆ

**(ಸಾವಿತ್ರಿ; ಪುಟ 56)**

ಎಂದು ವಿವರಣೆ ಇದೆ. ಇದು ಕೇವಲ ಕಾವ್ಯ ಪ್ರತಿಮೆಗಾಗಿ ಸೃಷ್ಟಿಗೊಂಡ ಶಬ್ದಪುಂಜಗಳಲ್ಲ. ಏಕೆಂದರೆ "Mighty Action Blaze" ಎನ್ನುವದು ನಿಜವಾಗಿಯೂ ಅಸ್ತಿತ್ವದಲ್ಲಿದೆ. ನಮ್ಮ ಆಕಾಶ ಗಂಗೆಯ ವ್ಯಾಪ್ತಿಯ ಆಚೆ ದೂರದಲ್ಲಿ ಇರುವ ತೀವ್ರಾತಿತೀವ್ರವಾದ ಕಾಂತಿ ತೇಜವನ್ನು ಬೀರುತ್ತಿರುವ 'ಕ್ವೆಸಾರ್' ಮಾದರಿಯ ಆಕಾಶ ಕಾಯವೊಂದಿದೆ. ಬಹುತೇಕವಾಗಿ ಲಕ್ಷಣಾತೀತವಾಗಿರುವ ಹಂತದ ಇದನ್ನು 1961 ರಲ್ಲಿ ಗುರುತಿಸಲಾಗಿದೆ. 1930 ರ ಸಮಯಕ್ಕೆ ಇದು ಸಾವಿತ್ರಿಯಲ್ಲಿ 'ವ್ಯಾಕೋಚ ವಿಶ್ವದ ಸ್ವರೂಪದ ಸಿದ್ಧಾಂತ'ಕ್ಕೆ ಪುರಾವೆ ಒದಗಿಸಿದೆ. ಇದು ನಕ್ಷತ್ರಗಳ ಜನನದ ತೊಟ್ಟಿಲು ಎಂದೂ ಗುರುತಿಸಲಾಗುತ್ತಿದೆ.

ಈ ಎಲ್ಲ ಆಯಾಮಗಳಲ್ಲಿ 'ಸಾವಿನ ಸ್ವರೂಪ ಹಾಗೂ ಅಮರತ್ವದ ನೆಲೆಯ' ಕುರಿತು ವೈಜ್ಞಾನಿಕ ಸ್ವರೂಪದ ಅಧ್ಯಯನದ ಆಯಾಮದ ಚಿಂತನಾ ಸ್ವರೂಪವನ್ನೂ ರೂಪಿಸಲಾಗಿದೆ. 'ದಿವ್ಯ ಜೀವನ'ದಲ್ಲಿ ಶ್ರೀ ಅರವಿಂದರು ಅಮರತ್ವದ ಕುರಿತ ಮಾಹಿತಿಗಳನ್ನು ನಿರೂಪಿಸಿದ್ದಾರೆ.

**– ಪುಟ್ಟು ಕುಲಕರ್ಣಿ**

ಅನಿರ್ವಚನೀಯ ಪೂರ್ಣಯೋಗದಲಿ ಅನಿಕೇತವಾದ ಯೋಗಿ
ಶಬ್ದ–ಸಂಚಲನ–ಬಂಧ ಬಯಕೆಗಳ ಸಂಬಂಧ ತ್ಯಜಿಸಿ ಸಾಗಿ
ಸೃಷ್ಟಿ ಸಂಕುಲದ ಜೀವ–ಜಾಲಕ್ಕೆ ನಿರ್ಲಿಪ್ತವಾದ ಚಿತ್ತ
ತನ್ಮಯದ ಘನದಿ ತಲ್ಲೀಯಗೊಂಡು ಏಕಾಂತವಾದನಿತ್ತ
ಆತ್ಮದೌನ್ನತ್ಯ ಶಿಖರಗಳ ಶ್ರೇಣಿ–ಶ್ರೇಣಿಗಳ ತಾಣಗಳಲಿ
ನಿತ್ಯ ನಿರ್ಮಲದ ಪಾವಿತ್ರ್ಯ ಪರಮ ಊರ್ಧ್ವಾತಿ ಊರ್ಧ್ವಗಳಲಿ
ದೇದೀಪ್ಯಮಾನ ಶಿವತಾಣದಲ್ಲಿ ನಿರ್ಮಾಯ ಮೌನ ಘನದಿ
ಏಕಾಗ್ರ ಚಿತ್ತ ಚಿದ್ಘನದ ಚೈತ್ಯ ಚಿನ್ಮಯದ ಕಾಂತಿ ಹೊಂದಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 4 ರೇಣು 4 ಪುಟ 382)**

# ಶಾಶ್ವತ ಸಾನಿಧ್ಯ

## ಶ್ರೀ ಅರೋವಿಂದೋರವರ ನಿರ್ಗಮನ

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

*ನನಗೆ ಸ್ವಲ್ಪ ಅರ್ಥವಾಗುತ್ತಿಲ್ಲ. ಶ್ರೀ ಅರವಿಂದೋರವರ ನಿರ್ಗಮನದ ಮೊದಲು ನಿಮಗೆ ಪರಮೋತ್ತಮನ ಅನುಭವವಾಗಿರಲಿಲ್ಲವೇ?*

ಆಧ್ಯಾತ್ಮಿಕವಾಗಿ, ಆಂತರ್ಯದ ದಿವ್ಯತ್ವದ ಸಂಪರ್ಕಕ್ಕೆ ಬಂದ ಕೂಡಲೇ ನಿಮಗೆ ಅದು ಅನುಭವವಾಗುವುದು. ಮನಸ್ಸು ಪರಿಶುದ್ಧವಾಗುತ್ತಿದ್ದಂತೆ ಮಾನಸಿಕವಾಗಿ ಅದು ಅನುಭವ ವೇದ್ಯವಾಗುವುದು. ಭಾವನಾತ್ಮಕವಾಗಿ, ನೀವು ಅಹಂಕಾರದಿಂದ ದೂರ ಸರಿಯುತ್ತಿದ್ದಂತೆ ಪರಮೋತ್ತಮನ ಅನುಭವವನ್ನು ಪಡೆಯುವಿರಿ. ಆದರೆ 'ದೇಹ'ದ ಪ್ರಜ್ಞೆ ಅದಾಗಿದೆ – ಕಣಗಳ ಪ್ರಜ್ಞೆ – ಆ ಕ್ಷಣದಲ್ಲಿ ಕಣಗಳು ಅನುಭವಿಸಿದ ಪ್ರಜ್ಞೆ, ಮಿಕ್ಕಿದ್ದೆಲ್ಲವನ್ನೂ ಬಹಳ ಹಿಂದೆಯೇ ಅನುಭವಿಸಿ ಆಗಿತ್ತು. ನಿರಂತರವಾಗಿ ಅದರ ಬಗ್ಗೆ ಜಾಗರೂಕಳಾಗಿದ್ದೆ, ಆದರೆ ದೇಹ.... ಅದಕ್ಕೆ ಅದರ ಬಗ್ಗೆ ತಿಳಿಸಿಕೊಡಲಾಗಿತ್ತು. ಮತ್ತು ಅದು ಅದನ್ನು ನಂಬಿತ್ತು, ಆದರೆ ಅದಕ್ಕೆ ಸ್ವ–ಅನುಭವವು ಇಷ್ಟು ಸ್ಪಷ್ಟವಾಗಿ, ಸಂಪೂರ್ಣವಾಗಿ, ಸಮಗ್ರವಾಗಿ ಒಂದು ಕ್ಷಣವೂ ಮರೆಯದ ರೀತಿಯಲ್ಲಿ ಆಗಿರಲಿಲ್ಲ.

ಆ ಕ್ಷಣದಲ್ಲಿ, ಭೌತಿಕ ಸತ್ತೆ, ವ್ಯಕ್ತಿಗತವಾಗಿ ಮತ್ತು ಸ್ವಂತ ದೇಹವು ಆ ಅನುಭವವನ್ನು ಒಮ್ಮೆಲೇ ಮತ್ತು ಎಂದೆಂದಿಗೂ ಅನುಭವಿಸಿದವು.

ದೇಹವು ಯಾವಾಗಲೂ ತನ್ನದೇ ಆದ ಸ್ವಂತತೆಯನ್ನು ಹೊಂದಿತ್ತು. ಅದು ಶ್ರೀ ಅರಬಿಂದೋರವರ ಸನ್ನಿಧಿಯ ಚೇತನದೊಂದಿಗೆ ಒಂದಾಗಿತ್ತು. ಯಾವುದೇ ತಳಮಳವು ಲೇಶ ಮಾತ್ರವೂ ಇಲ್ಲದೆ ಅದನ್ನೇ ಅವಲಂಬಿಸಿತ್ತು. ಅದರ ಜೀವವು ಅದನ್ನೇ ಅವಲಂಬಿಸಿದೆ ಎಂದು ಅದು ಭಾವಿಸಿತ್ತು, ಅದರ ಪ್ರಗತಿಗೆ ಅದೇ ಕಾರಣವಾಗಿತ್ತು. ಅದರ ಚೇತನ, ಅದರ ಕ್ರಿಯೆ, ಅದರ ಸಾಮರ್ಥ್ಯ ಎಲ್ಲವೂ ಅದನ್ನೇ ಅವಲಂಬಿಸಿತ್ತು. ಮತ್ತು ಯಾವ ಪ್ರಶ್ನೆಗಳೂ ಇರಲಿಲ್ಲ – ಅದು ಪ್ರಶ್ನಿಸಿರಲಿಲ್ಲ. ಏಕೆಂದರೆ ವಿಷಯಗಳು ಬದಲಾಗಬಹುದು ಬೇರೆ ತರಹ ಇರಬಹುದು ಎಂಬುದು ಅದಕ್ಕೆ ಸಂಪೂರ್ಣವಾಗಿ ಅಸಾಧ್ಯವಾಗಿತ್ತು. ಶ್ರೀ ಅರವಿಂದೋರವರು

ತಮ್ಮ ದೇಹವನ್ನು ತ್ಯಜಿಸಬಹುದು, ತನಗೆ ಆ ನಿರ್ದಿಷ್ಟ ಹಾದಿಯು ಇಲ್ಲವಾಗಬಹುದು ಎಂದು ಚಿಂತಿಸುವುದು ಸಹ ದೇಹಕ್ಕೆ ಅಸಾಧ್ಯವಾಗಿತ್ತು. ಅದು ನಿಜವಾಗಿ ಅನುಭವಿಸಿದೆ ಎಂದು ದೇಹಕ್ಕೆ ಅರಿವಾಗಲು ಅವರು ಆತನನ್ನು ಒಂದು ಪೆಟ್ಟಿಗೆಯೊಳಗೆ ಹಾಕಿ ಸಮಾಧಿಯಲ್ಲಿ (ಆ ಪೆಟ್ಟಿಗೆಯನ್ನು) ಇರಿಸಬೇಕಾಯಿತು.

ಆಗಲೇ ದೇಹಕ್ಕೆ ಆ ಅನುಭವವು ಉಂಟಾದುದು.

ಈ ದೇಹವು ಬಹಳ ಚೇತನಭರಿತವಾಗಿದೆ. ಅದು ಪ್ರಜ್ಞಾಭರಿತವಾಗಿಯೇ ಜನಿಸಿತು. ಇಷ್ಟು ವರ್ಷಗಳ ಕಾಲ ಅದರ ಚೇತನವು ವೃದ್ಧಿಸುತ್ತಲೇ ಇದ್ದಿತು, ತನ್ನನ್ನು ತಾನು ಪರಿಪೂರ್ಣಗೊಳಿಸಿಕೊಳ್ಳುತ್ತಿದ್ದಿತು, ತ್ವರಿತವಾಗಿ ಪ್ರಗತಿ ಹೊಂದುತ್ತಿದೆ ಎನ್ನಿಸುತ್ತಿತ್ತು. ಇದೇ ಅದರ ದೃಢ ಶ್ರದ್ಧೆ, ಮತ್ತು ಅದರ ಸಂತಸ. ಮತ್ತು ಶ್ರೀ ಅರವಿಂದೋರವರೊಂದಿಗೆ, ಎಂತಹ ದೃಢ ಶಾಂತ ನಿಶ್ಚಲ ಭಾವವಿದ್ದಿತು ಯಾವ ಕಷ್ಟಗಳೂ ಇರಲಿಲ್ಲ, ಯಾವ ತೊಂದರೆಗಳೂ ಸಹ ಇರಲಿಲ್ಲ; ಭವಿಷ್ಯವು ತೆರೆದುಕೊಳ್ಳುತ್ತಿದ್ದಿತು, ಪ್ರಕಾಶಮಾನವಾಗಿ ಶಾಂತಿಯುಕ್ತವಾಗಿತ್ತು ಮತ್ತು ಖಾತ್ರಿಯಾಗಿತ್ತು. ಇಲ್ಲ, ಇಲ್ಲ, ಶ್ರೀ ಅರವಿಂದೋರವರು ನಿರ್ಗಮಿಸಿದಾಗ ದೇಹವು ಎಷ್ಟು ಜರ್ಜರಿತವಾಯಿತೆಂಬುದನ್ನು ಪದಗಳಿಂದ ವರ್ಣಿಸಲಾಗದು.

ಆಗ ಶ್ರೀ ಅರವಿಂದೋರವರ ಪ್ರಜ್ಞಾಭರಿತ ಸಂಕಲ್ಪವು, ಅದನ್ನು ಪ್ರವೇಶಿಸಿತು – ಒಂದು ದೇಹವನ್ನು ತೊರೆದು ಮತ್ತೊಂದು ದೇಹವನ್ನು ಪ್ರವೇಶಿಸಿತ್ತು.... ಹೀಗಾಗಿ ನಾನು ಆತನ ದೇಹದ ಮುಂದೆ ನಿಂತುಕೊಂಡಿದ್ದೆ. ನಿಮಗೆ ಗೊತ್ತೇ! ಆತನ ಸಂಕಲ್ಪ ಮತ್ತು ಜ್ಞಾನವು ನನ್ನನ್ನು ಪ್ರವೇಶಿಸಿದಾಗ ನಾನು ಭೌತಿಕವಾಗಿ ಘರ್ಷಣೆಯನ್ನು ಅನುಭವಿಸಿದೆ; "ನೀನು ನನ್ನ ಕೆಲಸವನ್ನು ಸಾಧಿಸುವೆ." ಅವರು ನನ್ನ ಈ ದೇಹಕ್ಕೆ ಹೇಳಿದರು: "ನೀನು ನನ್ನ ಕೆಲಸವನ್ನು ಪೂರ್ಣಗೊಳಿಸುವೆ." ಅದೇ ನನ್ನನ್ನು ಜೀವಂತವಾಗಿ ಉಳಿಸಿದ್ದು.

ಇದರ ಹೊರತಾಗಿ.... ಇನ್ನೇನು ಇಲ್ಲ, ಆ ಕುಸಿತಕ್ಕೆ ಹೋಲಿಸಿದರೆ ನಾನು ಯೋಚಿಸಬಹುದಾದ ಯಾವುದೇ ಭೌತಿಕ ನಾಶವೂ ಇಲ್ಲ.

ಇದರಿಂದ ಹೊರಬರಲು ನನಗೆ 12 ದಿನಗಳು ಬೇಕಾದವು – 12 ದಿನಗಳು ಆ ಸಮಯದಲ್ಲಿ ನಾನು ಒಂದು ಪದವನ್ನೂ ಸಹ ಮಾತನಾಡಲಿಲ್ಲ.

ಆದುದರಿಂದ ನಾನು ಸೂಚಿಸಿರುವ ಅನುಭವವು ಭೌತಿಕವಾಗಿ ಸತ್ಯವಾದುದು.

(ಮೌನ)

ಅಮರ್ತ್ಯತೆ, ಶಾಶ್ವತತೆ, ಸಂಪೂರ್ಣ ರಕ್ಷಣೆಯ ಧೃಡ ನಂಬಿಕೆಗಳ ಪ್ರಜ್ಞೆಯನ್ನು ಈ ದೇಹಕ್ಕೆ ನೀಡಲು ಆತನು ಶ್ರಮಿಸುತ್ತಿದ್ದಾನೆ – ಭೌತ ವಸ್ತುವಿನಲ್ಲಿ, ಪ್ರಾಣದಲ್ಲಿ ಪ್ರತಿಯೊಂದು ಕ್ಷಣದ ಕ್ರಿಯೆಯಲ್ಲಿ. ಅದು ಹೆಚ್ಚು ಹೆಚ್ಚು ಹತ್ತಿರವಾಗುತ್ತಿದೆ ಮತ್ತು ಹೆಚ್ಚು ಹೆಚ್ಚು ಸ್ಥಿರವಾಗುತ್ತಿದೆ. ನಿಧಾನವಾಗಿ, ಹಳೆಯ ಪ್ರಭಾವಗಳ ಮಿಶ್ರಣವು ಕಾಣದಾಗುತ್ತಿದೆ – ಅದೇ ತಳಹದಿ, ಪರಿವರ್ತನೆಯ ಮೂಲ.

**– ಶಿಷ್ಯನೊಡನೆ ಸಂಭಾಷಣೆ, 4 ಡಿಸೆಂಬರ್, 1962**

## ಸೂಕ್ಷ್ಮ ಬೌದ್ಧಿಕದಲ್ಲಿ ಶ್ರೀ ಅರವಿಂದೋರವರು

*(ಶ್ರೀ ಅರವಿಂದೋರವರ 90ನೇ ಜನ್ಮದಿನ ಆಗಸ್ಟ್ 15 ರಂದು ಮಾಡಿದ ಸಾಮೂಹಿಕ ಧ್ಯಾನದ ಬಗ್ಗೆ ಶ್ರೀಮಾತೆಯವರು ಮಾತನಾಡಿದರು.)*

ಸೋಮವಾರ 15ನೇ ತಾರೀಖು ಹತ್ತು ಗಂಟೆಗೆ ಚಿಕ್ಕದೊಂದು ಧ್ಯಾನವನ್ನು ನಾವು ಇಲ್ಲಿ ಮಾಡಿದೆವು. ಒಂಭತ್ತು ಮುಕ್ಕಾಲು ಗಂಟೆಗೆ ಸಂಪೂರ್ಣ ಮೌನವಾಗಿ ನಾನು ಇಲ್ಲಿ ಮೇಜಿನ ಮುಂದೆ ಕುಳಿತಿದ್ದೆನು. ನಂತರದಲ್ಲಿ.... ಶ್ರೀ ಅರವಿಂದೋರವರು ಬಂದರೆಂದು ನಾನು ಹೇಳಲಾರೆ ಏಕೆಂದರೆ ಅವರು ಯಾವಾಗಲೂ ಇಲ್ಲಿ ಇರುವರು. ಆದರೆ ಅಲ್ಲಿ ಒಂದು ವಿಶಿಷ್ಟ ರೂಪದಲ್ಲಿ ಪ್ರಕಟವಾದರು.... ಅತ್ಯಧಿಕ ದೃಢವಾಗಿ, ಸೂಕ್ಷ್ಮ ಭೌತಿಕದಲ್ಲಿ, ಅವರು ಎಷ್ಟು ಉದ್ದವಾದರೆಂದರೆ ಇಲ್ಲಿಯ ಜನರು ಕುಳಿತುಕೊಳ್ಳುವ ಹಾಗೆ ಪದ್ಮಾಸನದಲ್ಲಿ ಕುಳಿತಾಗ, ಅವರು ಕಟ್ಟಡದ ಇಡೀ ಆವರಣವನ್ನು ವ್ಯಾಪಿಸಿದ್ದು – ಸ್ವಲ್ಪ ಅದನ್ನೂ ದಾಟಿ ಮುಂದೆಯೂ ಇದ್ದರು! ಅವರು ಅಕ್ಷರಶಃ ಆವರಣದ ಮೇಲೆ ಕುಳಿತಿದ್ದರು, ಎಲ್ಲಿಯವರೆಗೆಂದರೆ ಧ್ಯಾನ ಮಾಡುತ್ತಿದ್ದ ಜನರು ಮುಚ್ಚಿ ಹೋಗಿರಲಿಲ್ಲ, ಅವರೆಲ್ಲರೂ ಆತನ ಅಂತರ್ಯದಲ್ಲಿಯೇ ಇದ್ದರು. ಆತನು ಅಲ್ಲಿ ಹಾಗೆ ಕುಳಿತಿದ್ದನು. (ಅವರ ತಲೆಯ ಮೇಲೆ ಅಲ್ಲ!) (ನಾನು ಇಲ್ಲಿಯೇ ಇದ್ದೆ, ನಿನಗೆ ಗೊತ್ತಲ್ಲಾ) ಸೂಕ್ಷ್ಮ ಭೌತಿಕದಲ್ಲಿ ಅವರ ಸನ್ನಿಧಿಯ ಸಂಘರ್ಷವನ್ನು ನಾನು ಅನುಭವಿಸುತ್ತಿದ್ದೆನು. – ಅತ್ಯಧಿಕವಾದ ಭೌತಿಕ ಸಂಘರ್ಷಣೆ! ಮತ್ತು ನಾನು ಆತನನ್ನು ನೋಡಿದೆ. (ಹೀಗೆ ನಿನಗೆ ಚೆನ್ನಾಗಿ ಗೊತ್ತಿದೆ, ನಾನು

ಇದರೊಳಗೆ (ದೇಹ) ಮುಚ್ಚಿ ಹೋಗಿಲ್ಲ.) ಆತನು ಅಲ್ಲಿ ಕುಳಿತಿರುವುದನ್ನು ನಾನು ನೋಡಿದೆ, ಬಹಳ ಎತ್ತರವಾಗಿ ಮತ್ತು ಪರಿಪೂರ್ಣ ಪ್ರಮಾಣವನ್ನು ಅವರು ಹೊಂದಿದ್ದರು. ನಂತರ ಅವರು ನಿಧಾನವಾಗಿ, ನಿಧಾನವಾಗಿ ಅವರೋಹಣ ಮಾಡಲು ಪ್ರಾರಂಭಿಸಿದರು – ಸಂಘರ್ಷವನ್ನು ಉಂಟುಮಾಡಿದ್ದು ಈ ಅವರೋಹಣವೇ – ನಿಧಾನವಾಗಿ, ಬಹಳ ನಿಧಾನವಾಗಿ, ಜನರಿಗೆ ಗಾಭರಿಯುಂಟಾಗದಿರಲೆಂದು, ನಂತರ ಅವರು ಅಲ್ಲಿ ಉಪಸ್ಥಿತರಾದರು ಮತ್ತು ಅರ್ಧ ಗಂಟೆಗೂ ಹೆಚ್ಚು ಕಾಲ ಅಲ್ಲೇ ಇದ್ದರು. ಅದೇ ತರಹ, ಸಂಪೂರ್ಣವಾಗಿ ನಿಶ್ಚಲರಾಗಿ, ಆದರೆ ಎಲ್ಲಾ ಜನರ ಮೇಲೆ ಅವರ ಗಮನ ಕೇಂದ್ರೀಕೃತವಾಗಿದ್ದಿತು – ಜನರು ಅವರ ಒಳಗೆ ಇದ್ದರು.

ನಾನು ಇಲ್ಲಿ ಮುಗುಳ್ನಗುತ್ತಾ ಕುಳಿತಿದ್ದೆ, ಬಹುಪಾಲು.... ಬಹುಪಾಲು ನಗುತ್ತಾ, ನಿಜಕ್ಕೂ; ಎಲ್ಲಾ ಕಡೆ ಆತನನ್ನು ಹಾಗೆ ಅನುಭವಿಸಿಸಬಹುದಾಗಿತ್ತು (ಶ್ರೀಮಾತೆಯವರು ತಮ್ಮ ಇಡೀ ದೇಹವನ್ನು ಸ್ಪರ್ಶಿಸಿದರು), ಎಲ್ಲಾ ಕಡೆ. ಮತ್ತು ಎಂತಹ ಶಾಂತಿಯೊಂದಿಗೆ! ಎಂತಹ ಶಾಂತಿ, ಎಂತಹ ಶಕ್ತಿ, ಎಂತಹ ಸಾಮರ್ಥ್ಯ.... ಮತ್ತು ನಿರಂತರತೆ ಅಗಾಧತೆ ಮತ್ತು ಸಮಗ್ರತೆಯ ಭಾವದೊಂದಿಗೆ. ಒಂದು ಸಮಗ್ರತೆಯ ಅನುಭವ, ನಿಜ ಹೇಳಬೇಕೆಂದರೆ, ಎಲ್ಲವೂ ಪೂರ್ಣವಾಯಿತೋ ಎಂಬಂತೆ, ಮತ್ತು ನಿರಂತರತೆಯಲ್ಲಿ ಜೀವಿಸುತ್ತಿರುವ ರೀತಿಯಲ್ಲಿ.

ಅದು ಪ್ರೇರೇಪಿಸುತ್ತಿತ್ತು. ಅದನ್ನು ಅನುಭವಿಸದಿರಲು ಯಾರಾದರೂ ಸಾಧಾರಣ ಗಾಢವಾಗಿ ಇರಬೇಕಿತ್ತಷ್ಟೇ.

ಅಲ್ಲಿ ಗಾಢವಾದ ಹೆಚ್ಚು ಜನರು ಇರಲಿಲ್ಲ ಎಂದು ನಾನು ಹೇಳುತ್ತಿಲ್ಲ. ನನಗೆ ಗೊತ್ತಿಲ್ಲ (ನಗುತ್ತಾ), ನಾನು ಅವರ ಅಭಿಪ್ರಾಯವನ್ನು ವಿಚಾರಿಸಿಲ್ಲ!

ಮತ್ತು ನಂತರದಲ್ಲಿ ಅವರು ಇದ್ದಕ್ಕಿದ್ದಂತೆ ಹೊರಟು ಹೋದರು ಎಂದೇನು ಇಲ್ಲ. ಅವರು ನಿಧಾನವಾಗಿ, ನಿಧಾನವಾಗಿ, ನಿಧಾನವಾಗಿ, ಆವಿಯಾಗಿ ಹೋಗುತ್ತಿದ್ದಂತೆ, ನಂತರ ಎಲ್ಲವೂ ಸಾಮಾನ್ಯ ಸ್ಥಿತಿಗೆ ಮರಳಿದವು, ಅಲ್ಲಿ ಇಲ್ಲಿ ವಿವಿಧ ಕೇಂದ್ರೀಕರಣಗಳೊಂದಿಗೆ ವಿವಿಧ ಚಟುವಟಿಕೆಗಳು....

ಕೆಲವು ಜನರು ಅದನ್ನು ಅನುಭವಿಸಿದರು ಎಂದು ನನಗೆ ಅನ್ನಿಸುವುದು – ಅವರಿಗೆ ಪೂರ್ತಿಯಾಗಿ ಅರ್ಥವಾಗದಿರಬಹುದು, ಏಕೆಂದರೆ ಅವರಿಗೆ ಸಂಪೂರ್ಣ

ದೃಷ್ಟಿ ಇಲ್ಲ. ಆದರೆ ಆತನು ಅವರೊಳಗೆ ಅವರೋಹಣ ಮಾಡುತ್ತಿದ್ದಾನೆ ಎಂದು ಅವರಿಗೆ ಅನಿಸಿರಬಹುದು. ಏಕೆಂದರೆ ಮಧ್ಯಾಹ್ನದಲ್ಲಿ, ಎಲ್ಲವೂ ಸಹಜ ಸ್ಥಿತಿಗೆ ಮರಳಿದಾಗ (ಅವರು ಇಲ್ಲಿ ಯಾವಾಗಲೂ ಇರುವುದಂತೂ ನಿಜ, ಆದರೆ ಆ ರೀತಿಯಲ್ಲಿ ಅಲ್ಲ! ಆತನು ಇಲ್ಲಿ ಯಾವಾಗಲೂ ಇರುವನು), ವಾತಾವರಣದಲ್ಲಿ ಒಂದು ವಿಧದ ವಿಷಾದ ಛಾಯೆಯ ಅಲೆ ಚಲಿಸುತ್ತಿತ್ತು, ಹೀಗೆ ಹೇಳುತ್ತಿದ್ದಂತೆ ಇದ್ದಿತು, "ಓ ಈ ಸುಂದರವಾದ ವಿಷಯ ಮುಗಿದು ಹೋಯಿತೇ! ಓ ಈಗ ಆಗಸ್ಟ್ 15 ಮುಗಿದು ಹೋಯಿತು, ಈ ಸುಂದರವಾದ ವಿಷಯ ಅಂತ್ಯವಾಯಿತು." ಆದರೆ ಅದು ನಾನು ವಿವರಿಸಿದ ರೀತಿಯಲ್ಲಿ ಇದ್ದಿತು, ಸ್ವಲ್ಪ.... ಅತ್ಯಧಿಕವಾಗಿ ಸ್ಥಿರವಾಗಿರುವುದಕ್ಕಿಂತಲೂ ಹೆಚ್ಚಾಗಿ, ಹೇಗೆ ವ್ಯಕ್ತಪಡಿಸುವದೆಂದು ನನಗೆ ಗೊತ್ತಿಲ್ಲ, ಅದು ಹಾಗೆ ಇದ್ದಿತು.... ಅದು ಸಮಗ್ರತೆಯ ಭಾವವನ್ನು ಹೊಂದಿತ್ತು.

ನಾನು ಅವರನ್ನು ಸುಪ್ರಮಾನಸ ಬೆಳಕಿನ ಸ್ಥಿತಿಯಲ್ಲಿ ಅನೇಕ ಸಲ ನೋಡಿರುವೆ; ಅವರು ಅನೇಕ ಸಲ ಬಂದಿರುವರು (ನಾನು ಮಹಡಿಯ ಉಪ್ಪರಿಗೆ ಮೇಲೆ ಹೋದಾಗ ಅವರು ಬರುತ್ತಿದ್ದರು. ಕೆಲವು ವೇಳೆ ಅವರು ಸಮಾಧಿಯ ಮೇಲೆ ಇರುತ್ತಿದ್ದರು, ಅವರು ಅನೇಕ ಸಲ ಬರುತ್ತಿದ್ದರು). ಆದರೆ ಅದು.... ಮೊಟ್ಟಮೊದಲಿಗೆ, ಪ್ರಮಾಣಗಳು ಅಗಾಧವಾಗಿದ್ದವು.... ಕುಳಿತುಕೊಂಡಿದ್ದರು, ನಾನು ನಿನಗೆ ಹೇಳುತ್ತಿದ್ದೇನೆ ಅವರು ಆವರಣದ ಕಟಕಟಿಯ ಹೊರಗೆಯೂ ಸಹ ವ್ಯಾಪಿಸಿದ್ದರು. ಮತ್ತು ಅದನ್ನು **ಭೌತಿಕವಾಗಿ** ಅನುಭವಿಸುವ ರೀತಿಯಲ್ಲಿ ಅವರು ಪ್ರಕಟವಾಗಿದ್ದರು. ಮತ್ತು ಎಂತಹ ಭರವಸೆಯಿದ್ದಿತು, ಎಂತಹ ಸಂತಸ, ಎಂತಹ ದೃಢತೆ, ಎಲ್ಲವೂ ಎಷ್ಟು ನಿಖರವಾಗಿ ಇದ್ದಿತು, ಆದುದರಿಂದ ಒಟ್ಟಾರೆ ಎಲ್ಲಾ ನಿಶ್ಚಯವಾಗಿದೆ, ಎಲ್ಲವನ್ನೂ ಸಾಧಿಸಿ ಆಯಿತೇನೋ ಎಂಬಂತೆ. ಯಾವ ಆತುರವೂ ಇರಲಿಲ್ಲ, ಕೆಲಸದ ಬಗ್ಗೆ ಆತಂಕವೂ ಇರಲಿಲ್ಲ.

ಮುಕ್ಕಾಲು ಗಂಟೆಯ ಕಾಲ ಇದು ಮುಂದುವರೆಯಿತು; ನಂತರ ಎಲ್ಲವೂ ಸಾಮಾನ್ಯ ಸ್ಥಿತಿಗೆ ಹಿಂದಿರುಗಿದವು.

ನಾವು ಅನುಭವಿಸಿದ ಅತ್ಯಂತ ಸುಂದರ ಆಗಸ್ಟ್ 15ನೇ ತಾರೀಕು ಅದಾಗಿತ್ತು.

**– ಶಿಷ್ಯನೊಡನೆ ಸಂಭಾಷಣೆ, 18 ಆಗಸ್ಟ್, 1962**

## ಒಂದು ಮನೆಯಿಂದ ಇನ್ನೊಂದಕ್ಕೆ

ಆದರೆ ಜನರು ಎಷ್ಟು ಅಜ್ಞಾನಿಗಳಾಗಿರುವರು! ಅವರು ಮರಣದ ಬಗ್ಗೆ ಎಷ್ಟು ಗಾಭರಿಯನ್ನು ಹೊಂದಿರುವರು, ಅದೇ ಅಂತ್ಯವೇನು ಎಂಬಂತೆ – ಈ ಪದ 'ಮರಣ' ಎಷ್ಟು ಅಸಂಬದ್ಧವಾದುದು! ಸರಳವಾಗಿ ನಾನು ಅದು ಒಂದು ಮನೆಯಿಂದ ಮತ್ತೊಂದಕ್ಕೆ ಚಲಿಸುವಿಕೆ ಎಂಬುದಾಗಿ ಭಾವಿಸುವೆ ಅಥವಾ ಒಂದು ಕೊಠಡಿಯಿಂದ ಮತ್ತೊಂದಕ್ಕೆ ಚಲಿಸುವದು; ನೀನು ಒಂದು ಸರಳ ಹೆಜ್ಜೆಯನ್ನು ಮುಂದಿಡು, ನೀನು ಹೊಸ್ತಿಲನ್ನು ದಾಟುವೆ, ನೀನು ಮತ್ತೊಂದು ಬದಿಗೆ ಹೋಗುವೆ – ಮತ್ತು ನಂತರ ನೀನು ಹಿಂದಿರುಗುವೆ.

ಸೂಕ್ಷ್ಮ ಭೌತಿಕದಲ್ಲಿ ಶ್ರೀ ಅರವಿಂದೋರವರ ಮನೆಯೊಳಗಡೆಗೆ ಇದ್ದಕ್ಕಿದ್ದಂತೆ ನಾನು ಪ್ರವೇಶಿಸಿದ ಅನುಭವವನ್ನು ನಿಮಗೆ ತಿಳಿಸಿರುವೆನಾ?

ಒಳ್ಳೆಯದು, ಅದು ಭೌತಿಕಕ್ಕಿಂತಲೂ ಇನ್ನೂ ಹೆಚ್ಚು ಸ್ಥಿರವಾದ ಪ್ರಪಂಚವನ್ನು ನಾನು ಪ್ರವೇಶಿಸಿದಂತೆ ಇದ್ದಿತು – ಹೆಚ್ಚು ಸ್ಥಿರ ಏಕೆಂದರೆ ಅಲ್ಲಿಯ ವಸ್ತುಗಳು ಹೆಚ್ಚು ಸ್ಥಿರತೆಯನ್ನು ಹೊಂದಿವೆ. ನಾನು ಅಲ್ಲಿ ಶ್ರೀ ಅರಬಿಂದೋರವರೊಂದಿಗೆ ಹೆಚ್ಚು ಸಮಯವಿದ್ದೆನು. ನಂತರದಲ್ಲಿ, ಅದು ಮುಗಿದಾಗ ನಾನು ಮತ್ತೊಂದು ಹೆಜ್ಜೆ ಮುಂದುವರಿದಾಗ ನಾನು ಇಲ್ಲಿಗೆ ಹಿಂದಿರುಗಿದೆ.... ಸ್ವಲ್ಪ ಮೂಕ ವಿಸ್ಮಿತಳಾದೆ. ಇಲ್ಲಿ ನನ್ನ ಕಾರ್ಯಗಳಿಗೆ ಹಿಂತಿರುಗಲು ಸ್ವಲ್ಪ ಕಾಲ ಬೇಕಾಯಿತು ಏಕೆಂದರೆ ಅದಕ್ಕಿಂತಲೂ ಈ ಲೋಕವೇ ಹೆಚ್ಚು ಅವಿಶ್ವಸನೀಯವಾಗಿ ಇದ್ದಿತು.

ಆದರೆ ಸರಳವಾಗಿ ಹೇಳಬೇಕೆಂದರೆ – ನೀನು ಒಂದು ಹೆಜ್ಜೆಯನ್ನು ಇಟ್ಟಾಗ, ಮತ್ತೊಂದು ಕೊಠಡಿಯನ್ನು ಪ್ರವೇಶಿಸುವೆ. ಮತ್ತು ನೀನು ನಿನ್ನ ಜೀವದಲ್ಲಿ ಜೀವಿಸಿದರೆ, ಒಂದು ನಿರಂತರತೆಯು ಇರುವುದು, ಏಕೆಂದರೆ ಜೀವವು ನೆನಪಿನ ಶಕ್ತಿಯನ್ನು ಹೊಂದಿದೆ, ಅದು ಸಂಪೂರ್ಣವಾಗಿ ಜ್ಞಾಪಕ ಇರಿಸಿಕೊಳ್ಳುವುದು; ಬಾಹ್ಯ ಘಟನೆಗಳೂ ಸಹ ಒಳಗೊಂಡಂತೆ ಎಲ್ಲಾ ಘಟನೆಗಳ ನೆನಪು ಅದಕ್ಕೆ ಇರುವುದು. ಅದಕ್ಕೆ ಸಂಬಂಧಿಸಿದ ಎಲ್ಲಾ ಬಾಹ್ಯ ಚಲನೆಗಳೂ ಅದಕ್ಕೆ ತಿಳಿದಿರುವುದು. ಆದ್ದರಿಂದ ಇದು ಒಂದು ನಿರಂತರವಾದ ತಡೆಯಿಲ್ಲದ ಚಲನೆ, ಇಲ್ಲಿ ಮತ್ತು ಅಲ್ಲಿ, ಒಂದು ಕೋಣೆಯಿಂದ ಮತ್ತೊಂದು ಕೋಣೆಗೆ, ಒಂದು ಮನೆಯಿಂದ ಮತ್ತೊಂದು ಮನೆಗೆ, ಒಂದು ಜೀವನದಿಂದ ಮತ್ತೊಂದಕ್ಕೆ.

ಜನರು ಎಷ್ಟು ಅರಿವಿಲ್ಲದವರಾಗಿರುವರು! ಮತ್ತೊಂದು ಬದಿಗೆ ಸಾಗಿ ಹೋದವರಿಗೆ ಇದು ಬಹಳ ವೇದನೆಯನ್ನು ಉಂಟುಮಾಡುವುದು – ಜನರಿಗೆ ಅರ್ಥವಾಗುವದಿಲ್ಲ, ಜನರು ಅವರನ್ನು ಹೊರಗೆ ನೂಕಿಬಿಡುವರು: ಅವನಿಗೆ ಏನು ಬೇಕಾಗಿದೆ? ಅವನು ನನಗೇಕೆ ತೊಂದರೆ ಕೊಡುತ್ತಿರುವನು? "ಅವನು ಸತ್ತು ಹೋಗಿದ್ದಾನೆ!"

**– ಶಿಷ್ಯನೊಡನೆ ಸಂಭಾಷಣೆ, 24 ಜೂನ್, 1961**

**ಬದಲಾವಣೆ ಆಗಿಹೋಗಿದೆ**

ನಾನು ಈಗ ನೋಡುತ್ತಿರುವೆ, ಅವರು ಸೂಕ್ಷ್ಮ ಭೌತಿಕದೊಳಗಡೆಗೆ ನಿರ್ಗಮಿಸಿ ಬೃಹತ್ತಾದ ಮತ್ತು ನಿರಂತರವಾದ ಕಾರ್ಯವನ್ನು ಕೈಗೊಂಡಿದ್ದಾರೆ. ಅದು ಎಷ್ಟು ನೆರವಾಗುತ್ತಿದೆ ಎಂಬುದನ್ನು ನಾನು ಈಗ ವೀಕ್ಷಿಸುತ್ತಿರುವೆ (ಭೌತವನ್ನು ತೀಡುವ ಸನ್ನೆಯನ್ನು ಶ್ರೀಮಾತೆಯವರು ಮಾಡಿದರು) ಅದು ವಸ್ತುಗಳನ್ನು ಸಿದ್ಧಪಡಿಸಲು ಎಷ್ಟು ನೆರವಾಯಿತು, ಭೌತಿಕ ರಚನೆಯನ್ನು ಬದಲಾಯಿಸಲು ಎಷ್ಟು ಸಹಾಯ ಮಾಡಿತು. ಉನ್ನತ ಲೋಕಗಳನ್ನು ಸಂಪರ್ಕಿಸಲು ಇತರ ಅನೇಕರು ಪ್ರಯತ್ನಿಸಿದರು.

ಅವರು ಹೊಂದಿದ ಎಲ್ಲಾ ಅನುಭವಗಳು ಕೆಳಗಿನ ಭೌತಿಕವನ್ನು ಅದು ಇದ್ದ ಸ್ಥಿತಿಯಲ್ಲೇ ಇರಿಸಿದವು.... ಹೇಗೆ ಹೇಳುವದು? ಮೇಲೇರಿ ಹೋಗುವ, ಅರಿಯುವ, ಎಲ್ಲಾ ಅನುಭವಗಳನ್ನು ಹೊಂದುವ ಚೇತನದಲ್ಲೇ ನಾನು ನನ್ನ ಜೀವನದ ಪ್ರಾರಂಭದಿಂದ ಶ್ರೀ ಅರವಿಂದೋರವರ ನಿರ್ಗಮನದವರೆಗೂ ಇದ್ದೆನು (ನಿಜಕ್ಕೂ ನಾನು ಅನುಭವಗಳನ್ನು ಪಡೆದೆನು), ಆದರೆ ಈ ದೇಹದೊಳಗೆ ಮರಳಿ ಬಂದಾಗ.... ಅದೇ ಭೀಕರ ಹಳೆಯ ಮಾನಸಿಕ ನಿಯಮಗಳು ವಸ್ತುಗಳ ಆಳ್ವಿಕೆಯನ್ನು ಮಾಡುತ್ತಿದ್ದವು. ಮತ್ತು ನಂತರದಲ್ಲಿ, ಈ ಎಲ್ಲಾ ವರ್ಷಗಳೂ ಸಿದ್ಧತೆಯ ಕಾಲವಾಗಿತ್ತು – ಸಿದ್ಧತೆ – ಬಿಡುಗಡೆ ಮತ್ತು ಸಿದ್ಧತೆ, ಮತ್ತು ಈ ದಿನಗಳು ಈಗ – ಓ! ಭೌತಿಕ ಗುರುತಿಸುವಿಕೆ, ತಾನು ಬದಲಾಗಿರುವೆನೆಂದು ದೇಹವು ಅರಿಯುವುದು.

ಇದು "ಕ್ರಿಯಾಶೀಲವಾಗಬೇಕು" ಎಂದೇ ಹೇಳುವುದು. ಎಲ್ಲಾ ವಿವರಣೆಗಳೊಂದಿಗೆ ಇದನ್ನು ಅರ್ಥ ಮಾಡಿಕೊಂಡು ಅರಿಯಬೇಕು. ಆದರೆ ಬದಲಾವಣೆ ಆಗಿದೆ – ಬದಲಾವಣೆ ಆಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/229** **– ಶ್ರೀಮಾತೆ**

## ಶ್ರೀ ಅರವಿಂದೋರವರ ಕ್ರಿಯೆಯು ಇನ್ನೂ ಹೆಚ್ಚು ಪ್ರಭಾವಶಾಲಿಯಾಗಿದೆ (ದೃಢವಾಗಿದೆ)

ಕ್ರಿಯೆಯ ಶಕ್ತಿಯಲ್ಲಿ ಒಂದು ವ್ಯತ್ಯಾಸವಿದೆ. ಈಗ ಆತನು ಸ್ವತಃ ದೇಹದಲ್ಲಿ ಇದ್ದಾಗಲಿಗಿಂತ ಹೆಚ್ಚು ಸಾಮರ್ಥ್ಯ ಮತ್ತು ಕ್ರಿಯಾ ಶಕ್ತಿಯನ್ನು ಹೊಂದಿದ್ದಾನೆ, ಜೊತೆಗೆ, ಅದಕ್ಕಾಗಿಯೇ ಆತನು ನಿರ್ಗಮಿಸಿದ್ದು, ಏಕೆಂದರೆ ಆ ರೀತಿ ಕೆಲಸ ಮಾಡುವುದು ಅವಶ್ಯಕವಾಗಿತ್ತು.

ಅದು ಬಹಳ ದೃಢವಾಗಿದೆ. ಆತನ ಕ್ರಿಯೆಯು ಅತಿ ಹೆಚ್ಚು ದೃಢತೆಯನ್ನು ಪಡೆಯುತ್ತಿದೆ. ಸ್ಪಷ್ಟವಾಗಿ ಅದು ಮಾನಸಿಕವಾದುದಲ್ಲ. ಅದು ಬೇರೆಯದೇ ಪ್ರದೇಶಕ್ಕೆ ಸೇರಿದುದಾಗಿದೆ. ಆದರೆ ಅದು ಹಗುರವಾಗಿಲ್ಲ ಅಥವಾ.... ಅದು ವಾಸ್ತವವಾಗಿದೆ. ನಿಜಕ್ಕೂ, ಅದು ಭೌತಿಕವಾಗಿದೆ ಎಂದೇ ಹೇಳಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/329**

## ಎಂದಾದರೂ, ಏನಾದರೂ ನಿಮ್ಮನ್ನು ಪೀಡಿಸಿದರೆ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

ಸಂಭವಿಸುವುದೆಲ್ಲವನ್ನೂ ನೀವು ಗಮನಿಸಲು ಕಲಿತುಕೊಳ್ಳಲೇಬೇಕು, ಜರುಗುವುದೆಲ್ಲವನ್ನೂ ನೀವು ಎಡಬಿಡದೆ ಗಮನಿಸಬೇಕು ಮತ್ತು ನಿಮ್ಮ ಪ್ರಗತಿಗೆ ಉಪಯುಕ್ತವಾದ ಎಲ್ಲವನ್ನೂ ನೀವು ಸಮಚಿತ್ತದೊಂದಿಗೆ ಸ್ವೀಕರಿಸಬೇಕು. ಅತ್ಯಂತ ಮಹತ್ವವಾದದ್ದು ಈ ಗಮನಿಸುವಿಕೆಯಾಗಿದೆ ಮತ್ತು ಇದು ಯಾವಾಗಲೂ (ಉಳಿದ ಮಹತ್ವದ ಸಂಗತಿಗಳಿಗೆ) ಸಮಾನವಾದದ್ದು. (ಶ್ರೀಮಾತೆಯವರು ತಮ್ಮ ಕೈಯಿಂದ ಅಡ್ಡ ಚಲನೆಯ ಸನ್ನೆ ಮಾಡುತ್ತಾರೆ.) ನಾವು ವ್ಯಾಕುಲಗೊಳ್ಳಬಾರದು ಅಥವಾ ಪರಿಣಾಮಗಳ ಬಗ್ಗೆ ಆತಂಕಗೊಳ್ಳಬಾರದು, – ಆಗ ಸಂಗತಿಗಳು ತಮ್ಮಷ್ಟಕ್ಕೆ ತಾವೇ ಉತ್ತಮ ರೀತಿಯಲ್ಲಿ ಅಣಿಗೊಳ್ಳುವುದನ್ನು ನೀವು ಕಾಣುವಿರಿ, ಮತ್ತು ನಿಮ್ಮ ಆಂತರಿಕ ಸ್ಥಿತಿಯ ನಿಶ್ಯಬ್ದತೆಯಲ್ಲಿ ಒಂದು ಸೂಚನೆಯನ್ನು ಮತ್ತು ಉತ್ತರವನ್ನೂ ಸಹ ನೀವು ಪಡೆದುಕೊಳ್ಳುವಿರಿ ಸಹ.

**ದೈವಾನುಗ್ರಹದ ಹಾರೈಕೆ: 119–121**

**ಸಮಾಧಿಯ ಬಗ್ಗೆ ಶ್ರೀಮಾತೆಯವರು**

ಸಮಾಧಿಯನ್ನು ನೋಡುತ್ತಿರುವಾಗ: ನಾನು ಪೂಜಿಸಲ್ಪಡಲು ಬಯಸುವುದಿಲ್ಲ. ನಾನು ಬಂದಿದ್ದು (ದೈವೀ ಕಾರ್ಯ) ಕೆಲಸ ಮಾಡಲು, ಪೂಜಿಸಲ್ಪಡಬೇಕೆಂದು ಅಲ್ಲ; ಹೃದಯ ತಣಿಯುವವರೆಗೂ ಅವರು ಆತನನ್ನು ಪೂಜಿಸಲಿ ಮತ್ತು ಮೌನವಾಗಿ ಹಾಗೂ ಗುಪ್ತವಾಗಿ, ತೊಂದರೆಯಿಲ್ಲದೆ ನನ್ನ ಕಾರ್ಯ ಮಾಡಲು ನನ್ನನ್ನು ಬಿಟ್ಟು ಬಿಡಲಿ – ಎಲ್ಲ ಮುಸುಕುಗಳಲ್ಲಿ ದೇಹವು ಅತ್ಯುತ್ತಮವಾಗಿದೆ.

*

ನನ್ನ ಗತ ಜೀವನದ ಬಗ್ಗೆ ಸಾರ್ವಜನಿಕವಾಗಿ ಉಲ್ಲೇಖಿಸಿರುವ ಯಾವುದೋ ಸಂಗತಿಯು ಕೊನೆಯ ಸಂಗತಿಯಾಗಿರಲಿ ಬಿಡಿ! – ಈ ದೇಹವು ತನ್ನ ಬಗ್ಗೆ ಮಾತನಾಡುವುದನ್ನು ಬಯಸುವುದಿಲ್ಲ – ಅದು ನೆಮ್ಮದಿಯಿಂದ ಇರಬಯಸುತ್ತದೆ ಮತ್ತು ಸಾಧ್ಯವಾದಷ್ಟು ಉಪೇಕ್ಷಿಸಲಿಚ್ಛಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/46**

**ಏನಾದೂ ಸರಿಯಾಗಿಲ್ಲದಿದ್ದರೆ**

ಬಹಳೇ ಪರಿಣಾಮಕಾರಿಯಾದಂಥ ಮತ್ತೊಂದು ವಿಧಾನವೂ ಸಹ ಇದೆ ಮತ್ತು ಪ್ರತಿ ಸಾರಿಯೂ ನೀವು ಕೇಳಿದಾಗ ನಿಮಗೆ ಉತ್ತರವು ನಿಶ್ಚಯವಾಗಿ ದೊರಕುವುದು. ಒಂದು ವೇಳೆ ನೀವು ತೊಂದರೆಯಲ್ಲಿದ್ದಾಗ ಅಥವಾ ನಿಮಗೆ ಉತ್ತರವು ಬೇಕಾದಾಗ, ಅದು ಏನಾದರೂ ಆಗಿರಬಹುದು ಅಥವಾ ನೀವು ಸಮಾಧಾನವಿದ್ದಾಗ ಶಾಂತಿಯನ್ನು ಅನುಭವಿಸದಿದ್ದರೆ ಅಥವಾ ಏನಾದರೊಂದು ನಿಮಗೆ ಯಾತನೆಯನ್ನು ಕೊಡುತ್ತಿದ್ದರೆ ಅಥವಾ ನೀವು ವ್ಯಾಕುಲಗೊಳ್ಳುವಂಥ ತಪ್ಪನ್ನೇನಾದರೂ ಮಾಡಿದ್ದರೆ, – ನೀವು ಕೋಪಗೊಂಡಿದ್ದರೆ ಮತ್ತು ಅತೃಪ್ತರಾಗಿದ್ದರೆ, ಅದು ಬಹಳೇ ಅಮುಖ್ಯವಾಗಿರಬಹುದು, ಅತಿ ಸಾಧಾರಣವಾಗಿರಬಹುದು ಮತ್ತು ಅಷ್ಟೊಂದು ಮಹತ್ವವಿರದ ಅಥವಾ ಕೆಲವು ಸಂಗತಿಗಳ ಕಾರಣವು ನಿಮಗೆ ತಿಳಿದಿಲ್ಲದಿದ್ದರೂ ಸಹ, ಎಲ್ಲವೂ (ಸಂಗತಿಗಳು) ಸರಿಯಾಗಿರದಿದ್ದಾಗ, ಸಂಗತಿಗಳು ಹೇಗಿರಬೇಕೊ ಹಾಗಿರದಿದ್ದಾಗ, – ಆ ಸಮಯದಲ್ಲಿ, ಈ ಸಂತೊಷವಲ್ಲದ

ಸ್ಥಿತಿಯಿಂದ ನೀವು ಹೊರಬರಬೇಕಾದರೆ, ನೇರವಾಗಿ ಸಮಾಧಿಗೆ ಬನ್ನಿ, ಸಮಾಧಿಯ ಮುಂದೆ ನಿಮ್ಮ ಶಿರವನ್ನು ಬಾಗಿಸಿ ಮತ್ತು ಶ್ರೀ ಅರವಿಂದರಿಗೆ ಹೇಳಬೇಕಾಗಿರುವುದೆಲ್ಲವನ್ನೂ ಪ್ರಾಮಾಣಿಕವಾಗಿ, ಯಾವುದೇ ಹಿಂಜರಿಕೆ ಇಲ್ಲದೆ ಹೇಳಿ, ಯಾವುದೇ ಸಂಶಯವಿಲ್ಲದೆ, ನನ್ನ ಹತ್ತಿರ ಬಂದು ಹೇಳುವಂತೆ ಹೇಳಿ – ನಿಮ್ಮ ಕಷ್ಟಗಳು, ನನ್ನ ಜೊತೆ ಮಾತನಾಡಿದ ತಕ್ಷಣವೇ ಅವುಗಳು ಮಾಯವಾಗಿರುವುದನ್ನು, ಪೂರ್ತಿ ಮಾಯವಾಗಿರುವುದನ್ನು ನೀವು ಬಹಳಷ್ಟು ಸಾರಿ ನೋಡಿದ್ದೀರಿ. ನೀವು ಅವುಗಳಿಂದ (ತೊಂದರೆಗಳಿಂದ) ಮುಕ್ತಿಯನ್ನು ಪಡೆದಿರುವುದು ಏಕೆಂದರೆ ನಾನು ಅವುಗಳನ್ನು ನಿಮ್ಮಿಂದ ಹೊರಗೆ ಓಡಿಸಿದೆ. ಮತ್ತು ಈ ಋಣಾತ್ಮಕವಾದ ಅಥವಾ ಅಪಾಯಕಾರಿ ಸಂಗತಿಗಳಿಂದ ಮುಕ್ತವಾದ ಅನುಭವವನ್ನು ಪಡೆದುಕೊಂಡಿರಿ. ನಾನು ನಿಮ್ಮಿಂದ ಈ ಭಾರವನ್ನು ತೆಗೆದಿದ್ದರಿಂದ ನೀವು ಹಗುರವಾದ ಅನುಭವವನ್ನು ಹೊಂದಿರುವಿರಿ ಮತ್ತು ಮೊದಲಿನಂತೆ ನೀವು ಆನಂದದ ಸ್ಥಿತಿಯನ್ನು ತಲುಪಿರುವಿರಿ. ನೀವು ಅದನ್ನು ನನಗೆ ಬಹಳಷ್ಟು ಸಾರಿ ಹೇಳಿರುವಿರಿ. ನಿಮಗೆ ನೆನಪಿದೆಯೇ?

ಅದೇ ರೀತಿ ನೀವು ಅವರಿಗೆ (ಶ್ರೀ ಅರವಿಂದರಿಗೆ) ಹೇಳಬೇಕು; ಈ ರೀತಿಯಾಗಿ ಸಮಾಧಿಯ ಮೇಲೆ ನಿನ್ನ ತಲೆಯನ್ನು ಇಡಬೇಕು (ಶ್ರೀಮಾತೆಯವರು ತಮ್ಮ ತಲೆಯನ್ನು ಬಾಗಿಸುತ್ತಾರೆ) ಮತ್ತು ಅವರ ನಿತ್ಯ ಇರುವಿಕೆಗೆ – ನಿಮ್ಮ ತೊಂದರೆಗಳನ್ನು ಹೋಗಲಾಡಿಬೇಕೆಂದು ನೀವು ಅವರ ಸಮಾಧಿಯ ಹತ್ತಿರ ಹೇಳಿ. ಅಥವಾ ಈ ರೀತಿಯಾಗಿ ಒಂದು ಪ್ರಾರ್ಥನೆಯನ್ನು ಕಳಿಸಿರಿ, (ಶ್ರೀಮಾತೆಯವರು ತಮ್ಮ ಹೃದಯದಿಂದ ಮೇಲಕ್ಕೆ ತಮ್ಮ ಕೈಯನ್ನು ಚಲಿಸುತ್ತಾರೆ) ಆದರೆ ಅತ್ಯಂತ ಪ್ರಾಮಾಣಿಕವಾಗಿ, ಮತ್ತು ಏಕಾಗ್ರತೆಯನ್ನು ನಿಮ್ಮ ಅಸ್ತಿತ್ವದ (ಪುರುಷನ) ಆಳಕ್ಕೆ ತನ್ನಿ. ಅವರು ನಿಮ್ಮನ್ನು ಆಲಿಸುತ್ತಾರೆ ಎಂಬ ಭರವಸೆ ನನಗಿದೆ ಮತ್ತು ಅವರು ನಿಮಗೆ ನಿಮ್ಮ ಉತ್ತರವನ್ನು ನೀಡುತ್ತಾರೆ. ಈಗ ಯಾವುದೇ ಗೊಂದಲವಿಲ್ಲದೆ ನೀವು ಅವರೊಂದಿಗೆ ಸಂವಹನವನ್ನು ಸುಲಭವಾಗಿ ಮಾಡಬಹುದು. ಅವರ ಸಂಪರ್ಕದಲ್ಲಿ ತಮ್ಮನ್ನು ತಾವು ಇರಿಸಿಕೊಂಡ ಜನರು ಅನೇಕರಿದ್ದಾರೆ ಮತ್ತು ಅವರು ತಮ್ಮ ಉತ್ತರವನ್ನು ಕಂಡುಕೊಳ್ಳುತ್ತಾರೆ. ಈಗ ಅವರು ನಮಗೆ ಹೆಚ್ಚು ಲಭ್ಯರಾಗುತ್ತಿದ್ದಾರೆ ಮತ್ತು ಅವರು ಹೆಚ್ಚು ಕ್ರೀಯಾಶೀಲರಾಗಿದ್ದಾರೆ. ಅವರನ್ನು ಕಾಣಬೇಕೆಂದರೆ, ನೀನು ಮೊದಲು ನನಗೆ ತಿಳಿಸಬೇಕಾಗಿತ್ತು, ಆಗ

ನಾನು ಒಂದು ಅನುಕೂಲವಾದ ದಿನಾಂಕವನ್ನು, ಒಂದು ನಿಖರವಾದ ಸಮಯವನ್ನು ಆಯ್ಕೆ ಮಾಡಬೇಕಾಗಿತ್ತು, ಮತ್ತು ನೀನು ಹೇಳುವುದನ್ನು ಕೇಳಲು ನನಗೆ ಸಮಯವಿದೆಯೋ ಇಲ್ಲವೋ ಎನ್ನುವುದನ್ನು ನೋಡಬೇಕಾಗಿತ್ತು ನಂತರ ನಿನಗೆ ಉತ್ತರಿಸಬೇಕಾಗಿತ್ತು. ನೀನು ಉತ್ತರವನ್ನು ಪಡೆದುಕೊಳ್ಳುವ ಮುನ್ನ ಈ ಎಲ್ಲ ಪ್ರಕ್ರಿಯೆಯನ್ನು ಅನುಸರಿಸಬೇಕಾಗಿತ್ತು. ಅದು ಹೆಚ್ಚು ಸಮಯ ತೆಗೆದುಕೊಳ್ಳುತ್ತಿತ್ತು ಮತ್ತು ಅದಕ್ಕಿಂತ ಹೆಚ್ಚಾಗಿ ಕಾಯಲು ನಿನ್ನಲ್ಲಿ ತಾಳ್ಮೆ ಇರಬೇಕಾಗಿತ್ತು. ಆದರೆ ಈಗ ನೀನು ಈ ರೀತಿ ಕಾಯಬೇಕಾಗಿಲ್ಲ, ಈ ವಿಧಾನವು ಅನಕೂಲಕರವಾಗಿದೆ ಮತ್ತು ಹೆಚ್ಚು ನೇರವಾಗಿದೆ ಹಾಗೂ ಅವರ ಲಭ್ಯತೆಯ ಅವಕಾಶವೂ ಹೆಚ್ಚು. ಯಾವುದೇ ಸಮಯದಲ್ಲಿ ನೀನು ಅವರನ್ನು ಕೇಳಬಹುದು. ನೀನು ನಿನ್ನ ಉತ್ತರವನ್ನು ಪಡೆಯಲು ಅವರ ಸಮಾಧಿಗೆ ಬಂದು ನಿನ್ನ ತಲೆಯನ್ನು ಬಾಗಿಸಿ ಕೇಳಿದರೆ ಸಾಕು.

ಏನಾದರೂ ಸರಿಯಾಗಿರದಿದ್ದರೆ, ಮತ್ತು ಅದಕ್ಕೆ ಕಾರಣವನ್ನು ತಿಳಿದುಕೊಳ್ಳ–ಬೇಕಾಗಿದ್ದರೆ, ಅಥವಾ ಆ ದೌರ್ಬಲ್ಯದಿಂದ ಮುಕ್ತಿಯನ್ನು ಪಡೆಯಬೇಕೆಂದಿದ್ದರೆ, ಅಥವಾ ನಿವಾರಣೆಯಾಗಬೇಕಿದ್ದರೆ, ಅಥವಾ ಮಡಿಯಾಗಬೇಕಾಗಿದ್ದರೆ, ಶುದ್ಧಿಯಾಗಲು ಒಂದು ತೊಂದರೆಯನ್ನು ತೆಗೆದು ಹಾಕಬೇಕಾದರೆ – ಯಾವುದೇ ಉತ್ತರಕ್ಕಾಗಿ, ಸಮಾಧಿಯ ಹತ್ತಿರ ಬಂದು ಶ್ರೀ ಅರವಿಂದರಲ್ಲಿ ಕೇಳಿಕೊಳ್ಳಬೇಕು, ಆಗ ನೀನು ಉತ್ತರವನ್ನು ಹೊಂದುವಿ. ಅವರ ಉತ್ತರವನ್ನು ಮಾತ್ರವಲ್ಲದೆ ಅವರ ಅನುಗ್ರಹವನ್ನು, ಸಹಾನುಭೂತಿಯನ್ನು, ಅವರ ಶಾಂತ ಸ್ಥಿತಿಯನ್ನು ಹಾಗೂ ಅವರ ಪ್ರಕಾಶವನ್ನೂ ಪಡೆದುಕೊಳ್ಳುವಿ. ಅವರ ಪ್ರಭಾವಿ ಪ್ರೇಮದಿಂದ ನೀನು ಆವರಿಸಲ್ಪಡುವಿ ಮತ್ತು ವಶವಾಗಲ್ಪಡುವಿ. ಒಮ್ಮೆ, ನಿನ್ನನ್ನು ನೀನು ಅವರಿಗೆ ಬಿಟ್ಟುಕೊಟ್ಟರೆ, ಎಲ್ಲ ಅನಾಹುತಗಳಿಂದ ನೀನು ರಕ್ಷಿಸಲ್ಪಡುವಿ. ಅದು ಹಾಗಾಗುವುದು ಅವರ ಪ್ರಭಾವದಿಂದ. ಸರಳ, ಪ್ರಮಾಣಿಕ, ಮತ್ತು ವಿನೀತರಾದಂಥ ಎಲ್ಲರಿಗೂ ಅವರು ತಮ್ಮನ್ನು ತಾವು ಪ್ರಕಟಪಡಿಸಿಕೊಳ್ಳುತ್ತಾರೆ. ಸಂಪೂರ್ಣ ಜಾಗೃತರಾಗಿ ಅವರು ಅಲ್ಲಿದ್ದಾರೆ, ಮತ್ತು ಜಗತ್ತಿನ ಎಲ್ಲ ಚಟುವಟಿಕೆಗಳನ್ನು ಅವರು ನಿರ್ದೇಶಿಸುತ್ತಾರೆ. ನಾನೇನಾದರು ತಿಳಿದುಕೊಳ್ಳಬೇಕೆಂದು ಬಯಸಿದರೆ, ಅವರನ್ನು ಕೇಳುತ್ತೇನೆ, ಮತ್ತು ತಕ್ಷಣವೇ ನನಗೆ ಉತ್ತರ ದೊರೆಯುತ್ತದೆ.

**ದೈವಾನುಗ್ರಹದ ಹಾರೈಕೆ: 119–121**

## ಪ್ರತಿಯೊಬ್ಬರೂ ಅವರನ್ನು ಭೇಟಿಯಾಗಬಹುದು (ಅವರು ಪ್ರತಿಯೊಬ್ಬರಿಗೂ ಲಭ್ಯ)

ಈ ಮೊದಲು, ಅವರು ತಮ್ಮ ದೇಹದಲ್ಲಿದ್ದಾಗ (ಜೀವಂತವಿದ್ದಾಗ) ಅವರು ತುಂಬಾ ದೂರ, ಬಹು ದೂರವಿದ್ದರು, ಅವರನ್ನು ಭೇಟಿಯಾಗುವುದು ಸುಲಭವಿರಲಿಲ್ಲ ಮತ್ತು ಅವರು ಇಲ್ಲಿರುವ ಸಾಧಕರ ವಿದ್ಯಮಾನಗಳ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ ಎಂದು ಜನರು ಹೇಳುತ್ತಿದ್ದರು. ಇದು ಬಹಳೇ ತಪ್ಪಾದ ವಿಷಯವಾಗಿದೆ. ವಾಸ್ತವವಾಗಿ, ಜಗತ್ತನ್ನು ಉನ್ನತ ಹಂತಕ್ಕೇರಿಸುವ ಮತ್ತು ಅದನ್ನು ಅತಿಮಾನಸ ಜಗತ್ತನ್ನಾಗಿ ಸಿದ್ಧಗೊಳಿಸುವುವ ಕಾರ್ಯವನ್ನು ಬಿಟ್ಟು, ಅವರು ಸಾಧಕರ ರಾಶಿ–ರಾಶಿ ಪತ್ರಗಳಿಗೆ ಉತ್ತರಿಸಲು ಹಲವು ರಾತ್ರಿಗಳನ್ನು ಕಳೆಯುತ್ತಿದ್ದರು. ಸಾಧಕರ ಪ್ರಗತಿಯನ್ನು ಗ್ರಹಿಸಲು ಮತ್ತು ಅವರನ್ನು ಎದೆಗುಂದಿಸುವ ವಿಷಯಗಳನ್ನು ಪರಿಹರಿಸಲು ಕಷ್ಟವನ್ನು ತೆಗೆದುಕೊಳ್ಳುತ್ತಿದ್ದರು. ಆದಾಗ್ಯೂ, ಸಾಧಕರು ನನ್ನೊಂದಿಗೆ ನೇರವಾಗಿ ಸಂವಹನ ಮಾಡಲು ಮತ್ತು ನನ್ನ ಅನುಗ್ರಹವನ್ನು ಮತ್ತು ಸಾಧನೆಗಾಗಿ ಭೌತಿಕ ಸ್ತರದಲ್ಲಿ ಮತ್ತು ಆಂತರಿಕದಲ್ಲಿ ಕಾರ್ಯತಃ ನನ್ನ ಸಹಾಯವನ್ನು ಪಡೆದುಕೊಳ್ಳಲು ನೆರವಾಗುವಂತೆ ಸಂಗತಿಗಳನ್ನು ಕ್ರಮಗೊಳಿಸಿದ್ದರು. ಅವರು, ಅತಿಮಾಸದೆಡೆಗಿನ ಪ್ರಜ್ಞೆಯ ಉನ್ನತ ಸ್ತರಗಳನ್ನು ಅರಿತುಕೊಳ್ಳಲು ಮತ್ತು ಯಾವುದೇ ತೊಂದರೆಯನ್ನು ಜಯಿಸಲು ಸಾಧ್ಯವಾಗುತ್ತಿದ್ದದ್ದು ನನ್ನ ಮುಖಾಂತರ. ಆ ಸಮಯದಲ್ಲಿ, ಅವರು ವಿವಿಧ ಪ್ರಪಂಚಗಳನ್ನು, ನಮ್ಮ ಕಾರ್ಯಗಳನ್ನು ವಿರೋಧಿಸುತ್ತಿರುವಂಥ ಮತ್ತು ಅವುಗಳಿಗೆ ವಿಘ್ನವಾಗಿ ನಿಂತಿರುವಂಥ ಬಗೆಬಗೆಯ ಶಕ್ತಿಗಳನ್ನು ಮತ್ತು ಪ್ರಜ್ಞೆಯ ಅಸಂಖ್ಯ ಹಂತಗಳನ್ನು ಜಯಿಸಲಷ್ಟೇ ಅಲ್ಲದೆ ಅವುಗಳನ್ನು ನಿಗ್ರಹಿಸಲು ಮತ್ತು ಅವುಗಳ ಮೇಲೆ ಪ್ರಭುತ್ವ ಹೊಂದುವ, ನಿಯಂತ್ರಣವನ್ನು ಹೊಂದುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು – ಆ ಕಾರ್ಯ ಸುಪ್ರಮಾನಸದ ಸ್ಥಿತಿಯೆಡೆಗಿನ ಶೋಧನೆ. ಸರ್ವೇಸಾಮಾನ್ಯವಾದ ವ್ಯವಹಾರಗಳನ್ನು ಬಗೆಹರಿಸುವ ಕೆಲಸವನ್ನು ನನಗೆ ಬಿಡಲಾಯಿತು, ಮತ್ತು ಆಶ್ರಮವನ್ನು ವ್ಯವಸ್ಥೆಗೊಳಿಸುವ ಮತ್ತು ಪ್ರತಿಯೊಬ್ಬ ಸಾಧಕನ ಪ್ರಗತಿಯನ್ನು, ಸಾಮೂಹಿಕ ಯೋಗದೆಡೆಗಿನ ಪ್ರಯತ್ನವನ್ನು ನೋಡಿಕೊಳ್ಳುವ ಕೆಲಸವನ್ನೂ ಸಹ. ಆ ಅವಧಿಯಲ್ಲಿ, ಜನರೊಂದಿಗೆ ಸಂವಹನ ಮಾಡಲು ಅವರ ಅಹವಾಲುಗಳನ್ನು ಕೇಳಲು ಅವರಿಗೆ ಸಮಯ ಸಿಗುತ್ತಿರಲಿಲ್ಲ. ಆದರೆ, ಈಗ ಅವರು ಎಲ್ಲರಿಗೂ ವ್ಯಾಪಕವಾಗಿ ಲಭ್ಯ, ಎಲ್ಲರಿಗೂ ಆತ್ಮೀಯ

ಹಾಗೂ ನಿಕಟ. ಒಂದು ಸಾಮೀಪ್ಯದ ಮತ್ತು ಒಂದು ನೇರ ಪ್ರಭಾವದ ಮುಖಾಂತರ ಎಲ್ಲರೊಂದಿಗೂ ಒಂದು ಬಾಂಧವ್ಯವಿದೆ, ಹಾಗಾಗಿ ಪ್ರತಿಯೊಬ್ಬರಿಗೂ ಅವರು ಲಭ್ಯ.

**ದೈವಾನುಗ್ರಹದ ಹಾರೈಕೆ: 119–121**

**ಅವರ ಇರುವಿಕೆಯು ಪ್ರತಿಧ್ವನಿಸುತ್ತದೆ/ಅನುರಣಿಸುತ್ತದೆ**

ಅದು ಅಸಾಧಾರಣವಾಗಿದೆ (ಅದ್ಭುತವಾಗಿದೆ). ಅವರ ಉಪಸ್ಥಿತಿಯು ಸಮಾಧಿಯ ಸುತ್ತಲೂ ಗಟ್ಟಿಯಾಗಿ ಅನುರಣಿಸುತ್ತದೆ. ಅವರ ಪ್ರಭಾವವು, ಪ್ರಧಾನ ಪುರುಷನನ್ನು ಪ್ರವೇಶಿಸುತ್ತದೆ ಹಾಗೂ ಸ್ಪರ್ಶಿಸುತ್ತದೆ, ಮತ್ತು ಪ್ರಜ್ಞೆಯನ್ನು ಆಧ್ಯಾತ್ಮ ಜೀವನಕ್ಕೆ ಜಾಗೃತಗೊಳಿಸುತ್ತದೆ. ನಾಸ್ತಿಕವಾದಿಗಳು, ನಂಬಿಕೆ ಇಲ್ಲದವರು, ಕ್ಷುದ್ರ ಬಯಕೆಗಳನ್ನು ಹೊಂದಿದಂಥ ಹಾಗೂ ತಮ್ಮ ಕುತೂಹಲಕ್ಕಾಗಿ ಸಮಾಧಿಯ ಭೇಟಿಗೆ ಬರುವ ಜನರೂ ಸಹ ಅದ್ಭುತವಾದ ಸ್ವಭಾವ ಪರಿವರ್ತನೆಯಿಂದ ದಂಗಾಗಿ ಹಿಂದಿರುಗುತ್ತಾರೆ ಮತ್ತು ಆಂತರಿಕ ಶಾಂತಿಯನ್ನು ಪಡೆದುಕೊಳ್ಳುತ್ತಾರೆ. ಏಕೆಂದರೆ, ಅಲ್ಲಿ ಶ್ರೀ ಅರವಿಂದರು ತಮ್ಮ ಶಾಂತಿಯನ್ನು ಮತ್ತು ತಮ್ಮ ಕರುಣೆಯನ್ನು ನಿರಂತರವಾಗಿ ಸುರಿಸುತ್ತಾರೆ. ಆ ಜನರು ಅವರ ಮುಂದೆ ಹಾದು ಹೋದಾಗ ಅವರನ್ನು ಮೀಯಿಸುವುದು ಈ ಸಂಗತಿಯಾಗಿದೆ. ಅದು ಅವರ ಶಕ್ತಿಯ ಮತ್ತು ಅವರ ಉಪಸ್ಥಿತಿಯ ಒಂದು ನಂಬಲಾರದ, ಹೆಮ್ಮೆಯ ಕಾರ್ಯವಾಗಿದೆ.

ನಾನು ಸಮಾಧಿಯೆಡೆಗೆ ನೋಡಿದಾಗ, ಮತ್ತು ಅಲ್ಲಿ ಸಂಭವಿಸುತ್ತಿರುವುದನ್ನು ಸ್ತಂಭವನ್ನು ಮತ್ತು ಮಾರ್ಪಡಿಸುತ್ತಿರುವ ಒಂದು ಬಲವನ್ನು ಕಂಡು ನಾನು ಆಶ್ಚರ್ಯಗೊಂಡೆ. ಅದು ಈ ರೀತಿಯಾಗಿ ಮೇಲೆರುತ್ತದೆ – (ಶ್ರೀಮಾತೆಯವರು ತಮ್ಮ ಕೈಗಳಿಂದ ಮೇಲ್ಗಡೆ ಚಲನೆಯನ್ನು ಮಾಡುತ್ತಾರೆ) ಒಂದು ಭವ್ಯತೆಯಿಂದ ಮತ್ತು ಉಜ್ವಲತೆಯಿಂದ ಮತ್ತು ಸಮಾಧಿಯ ಉದ್ದಗಲಗಳಿಂದ ಬಂದ ಬೆಳಕಿನ ಪ್ರವಾಹದಂತೆ. ಅದು ವ್ಯಕ್ತವಾಗುತ್ತಿರುವ ಒಂದು ಹೊಸ ಬೆಳಕು....

ರಾತ್ರಿ ವೇಳೆ, ಎಲ್ಲವೂ ನಿಶ್ಯಬ್ದವಾಗಿದ್ದಾಗ, ಈ ಸ್ಥಳದಲ್ಲಿ ಜನರು ಹಿಂದೆ ಬಿಟ್ಟು ಹೋದಂಥ ಎಲ್ಲವನ್ನೂ (ಮಿಥ್ಯೆಯ ಎಲ್ಲ ರೂಪಗಳು, ಬಯಕೆಗಳು, ಅಸಹನೆಯ

ಮನವಿಗಳು, ಎಲ್ಲ ರೀತಿಯ ದೂರುಗಳು, ಮತ್ತು ಅಹಿತಕರವಾದ ಶಕ್ತಿಗಳು) ಸ್ವಚ್ಛಗೊಳಿಸುವ ಕೆಲವು ವ್ಯಕ್ತಿಗಳಿದ್ದಾರೆ – ಮತ್ತು ಈ ಸ್ಥಳವನ್ನು ನೆಮ್ಮದಿಯ ಮತ್ತು ಹಿತವಾದ ಸ್ಥಳವನ್ನಾಗಿ ಮಾಡುತ್ತಾರೆ. ಅವರು ಪ್ರೀತಿಯಿಂದ ಈ ಪರಿಸರವನ್ನು ಎಷ್ಟು ಶುದ್ಧಗೊಳಿಸುತ್ತಾರೆಂದರೆ, ಅವರ (ಶ್ರೀ ಅರವಿಂದರ) ಉಪಸ್ಥಿತಿಯ ಅನುಭವವಾಗುತ್ತದೆ.

**ದೈವಾನುಗ್ರಹದ ಹಾರೈಕೆ: 122**

**ಒಂದು ಪವಿತ್ರವಾದ ಸ್ಥಳ**

ಧ್ಯಾನ ಮಾಡುವುದಕ್ಕಾಗಿ ಇದೊಂದು ಪವಿತ್ರವಾದ ಸ್ಥಾನವಾಗಿದೆ, ಹರಟೆ ಹೊಡೆಯಲು ಅಲ್ಲ. ಅಲ್ಲಿ ಮಾತನಾಡಿದರೆ, ಆ ಪರಿಸರದಲ್ಲಿ ಶಾಂತಿಯನ್ನು ಕದಡಿದಂತೆ. ಒಂದು ಸೂಕ್ಷ್ಮ ಚಲನೆಯಿಂದ ಇಡೀ ಜಗತ್ತನ್ನು ಪೋಷಿಸುತ್ತ, ತಮ್ಮ ಪ್ರಜ್ಞೆಯನ್ನು ನಿಧಾನವಾಗಿ ಪ್ರಕಟಗೊಳಿಸುತ್ತ, ದೈವೀ ಅವರೋಹಣಕ್ಕಾಗಿ, ಭಾಗಶಃ ತೆರೆಮರೆಯಲ್ಲಿ, ಅವರು ತಮ್ಮ ಭವ್ಯವಾದ ದೇಹದೊಂದಿಗೆ ಅಲ್ಲಿದ್ದಾರೆ.

ಅವರು, ನಮ್ಮ ದೈವೀ ಸಾಧ್ಯತೆಯ ಜೀವಂತ ಭರವಸೆಯಾಗಿದ್ದಾರೆ, ದೈವೀ ಬೆಳಕು ಮತ್ತು ದೈವೀ ಪ್ರಭಾವದೊಂದಿಗೆ ಹರಡುತ್ತಿರುವ ದಿವ್ಯತೆಯ ವಾಗ್ದಾನವಾಗಿದ್ದಾರೆ – ದೈವೀ ಪ್ರಕಟವಾಗುವಿಕೆಯ ಕಡೆಗಿನ ಪ್ರಗತಿಶೀಲ ನಡೆಯಾಗಿದ್ದಾರೆ. ಅದಕ್ಕಾಗಿ ಸಂಪೂರ್ಣ ವಾತಾವರಣವು ದೈವೀ ಹಾಗೂ ಅದ್ಭುತ ಶಾಂತಿಯಿಂದ ತುಂಬಿದೆ, ತಿಳಿಯಿತೆ? ದೈವೀ ದೇಹದಲ್ಲಿ – ತಾವೇ ದೈವತ್ವವಾಗಿ, ಸಂಪೂರ್ಣ ಮಾನವತೆಯ ಪ್ರತಿನಿಧಿಯಾದ ಅವರು ಅಲ್ಲಿದ್ದಾರೆ, ತಮ್ಮ ಸ್ವಂತ ಪ್ರಯತ್ನದಿಂದ, ತಮ್ಮ ತಪಸ್ಸಿನಿಂದ ಮತ್ತು ಸಾಧನೆಯಿಂದ ತಮ್ಮ ದೇಹವನ್ನು ದಿವ್ಯವನ್ನಾಗಿ ಮಾಡಿದಂಥ ಅವರು ಅಲ್ಲಿದ್ದಾರೆ. ಅವರು ಹೊಂದಿದ ಸಾಕ್ಷಾತಾರಗಳು ಮತ್ತು ಅನುಭವಗಳು, ಯೋಗ ಸಾಧನೆಯಿಂದ ತಮ್ಮ ದೇಹದಲ್ಲಿ ಶೇಖರಿಸಿಕೊಂಡಿರುವಂಥ ಸಂಗತಿಯು ಅವರ ದೇಹವನ್ನು ಪರಿವರ್ತಿಸುವ ಶಕ್ತಿಯಿಂದ ಕೂಡಿರುವಂತೆ ಮಾಡಿದೆ. ಅದು ಶಕ್ತಿಯುತವಾಗಿದೆ – ಉಕ್ಕಿಹರಿಯುವಂಥ ಒಂದು ಬಲ ಹಾಗೂ ಬೆಳಕಿನಿಂದ ಕ್ರಿಯಾತ್ಮಕವಾಗಿದೆ; ಸಂಪೂರ್ಣ ಪರಿಸರವನ್ನು ಆವರಿಸಿರುವುದು ಈ ಕ್ರಿಯಾತ್ಮಕ ಶಕ್ತಿಯಾಗಿದೆ. ಎಲ್ಲ ಕಡೆ ಇರುವುದೆಲ್ಲ ಅವರ ಉಪಸ್ಥಿತಿಯಾಗಿದೆ. ಅದು ಸುಪ್ರಮಾನಸ

ಶಕ್ತಿಯಾಗಿದ್ದರಿಂದ ಅದು ಸಹಿಸಿಕೊಳ್ಳುತ್ತದೆ ಮತ್ತು ಕ್ಷೀಣಿಸುತ್ತಿರುವ ಯಾವುದೇ ಸಂಕೇತವನ್ನು ಅದು ತೋರಿಸುವುದಿಲ್ಲ. ಅದು ಹಾಗೆ ಮಾಡುವುದಿಲ್ಲ.

**ದೈವಾನುಗ್ರಹದ ಹಾರೈಕೆ: 124**

**ಸಮಾಧಿಯ ಸುತ್ತ ಸಾಗುತ್ತಿರುವುದು**

ಜನರು ಸಮಾಧಿ ಸುತ್ತ ಸಾಗಿದಾಗ ಅವರು ಹೀರಿಕೊಳ್ಳುವ ಸಂಗತಿಯು ಇದಾಗಿದೆ. ಅದನ್ನು ತಿಳಿದುಕೊಳ್ಳದೆ, ಅವರ ಪ್ರೇಮದಲ್ಲಿ ಜನರು ಮಿಂದು ಹೋಗುತ್ತಾರೆ ಮತ್ತು ಜನರು ಸಮಾಧಿಯ ಹತ್ತಿರ ಹೋದಾಗ ಅವರು ಯಾಕೆ ದಿಗ್ಭ್ರಮೆಗೊಳ್ಳುತ್ತಾರೆ ಎನ್ನುವುದೂ ಸಹ ಅವರಿಗೆ ಅರಿವಾಗುವುದಿಲ್ಲ. ಇದು ಆಶ್ಚರ್ಯಕರವಾಗಿದೆ! ಅವರು ಸಮಾಧಿಯನ್ನು ಸ್ಪರ್ಶಿಸಿದಾಗ ಅಪ್ರತಿಭರಾಗುತ್ತಾರೆ. ಏಕೆಂದರೆ ಸಮಾಧಿಯ ಸುತ್ತಲೂ ಕಾರ್ಯನಿರತವಾಗಿರುವ ಶಕ್ತಿಯು ಜನರ ಧಾರ್ಮಿಕ ಭಾವನೆಗಳನ್ನು ನಾಶಮಾಡುತ್ತದೆ, ಸುರಲೋಕಗಡೆಗೆ ಕೋಲಾಹಲವೆಬ್ಬಿಸುವ ಭಾವಗಳನ್ನು ಛಿದ್ರಗೊಳಿಸುತ್ತದೆ ಮತ್ತು ಅವರು ತಿಳಿಯಲಾರದಂಥ ಸತ್ಯದ ಮುಂದೆ ಅವುಗಳನ್ನು ಇರಿಸುತ್ತದೆ. ಅಲ್ಲಿ ಪ್ರಕಟವಾಗುವಂಥ ಸತ್ಯದ ಈ ಅಸಾಧಾರಣವಾದ ವಿದ್ಯಮಾನದಿಂದ ಅವರು ದಿಗ್ಭ್ರಮೆಗೊಳಗಾಗುತ್ತಾರೆ. ಮುಕ್ತವಾಗಿರುವಂಥ ಜನರು ಸ್ಪರ್ಶಕ್ಕೊಳಗಾಗುತ್ತಾರೆ ಮತ್ತು ತಮ್ಮನ್ನು ತಾವು ಶಕ್ತಿಯುತಗೊಳಿಸಿಕೊಳ್ಳಲು ಅವರು ಮತ್ತು ಆ ಪರಿಸರದಲ್ಲಿರುವ ಈ ಶಾಂತಿಯನ್ನು ತಮ್ಮಲ್ಲಿ ಹೀರಿಕೊಳ್ಳಲು ಹಿಂದಿರುಗುತ್ತಾರೆ. ಅವರ ಉಪಸ್ಥಿತಿಯು ಎಷ್ಟು ಸ್ಪಷ್ಟ ಮತ್ತು ಎಷ್ಟು ಜೀವಂತವಾಗಿದೆ ಎಂದರೆ ಈ ಪರಿಸರವನ್ನು ಪ್ರಬಲವಾಗಿಸುವ ಹಾಗೂ ಉತ್ಸಾಹಗೊಳಿಸುವಂಥ ಒಂದು ಪ್ರಜ್ಞೆಯ ಅಗಾಧತೆಯಂತೆ. ಕ್ಷಣಿಕವಾದ ಬೆಳಕು ಮತ್ತು ಬಣ್ಣಗಳಲ್ಲಿ, ವಶಪಡಿಸಿಕೊಳ್ಳಲಾಗದ ಅತ್ಯಾನಂದದ ಸೌಂದರ್ಯದಲ್ಲಿ, ಶುದ್ಧತೆಯ ಪ್ರಾಣ ಮತ್ತು ತಿಳಿಯಲಾಗದ ಇರುವಿಕೆಯಲ್ಲಿ, ತೇಲಾಡಲು ಹೇಗೆ ಅದು ತೋರುತ್ತದೆ ಎನ್ನುವುದನ್ನು ನಾನು ಕಾಣುತ್ತೇನೆ, ಗಣನೀಯವಾಗಿರದಿದ್ದರೂ, ಬಹುತೇಕ ಭೌತಿಕವಾದಾಗ್ಯೂ, ಪ್ರಪಂಚಕ್ಕೆ ತಿಳಿಯದ ಒಂದು ಮಧುರತೆಯನ್ನು ರವಾನಿಸುತ್ತಿರುತ್ತದೆ. ಕೇಂದ್ರೀಕೃತವಾದಂಥ, ದೈವೀ ಸಾಕ್ಷಾತ್ಕಾರಕ್ಕಾಗಿ ದೃಢವಾಗಿ

ಹಾತೊರೆಯುತ್ತಿರುವಂಥ ಒಂದು ಹೃದಯವು, ಅದು ಸಮಾಧಿಯ ಮುಂದೆ ನಿಂತು ಏನನ್ನೂ ಬಯಸದೆ ಭಗವಂತನ ಮಹದಾನಂದವನ್ನು ಮಾತ್ರ ಬಯಸಿದರೆ, ಅದು ಆತನ ಅನಂತ ಉಪಸ್ಥಿತಿಯಿಂದ ಅನುಭವಿಸಲಾದ ಅತ್ಯಾನಂದಕ್ಕಿಂತ ಹೆಚ್ಚು ಉತ್ತಮ ಮತ್ತು ಉನ್ನತವಾದ ಆನಂದದ ಪ್ರದೇಶಕ್ಕೆ (ಸಮಾಧಿಯಲ್ಲಿ ಪ್ರಭಾವಶಾಲಿಯಾದ ಸುರಲೋಕಗಳು ಅಥವಾ ಈ ಭೂಮಿಯು ಎಂದಿಗೂ ತಿಳಿಯದಂಥ) ರವಾನೆಯಾಗಬಹುದೆಂದು ನನಗೆ ತೋರುತ್ತದೆ.

**ದೈವಾನುಗ್ರಹದ ಹಾರೈಕೆ: 124 –125**

**ಅವರ ಅಸಾಧಾರಣವಾದ ಉಪಸ್ಥಿತಿ**

ಅವರ ಶ್ರದ್ಧಾಳುಗಳು ಮತ್ತು ಅಭೀಪ್ಸೆ ಪಡುವವರು – ಅವರು ತಮ್ಮ ಪ್ರಜ್ಞೆಯನ್ನು, ತಮ್ಮ ಅಸಾಧಾರಣವಾದ ಉಪಸ್ಥಿತಿಯಿಂದ ಈ ಸ್ಥಳವನ್ನು ಪ್ರಬಲವಾಗಿಸುವ ಶ್ರೀ ಅರವಿಂದರೊಡನೆ ಒಂದಾಗಿಸಲು ನಿಜವಾಗಿಯೂ ಹಂಬಲಿಸುವವರು – ಈಗ ನೀವು ನನ್ನನ್ನು ಸ್ಪಷ್ಟವಾಗಿ ಕಾಣುವಂತೆ, ಅವರ ವೈಭವಯುತ ಉಪಸ್ಥಿತಿಯ ಭವ್ಯತೆಯನ್ನು ಕಂಡುಕೊಳ್ಳುತ್ತಾರೆ. ಮತ್ತು ಅವರೊಡನೆ ಸಂವಹನ ಮಾಡಲು ಬಯಸುವವರು, ಅವರ ಸ್ಥಿರವಾದ ಉತ್ತರವನ್ನು ಪಡೆದುಕೊಳ್ಳುತ್ತಾರೆ. ಅವರು ಅಲ್ಲಿದ್ದಾರೆ – ತಮ್ಮ ಸಾಮರ್ಥ್ಯದಿಂದ ಸರ್ವಶಕ್ತರಾಗಿ, ಪರದೆಯ ಹಿಂದಿನಿಂದ, ನಿರಂತರ ಒತ್ತಾಯದಿಂದ ಮತ್ತು ನಂಬಲಾಗದ ತಾಳ್ಮೆಯಿಂದ ಹೊಸ ಸೃಷ್ಟಿಯ ಮೇಲೆ ಅವರು ಪಾರುಪತ್ಯ ನಡೆಸುತ್ತಾರೆ, ಆದರೆ ದೃಢ ನಿಶ್ಚಯದಿಂದ ಇದ್ದಾರೆ, ತಮ್ಮ ಕಾರ್ಯಶೈಲಿಯು ಇರುವಂತೆ, ಒಂದಾದ ನಂತರ ಮತ್ತೊಂದು ಗೆಲುವುಗಳನ್ನು ಸಂಪಾದಿಸುತ್ತ, ಮೊದಲು ಮಾನವ ಕುಲದ ಪ್ರಜ್ಞೆಯನ್ನು ಬದಲಾಯಿಸಲು ನಂತರ ಅದನ್ನು ಅದರ ಎಲ್ಲ ಆಯಾಮಗಳಲ್ಲಿ ಪರಿವರ್ತಿಸಲು, ಈ ಪ್ರತಿರೋಧಗಳು, ಮತ್ತು ಕ್ಷಣಿಕ ಸೋಲುಗಳು ಮಾನವ ಕುಲವನ್ನು ಅದರ ಮುಂದಿರುವ ಅಡೆತಡೆಗಳನ್ನು ಗೆಲ್ಲಲು ತಯಾರಿ ಮಾಡಲೆಂದು ಚೆನ್ನಾಗಿ ತಿಳಿದ, ಮತ್ತು ತಮ್ಮ ಬೆಳಕಿನ ಶಾಂತಿಯಲ್ಲಿ ಒಂದು ಸಮಗ್ರವಾದ ಸಂಚಲನದಿಂದ ಅದರ ಕಾರ್ಯವೈಖರಿಯನ್ನು ಹಾಗೂ ಅದರ ಮನೋಭಾವವನ್ನು ನಿರ್ದೇಶಿಸುತ್ತ. ಎಲ್ಲಕ್ಕಿಂತ ಮಿಗಿಲಾಗಿ, ಇದು ಆಧ್ಯಾತ್ಮಿಕತೆಯ ಮೇಲೆ ಆಧರಿಸಿದೆ,

ಮತಾಂಧತೆಯೇ ತಿರುಳಾದ ಕೃತಕ–ಧಾರ್ಮಿಕ ಆಂದೋಲನಗಳ, ಯದ್ಧ ಮತ್ತು ವಿನಾಕಾರಣ ಕಲಹಗಳ ಮೇಲಲ್ಲ. ಪರಿಣಾಮಗಳನ್ನು ನೋಡು... ಜಗತ್ತು ಮನುಷ್ಯರ ಕ್ರೂರತೆಯಿಂದ ಬೇಸತ್ತಿದೆ, – ನೆತ್ತರು ಹರಿಯುತ್ತದೆ ಮತ್ತು ಅಹಿಂಸೆ ಮೇಲುಗೈ ಸಾಧಿಸುತ್ತದೆ, ನಾವು ಇಂತಹ ಭಯಂಕರವಾದ ನಾಶವನ್ನು ಎಂದಿಗೂ ನೋಡಿಲ್ಲ. ಮಾನವರು ಮೃಗಗಳಾಗಿದ್ದಾರೆ, ಮೃಗಗಳಿಗಿಂತಲೂ ಕಡೆಯಾಗಿದ್ದಾರೆ!

...ಎಲ್ಲಿಯವರೆಗೆ ಮನುಷ್ಯನು ತನ್ನ ಪ್ರಜ್ಞೆಯನ್ನು ಬದಲಾಯಿಸಲು ಪ್ರಯತ್ನ ಮಾಡುವುದಿಲ್ಲವೊ... ಅದೊಂದು ಗೆಲ್ಲಲಾರದಂಥ ಬಿಕ್ಕಟ್ಟಾಗಿದೆ. ಯಾವುದೇ ವ್ಯಕ್ತಿ, ಪುರುಷನಾಗಲಿ ಅಥವಾ ಅಸಾಧಾರಣ ಸಾಮರ್ಥ್ಯಗಳನ್ನು ಹೊಂದಿರುವ ವ್ಯಕ್ತಿಗಳಾಗಲಿ, ಏನನ್ನೂ ಮಾಡಲಾರರು ಅಥವಾ ದೈವೀ ಮತ್ತು ಪ್ರತಿಕೂಲ ಶಕ್ತಿಗಳ ನಡುವಿನ ಆಳವಾದ ಬಿರುಕನ್ನು ತುಂಬಲಾರರು. ಮನುಷ್ಯನನ್ನು ಈ ಹಂತಕ್ಕೆ ತಳ್ಳಿರುವ ಸಂಗತಿಯು ಅಜ್ಞಾನವಾಗಿದೆ.

ಆದರೆ ಚಿಂತಿಸಬೇಕಾಗಿಲ್ಲ. ಯಾರಿಗೆ ಅಧಿಕಾರವನ್ನು ಕೊಡಲಾಗಿದೆಯೊ, ಯಾರು ಉತ್ತರದಾಯಿಯಾಗಿರುತ್ತಾರೊ, ಅವನು ಮನುಷ್ಯನನ್ನು ಹೊಸ ಪ್ರಪಂಚದ ಗಡಿಗಳಿಗೆ ತರುವಲ್ಲಿ ಕಾರ್ಯ ಮಾಡುತ್ತಾನೆ; ಅವನು ಕಷ್ಟಗಳನ್ನು ಮತ್ತು ಅಡೆತಡೆಗಳನ್ನು ಎಡೆಬಿಡದೆ ಬುಡಸಮೇತ ಕಿತ್ತು ಹಾಕುತ್ತಾನೆ, ಮನುಷ್ಯನನ್ನು ಉಜ್ವಲ ಭವಿಷ್ಯದೆಡೆಗೆ ಮಾರ್ಗದರ್ಶನ ಮಾಡುತ್ತಿರುತ್ತಾನೆ. ಅವನು ಮಾತ್ರ ಈ ವ್ಯಾಧಿಯನ್ನು ಗುಣಪಡಿಸಬಲ್ಲ, ಏಕೆಂದರೆ ಅವನು ನಮ್ಮ ಇರುವಿಕೆಯ ಒಡೆಯನಾಗಿದ್ದಾನೆ. ಆತ್ಮವಿಶ್ವಾಸದಿಂದಿರು, ಎಲ್ಲವೂ ಸರಿಯಾಗುತ್ತದೆ. ವಿಕಸನದ ಸುರುಳಿಯಲ್ಲಿ, ಆತನ ಭೂಮಿಯ ಅಸ್ತಿತ್ವದ ಏರಿಳಿತಗಳಲ್ಲಿ, ಬಹುಶಃ ಮಾನವನು ತಲುಪಿದಂಥ ಅತ್ಯಂತ ಕನಿಷ್ಠ ಗುರಿಯು ಇದಾಗಿದೆ. ಆದರೆ ಬೇಗನೆ, ನಾವು ಬೆಳಕನ್ನು ಕಾಣುವೆವು – ಒಂದು ಅಗಾಧ ಬದಲಾವಣೆಯ ನಿರೀಕ್ಷೆ – ಪೃಥ್ವಿಯ ಮೇಲೆ ದೇವರನ್ನು ಕರೆತರಲು ಮತ್ತು ಆತನ ಆಧಿಪತ್ಯವನ್ನು ಸ್ಥಾಪಿಸುವಂಥದ್ದು ಅವನ ಅಸ್ತಿತ್ವದ ಭರವಸೆ ಮಾತ್ರ.

**ದೈವಾನುಗ್ರಹದ ಹಾರೈಕೆ: 125**

# ಶ್ರೀಮಾತೆಯವರ ದೃಷ್ಟಿಯಲ್ಲಿ ಸಾವಿತ್ರಿ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

## ಸಾವಿತ್ರಿಯನ್ನು ಓದುವ ಅತ್ಯುತ್ತಮ ಮಾರ್ಗ

... ಹೌದು, ಸಾವಿತ್ರಿಯನ್ನು ಓದುವ ಅತ್ಯುತ್ತಮ ಮಾರ್ಗವು ಇದಾಗಿದೆ. ಹಗಲು ಬೆಳಕಿನಂತೆ ಸ್ಪಷ್ಟವಾಗಿ ನಾವು ಅರ್ಥಮಾಡಿಕೊಳ್ಳುತ್ತೇವೆ.

ನಾವು ಪದಗಳನ್ನು ಅತಿ ಸುಲಭವಾಗಿ ಅರ್ಥಮಾಡಿಕೊಳ್ಳಬಹುದು.... ಈ ರೀತಿಯಾಗಿ ತಮ್ಮ ಕಣ್ಣುಗಳನ್ನು ಮುಚ್ಚುತ್ತಾರೆ ಮತ್ತು ಸ್ಪಷ್ಟವಾಗಿ ಎಲ್ಲವನ್ನೂ ಅರ್ಥಮಾಡಿಕೊಳ್ಳುತ್ತಾರೆ. ಸಾಧ್ಯವಾದಷ್ಟು ಪರಿಪೂರ್ಣವಾಗಿ, ಸಾಧ್ಯವಾದಷ್ಟು ಜಾಗರೂಕತೆಯಿಂದ ಮಾಡಲಿಚ್ಛಿಸುವಂಥ ಜನರಿಗೆ ನಾನು ಸಲಹೆ ನೀಡುವುದು ಇದಾಗಿದೆ; ನಂತರ, ಮಾಡಬೇಕಾದ ಕೆಲಸವೇನೆಂದರೆ, ಕಣ್ಣುಗಳನ್ನು ಮುಚ್ಚುವುದು ಮತ್ತು ವಿಷಯವನ್ನು ಗಮನಿಸುವುದು. ಈ ರೀತಿ ಸಾಮಾನ್ಯವಾಗಿ, ನಿಮ್ಮ ಕಣ್ಣುಗಳಿಂದ ನೋಡುವುದಕ್ಕಿಂತ ಹೆಚ್ಚು ಉತ್ತಮವಾಗಿ ಮಾಡುವಿರೆಂಬ ಖಚಿತತೆ ನನಗಿದೆ. ಹೆಚ್ಚು ಕಠಿಣವಾದ ಸಂಗತಿಯನ್ನು ಮಾಡುವಂಥವರಿಗೆ, ಅತಿ ಚಿಕ್ಕದಾದ ಕೆಲಸವನ್ನು ಮಾಡಲು ಬಹಳೇ ಏಕಾಗ್ರತೆ ಬೇಕಾದಂಥವರಿಗೆ "ಎಷ್ಟು ಸಾಧ್ಯವೋ ಅಷ್ಟು ಉತ್ತಮವಾಗಿ ನೀವು (ಕಾರ್ಯ) ಮಾಡಲು ಬಯಸಿದ್ದರೆ, ನೀವದನ್ನು ಮುಚ್ಚಿದ ಕಂಗಳಿಂದ ಮಾಡಿರಿ. ನೀವು, ನಿಮ್ಮ ಕಣ್ಣುಗಳನ್ನು ಮುಚ್ಚಿದಾಗ ಹೆಚ್ಚು ವಿವರಗಳನ್ನು ಕಾಣುವಿರಿ, ಮತ್ತು ಅನುರೂಪವಾದ ಸಂಗತಿಗಳು ಒಂದರ ಹಿಂದೆ ಒಂದು ಸುಲಭವಾಗಿ ಹಾಗೂ ನಿಖರತೆಯಿಂದ ಹಿಂಬಾಲಿಸುತ್ತವೆ. ಮತ್ತು ನೀವು ಮಾಡಬೇಕಾದ್ದನ್ನು ಹೆಚ್ಚು ಉತ್ತಮವಾಗಿ ಹಾಗೂ ಹೆಚ್ಚು ಆತ್ಮವಿಶ್ವಾಸದಿಂದ ಮಾಡುವಿರಿ. ಆದರೆ ನೀವದನ್ನು ಸ್ವತಃ ಕಾಣಬೇಕು," ಎಂದು ಸಾಮಾನ್ಯವಾಗಿ ನಾನು ಹೇಳುತ್ತೇನೆ.

ನಾನು ಮಾಡಬೇಕಾದ ಕೆಲಸವು ಕಠಿಣವಾಗಿದ್ದಾಗ, ನಾನು ಮಾಡುವುದು ಇದನ್ನು. ನಾನು ನನ್ನ ಕಣ್ಣುಗಳನ್ನು ಮುಚ್ಚುತ್ತೇನೆ, ಆಗ ನಾನು ಸಂಗತಿಗಳನ್ನು ಹೆಚ್ಚು ಸ್ಪಷ್ಟವಾಗಿ ಕಾಣುತ್ತೇನೆ, ಪ್ರತಿಯೊಂದು ಸಂಗತಿಯೂ ತನ್ನ ಸ್ಥಾನದಲ್ಲಿ ಇರುವುದನ್ನು ಕಾಣುತ್ತೇನೆ, ಮತ್ತು ನಾನದನ್ನು ಅತಿ ಸುಲಭವಾಗಿ ಮಾಡುತ್ತೇನೆ.

ಏಕೆಂದರೆ, ಅನುರೂಪವಾದ ಸಂಗತಿಗಳು, ನಿಖರವಾಗಿ ತಮ್ಮ ಸ್ಥಾನದಲ್ಲಿ, ಒಂದರ ಹಿಂದೆ ಒಂದರಂತೆ ಬರುತ್ತವೆ. ನಾನು ಹುಡುಕುವ ಅವಶ್ಯಕತೆ ಇಲ್ಲ ಅಥವಾ ತಡಕಾಡಬೇಕಾಗಿಲ್ಲ. ಅದು ತಾನಾಗಿಯೇ ಬರುತ್ತದೆ, ಆಗ ನಾನು ಅದನ್ನು ಹೆಚ್ಚು ಉತ್ತಮವಾಗಿ ಮತ್ತು ಹೆಚ್ಚು ವೇಗವಾಗಿ ಮಾಡುತ್ತೇನೆ, ಅದೇ ಕೆಲಸವನ್ನು ಈ ರೀತಿಯಾಗಿ ಕೋರುತ್ತ ಮಾಡುವುದಕ್ಕಿಂತ. ಕಣ್ಣುಗಳನ್ನು ಮುಚ್ಚಿ ಕೆಲಸವನ್ನು ಮಾಡುವುದು ಹೆಚ್ಚು ಉತ್ತಮ ಮಾರ್ಗವಾಗಿದೆ.

ನಾನು ನಿಮಗೆ ವಿವರಿಸಿದಂತೆ, ನೋಡುತ್ತ ಮತ್ತು ಕೇಂದ್ರೀಕರಿಸುತ್ತ ಕೆಲಸಗಳನ್ನು ಮಾಡುವ ಸಾಮಾನ್ಯ ವಿಧಾನಕ್ಕಿಂತ ಹೆಚ್ಚು ಉತ್ತಮವಾಗಿ ಕಣ್ಣುಗಳನ್ನು ಮುಚ್ಚಿ ಕೆಲಸಗಳನ್ನು ಮಾಡಬಹುದು. ಇದಕ್ಕಿಂತ (ಸಾಮಾನ್ಯ ಕಣ್ಣುಗಳಿಂದ) ಹೆಚ್ಚು ನಿಖರವಾದಂಥ ಒಂದು ರೀತಿಯ ದೂರದೃಷ್ಟಿಯನ್ನು ನಾವು ಬೆಳೆಸಿಕೊಳ್ಳಬಹುದು. ನಾನು ಮತ್ತೆ ಹೇಳುತ್ತೇನೆ, ಇದು ಸಾವಿತ್ರಿಯನ್ನು ಓದುವ ಉತ್ತಮ ಮಾರ್ಗವಾಗಿದೆ. ಏಕೆಂದರೆ, ನಾವು ನಮಗಿಂತ ಉತ್ಕೃಷ್ಟವಾದ, ಈ ಸೂಕ್ಷ್ಮ ಜಗತ್ತನ್ನು ಆಳುವಂಥ ಸಂಗತಿಯ ಸಂಪರ್ಕದಲ್ಲಿ ಬರುತ್ತೇವೆ. ಅಲ್ಲಿ ಸಂಗತಿಗಳು ಊಹಾತೀತವಾಗಿ ಸ್ಪಷ್ಟವಾಗಿರುತ್ತವೆ. ಆದುದರಿಂದ ನಾವು ಅದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತೇವೆ, ಮತ್ತು ಅದು ಒಂದು ದಿವ್ಯಜ್ಞಾನದಂತೆ ಬರುತ್ತದೆ....

**ಸಾವಿತ್ರಿಯ ಕುರಿತು**

**– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ**

1. ಸಾವಿತ್ರಿಯು, ಓರ್ವ ದ್ರಷ್ಟಾರನು ತನ್ನ ದೈನಂದಿನದ ಬದುಕಿನಲ್ಲಿ ಸಾಕ್ಷಾತ್ಕರಿಸಿಕೊಂಡ ಆಧ್ಯಾತ್ಮಿಕ ಅನುಭೂತಿಯ ದಾಖಲೆಯಾಗಿದೆ.

2. ಸಾವಿತ್ರಿಯು, ಸಾಧನೆಯ ಪರಮೋಚ್ಚ ಪಾತಳಿಯನ್ನು ಅಧಿರೋಹಿಸುವ ಅಭೀಪ್ಸೆಯುಳ್ಳ ಅನ್ವೇಷಕರಿಗೆ ಮಾರ್ಗದರ್ಶನವನ್ನು ನೀಡುವ ಪೂರ್ಣ ಯೋಗದ ಸಾರವಾಗಿದೆ.

3. ಸಾವಿತ್ರಿಯು, ಈ ಮಹೀತಲವನ್ನು ಮಹಾಕಾರಣದೆಡೆಗೆ ಮೇಲೆತ್ತಲಿಕ್ಕಿರುವ ಪೂರ್ಣ ಯೋಗವಾಗಿದೆ.

4. ಸಾವಿತ್ರಿಯು, ಈ ಮರ್ತ್ಯದಲ್ಲಿ ಭೌತಿಕ ಶರೀರದಲ್ಲಿ ಅವತರಿಸಿ ಬಂದ ಆ ದಿವ್ಯ ಮಾತೆಯು, ಇಲ್ಲಿನ ಅಜ್ಞಾನ–ಅನೃತಗಳನ್ನು ನಿರ್ಮೂಲಿಸಿ, ಇಡೀ ವಲಯವನ್ನು ದಿವ್ಯತೆಯೆಡೆಗೆ ಕೊಂಡೊಯ್ಯಲಿಕ್ಕಿರುವ ಸಾಧನವಾಗಿದೆ.

*

**ಸಾವಿತ್ರಿಯ ಮಹತ್ವ**

ಸಾವಿತ್ರಿಯು ಅಪಾರವಾದ ಮಹತ್ವವನ್ನು ಹೊಂದಿದೆ.

ಸಾವಿತ್ರಿಯಲ್ಲಿರುವ ವಿಷಯಗಳು ಸಾರ್ವತ್ರಿಕವಾಗಿದ್ದು, ಇದರಲ್ಲಿರುವ ದಿವ್ಯ ಜ್ಞಾನವು ದ್ರಷ್ಟಾರರಿಗೆ ಸಾಕ್ಷಾತ್ಕಾರವಾದ ಮಹಾದರ್ಶನದ ಸಾರವಾಗಿದೆ.

ಸಾವಿತ್ರಿಯ ಅಧ್ಯಯನದಲ್ಲಿ ಕಳೆದ ಸಮಯವು ಎಂದಿಗೂ ವ್ಯರ್ಥವಾಗುವದಿಲ್ಲ. ಸಾವಿತ್ರಿಯ ದರ್ಶನದಿಂದ ದುಃಖಗಳೆಲ್ಲ ಮರೆಯಾಗಿ ಆನಂದವು ಎಲ್ಲೆಡೆಗೆ ವ್ಯಾಪಿಸಿಕೊಳ್ಳುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/24–26**

**ಸದಾಕಾಲ ‘ಸಾವಿತ್ರಿ’ಯನ್ನು ಓದುತ್ತಿರು**

**– ಅನು: ಡಾ॥ ಕೆ.ಎಸ್. ಆಮೂರ**

ನಿನಗೆ ಅರ್ಥವಾಗದೇ ಇದ್ದರೂ ಪರವಾ ಇಲ್ಲ. ‘ಸಾವಿತ್ರಿ’ ಕಾವ್ಯವನ್ನು ಯಾವಾಗಲೂ ಓದುತ್ತಿರು. ನೀನು ಓದಿದ ಪ್ರತಿಸಲ ನಿನಗೆ ಹೊಸ ಅನಭವವಾಗುತ್ತದೆ ಎಂಬುದನ್ನು ಕಂಡುಕೊಳ್ಳುವಿ, ಅಲ್ಲಿ ವ್ಯಕ್ತವಾಗದೇ ಇರಬಹುದಾದ ವಿಷಯಗಳು, ನಿನಗೆ ಅರ್ಥವಾಗದೇ ಇದ್ದವುಗಳು ಮೇಲೆದ್ದು ಬರುತ್ತವೆ. ಮತ್ತೆ ಒಮ್ಮೆಗೆ ಸ್ಪಷ್ಟವಾಗುತ್ತವೆ. ಒಂದು ಅನಿರೀಕ್ಷಿತ ದರ್ಶನ ಯಾವಾಗಲೂ ಶಬ್ದಗಳ ಹಾಗೂ ಸಾಲುಗಳ ಮೂಲಕ ಬರುತ್ತದೆ. ನೀನು ಓದಿ ತಿಳಿದುಕೊಳ್ಳಲು ಪ್ರಯತ್ನ ಮಾಡಿದ ಪ್ರತಿಸಲ ಹಿಂದೆ ಅಡಗಿಕೊಂಡಿದ್ದ ಏನೋ ಒಂದು ಸ್ಪಷ್ಟವಾಗಿ, ವಿಶದವಾಗಿ ಕಾಣಿಸಿಕೊಳ್ಳುತ್ತದೆ. ನೀನು ಮೊದಲು ಓದಿದ ಶ್ಲೋಕಗಳೇ ಸ್ವತಃ ನೀನವುಗಳನ್ನು ಮತ್ತೊಮ್ಮೆ ಓದಿದಾಗ ನಿನಗೆ ಭಿನ್ನ ಪ್ರಕಾಶದಲ್ಲಿ ಕಾಣಿಸಿಕೊಳ್ಳುತ್ತವೆ. ಇದು ಹೀಗೆ ತಪ್ಪದೆ ಸಂಭವಿಸುತ್ತದೆ. ಯಾವಾಗಲೂ ನಿನ್ನ

ಅನುಭವವನ್ನು ಶ್ರೀಮಂತಗೊಳಿಸಲಾಗುತ್ತದೆ, ಅದು ಪ್ರತಿ ಹೆಜ್ಜೆಯಲ್ಲಿ ದೊರಕುವ ದಿವ್ಯ ಜ್ಞಾನ.

ಆದರೆ ನೀನು ಅದನ್ನು ಬೇರೆ ಪುಸ್ತಕಗಳನ್ನು ಅಥವಾ ವಾರ್ತಾಪತ್ರಿಕೆಗಳನ್ನು ಓದುವ ರೀತಿಯಲ್ಲಿ ಓದಬಾರದು. ತಲೆಯಲ್ಲಿರುವ ಯೋಚನೆಗಳನ್ನು ದೂರ ಮಾಡಿ ಬರಿದಾಗಿರುವ ಮನಸ್ಸಿನಿಂದ ಓದಬೇಕು, ಅಲ್ಲಿ ಬೇರೆ ಯೋಚನೆಗಳಿಗೆ ಆಸ್ಪದವಿರಬಾರದು. ನೀನು ಬಹಳ ಏಕಾಗ್ರತೆಯಲ್ಲಿರಬೇಕು, ಬರಿದಾಗಿರಬೇಕು, ಸ್ಥಿರ ಹಾಗೂ ತೆರೆದುಕೊಂಡ ಸ್ಥಿತಿಯಲ್ಲಿರಬೇಕು, ಆಗ ಶಬ್ದಗಳು, ಲಯಬದ್ಧತೆಗಳು, ಕಂಪನಗಳು ನೇರವಾಗಿ ಈ ಖಾಲಿ ಕಾಗದ ಸ್ವರೂಪದ್ದರಲ್ಲಿ ಒಳನುಗ್ಗುತ್ತವೆ, ತಮ್ಮ ಮುದ್ರೆಯನ್ನು ಮಿದುಳಿನ ಮೇಲಿರಿಸುತ್ತವೆ, ನೀನು ಯಾವುದೇ ಪ್ರಯತ್ನ ಮಾಡುವ ಅವಶ್ಯಕತೆ ಇಲ್ಲದೆ ವಿವರಗಳನ್ನು ತಿಳಿದುಕೊಳ್ಳುವಿ.

**ಸಾವಿತ್ರಿ; ಒಂದು ಆವಿಷ್ಕಾರ; ಮೋನಾ ಸರ್ಕಾರ**

**ಸಾವಿತ್ರಿಯೊಂದೇ ಸಾಕು**

ನೀನು ಅತ್ಯಂತ ಉನ್ನತ ಶಿಖರಗಳ ಮೇಲೇರಿ ಹೋಗುವಂತಾಗಲು 'ಸಾವಿತ್ರಿ'ಯೊಂದೇ ಸಾಕು. 'ಸಾವಿತ್ರಿ' ಕುರಿತು ನಿಜವಾಗಿ ಹೇಗೆ ಧ್ಯಾನ ಮಾಡಬೇಕು ಎಂಬುದನ್ನು ಮನುಷ್ಯ ತಿಳಿದುಕೊಂಡಿದ್ದರೆ, ಅವನಿಗೆ ಅವಶ್ಯವಾದ ಎಲ್ಲ ಸಹಾಯ ದೊರಕುವುದು. ಈ (ಆಧ್ಯಾತ್ಮದ) ಮಾರ್ಗದಲ್ಲಿ ಸಾಗಬೇಕೆಂದು ಬಯಸುವವನಿಗೆ ಅದು ಮೂರ್ತಸ್ವರೂಪದ ಸಹಾಯ ನೀಡುತ್ತದೆ. ನೀನು ತಲುಪಬೇಕಾದ ಗುರಿಯತ್ತ ದೈವೀ ಪ್ರಭುವೇ ಸ್ವತಃ ಕೈಹಿಡಿದು ಕರೆದೊಯ್ಯುತ್ತಿದ್ದಾನೇನೋ ಎನ್ನುವಂತಿರುತ್ತದೆ. ಆಗ ಪ್ರತಿಯೊಂದು ಪ್ರಶ್ನೆ, ಅದು ಎಷ್ಟೇ ವೈಯಕ್ತಿಕವಾಗಿರಲಿ, ಅದಕ್ಕೆ ಉತ್ತರ ಇಲ್ಲಿ ದೊರಕುತ್ತದೆ, ಪ್ರತಿಯೊಂದು ತೊಂದರೆ ತನ್ನ ಪರಿಹಾರವನ್ನು ಇಲ್ಲಿ ಕಂಡುಕೊಳ್ಳುತ್ತದೆ, ಇದೆಲ್ಲ ಯೋಗವನ್ನು ಆಚರಿಸುವವನಿಗೆ ಅವಶ್ಯವಾಗಿರುತ್ತದೆ.

"ಅವರು ಒಂದೇ ಒಂದು ಪುಸ್ತಕದಲ್ಲಿ ಇಡೀ ವಿಶ್ವವು ತುಂಬಿತುಳುಕುವಂತೆ ಮಾಡಿದ್ದಾರೆ." ಅದು ಹೋಲಿಸಲು ಸಾಧ್ಯವಿಲ್ಲದ ಪರಿಪೂರ್ಣತೆ ಇರುವ ಅದ್ಭುತ ಮತ್ತು ಉಜ್ವಲ ಕೃತಿ.

'ಸಾವಿತ್ರಿ' ಮಹಾಕಾವ್ಯವನ್ನು ರಚಿಸುವದಕ್ಕಿಂತ ಮೊದಲು ಶ್ರೀ ಅರವಿಂದರು ನನಗೆ ಹೇಳಿದರು: "ಹೊಸದೊಂದು ಸಾಹಸದಲ್ಲಿ ತೊಡಗಿಕೊಳ್ಳಲು ನಾನು ಒತ್ತಾಯಕ್ಕೊಳಗಾಗಿದ್ದೇನೆ. ಮೊದಲು ಅದನ್ನು ಕೈಗೊಳ್ಳಲು ನಾನು ಹಿಂದುಮುಂದು ನೋಡುತ್ತಿದ್ದೆ, ಆದರೆ ಈಗ ನಿರ್ಧಾರ ಮಾಡಿದ್ದೇನೆ, ಅದಾಗ್ಯೂ ಎಷ್ಟರ ಮಟ್ಟಿಗೆ ನಾನು ಅದರಲ್ಲಿ ಯಶಸ್ಸು ಗಳಿಸುತ್ತೇನೆ ಎಂಬುದು ನನಗೆ ತಿಳಿಯದು. ಸಹಾಯಕ್ಕಾಗಿ ಪ್ರಾರ್ಥಿಸುತ್ತೇನೆ." ಅದೇನಿತ್ತು ಎಂಬುದು ನಿನಗೆ ತಿಳಿದಿದೆಯೇ? ಅದನ್ನು ಹೇಳುವ ಮೊದಲು ನಿನಗೆ ಅದರ ಬಗ್ಗೆ ಎಚ್ಚರಿಕೆ ನೀಡುತ್ತೇನೆ – ಅದು ಅವರು ಮಾತನಾಡುವ ರೀತಿಯಾಗಿತ್ತು. ಅವರಲ್ಲಿ ಎಷ್ಟೊಂದು ದೈವೀ ವಿನಮ್ರತೆ ಮತ್ತು ನಿರಾಡಂಬರತೆಗಳಿದ್ದವು, ಅವರು ತಮ್ಮನ್ನು ಎಂದೂ ಧೃಡೀಕರಿಸುತ್ತಿರಲಿಲ್ಲ. ಅವರು ಅದನ್ನು ಪ್ರಾರಂಭಿಸಿದ ದಿನದಂದು, ವಾಸ್ತವವಾಗಿ ನನಗೆ ಹೇಳಿದರು: "ಅನಂತದ ವಿಸ್ತಾರದಲ್ಲಿ, ಚುಕ್ಕಾಣಿ ರಹಿತ ನೌಕೆಯಲ್ಲಿ ನನ್ನ ಪ್ರಯಾಣವನ್ನು ಪ್ರಾರಂಭಿಸಿದ್ದೇನೆ." ಮತ್ತು ಒಮ್ಮೆ ಅದನ್ನು ಪ್ರಾರಂಭಿಸಿದ ನಂತರ ಅಡೆತಡೆಯಿಲ್ಲದೆ ಪುಟಗಳ ನಂತರ ಪುಟಗಳನ್ನು ತುಂಬುತ್ತ ಬರೆದರು. ಅದಾಗಲೇ ಅದು ಮೇಲೆಲ್ಲಿಯೋ ತಯಾರಾಗಿ ಪೂರ್ತಿಗೊಂಡಿತ್ತು, ಅವರು ಅದನ್ನು ಇಲ್ಲಿ ಕೇವಲ ಪುಟಗಳಲ್ಲಿ ಮಸಿಯಿಂದ ಬರೆದು ತೆಗೆಯಬೇಕಾಗಿತ್ತೇನೋ ಎನ್ನುವಂತಿತ್ತು.

ಸತ್ಯ ಹೇಳುವುದಾದರೆ 'ಸಾವಿತ್ರಿ'ಯ ಇಡೀ ರೂಪ, ಒಟ್ಟಾರೆ ಅತಿ ಉಚ್ಚತರ ಪ್ರಾಂತದಿಂದ ಇಳಿದು ಬಂದಿತ್ತು. ಮತ್ತು ಶ್ರೀ ಅರವಿಂದರು ತಮ್ಮ ಪ್ರತಿಭೆಯಿಂದ ಆ ಸಾಲುಗಳಿಗೆ ಅತ್ಯುತ್ತಮ ಉಚ್ಚತರ ಶೈಲಿಯಲ್ಲಿ ವ್ಯವಸ್ಥಿತ ರೂಪ ಕೊಟ್ಟರು. ಕೆಲವೊಮ್ಮೆ ಸಾಲುಗಳ ಮೊತ್ತವೇ ತೆರೆದುಕೊಳ್ಳುತ್ತಿತ್ತು ಮತ್ತು ಅದು ಅದೇ ರೂಪದಲ್ಲಿ ಉಳಿದುಕೊಳ್ಳಲು ಬಿಟ್ಟುಕೊಡುತ್ತಿದ್ದರು. ಅವರು ಬಹಳ ಶ್ರಮ ವಹಿಸಿ, ದಣಿದುಕೊಳ್ಳದೆ ಕಾರ್ಯವನ್ನು ಕೈಗೊಂಡರು, ಅದರಿಂದಾಗಿ ಸ್ಫೂರ್ತಿ, ಸಾಧ್ಯವಾಗಬಹುದಾದ ಅತ್ಯಂತ ಉಚ್ಚ ಶಿಖರದಿಂದ ಬರುವಂತಾಯಿತು. ಅವರು ಅದೆಂತಹ ಒಳ್ಳೆಯ ಕೃತಿಯನ್ನು ಸೃಷ್ಟಿಸಿದ್ದಾರೆ! ಹೌದು, ಅದು ತನ್ನಲ್ಲಿಯೇ ನಿಜವಾದ ಕೃತಿ. ಆ ಕೃತಿಗೆ ಸಮಾನವಾದದ್ದು ಬೇರೊಂದಿಲ್ಲ. ಪ್ರತಿಯೊಂದೂ ಅಲ್ಲಿದೆ. ಅದನ್ನು ಎಷ್ಟೊಂದು ಸರಳ ಮತ್ತು ಸ್ಪಷ್ಟ ರೂಪದಲ್ಲಿ ಇರಿಸಲಾಗಿದೆ, ಶ್ಲೋಕಗಳು ಪರಿಪೂರ್ಣವಾಗಿ ಸಾಮರಸ್ಯದಲ್ಲಿವೆ, ನಿರಾತಂಕವಾಗಿವೆ, ಸನಾತನ ಸತ್ಯವನ್ನು ಹೊಂದಿವೆ. ನನ್ನ ಮಗು, ನಾನು ಎಷ್ಟೋ ವಿಷಯಗಳನ್ನು ಓದಿದ್ದೇನೆ, ಆದರೆ

ಗ್ರೀಕ್, ಲ್ಯಾಟಿನ್, ಇಂಗ್ಲಿಷ್, ಸಹಜವಾಗಿ ಫ್ರೆಂಚ್ ಮತ್ತು ಜರ್ಮನ್ ಭಾಷೆಗಳಲ್ಲಿರುವ ಅತ್ಯುತ್ತಮ ಸಾಹಿತ್ಯವನ್ನು ಅಭ್ಯಾಸ ಮಾಡಿದ್ದೇನೆ, ಅವುಗಳಲ್ಲಿ ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯ ಶ್ರೇಷ್ಠ ಮಹಾಕಾವ್ಯಗಳೂ ಇದ್ದವು, ಆದರೆ ನಾನು ಮತ್ತೆ ಹೇಳಲು ಬಯಸುವುದೇನೆಂದರೆ ನಾನೆಲ್ಲಿಯೂ 'ಸಾವಿತ್ರಿ'ಗೆ ಹೋಲಿಸಬಹುದಾದುದನ್ನು ಕಾಣಲಿಲ್ಲ. ಈ ಎಲ್ಲ ಸಾಹಿತ್ಯಕ ಕೃತಿಗಳಲ್ಲಿ, ಕೆಲವೊಂದನ್ನು ಹೊರತುಪಡಿಸಿ, ಉಳಿದವೆಲ್ಲ ನನಗೆ ಬರಿದಾದವುಗಳು, ಪೊಳ್ಳಾದವುಗಳು, ಆಳವಾದ ನೈಜತೆಯನ್ನು ಹೊಂದಿರದೇ ಇರುವಂತಹವು ಎಂದು ಕಂಡುಬಂದವು, ಆ ವಿಶಿಷ್ಟ ಕೃತಿಗಳೂ ಕೂಡ 'ಸಾವಿತ್ರಿ'ಯಲ್ಲಿರುವ ಕೇವಲ ಅಂಶ ಮಾತ್ರದ್ದನ್ನು ಪ್ರತಿನಿಧಿಸುತ್ತವೆ. ಅವರು ಅಮರ ಹಾಗೂ ಸನಾತನವಾದ ಏನೋ ಒಂದನ್ನು ಸೃಷ್ಟಿಸಿದರು, ಅದರಲ್ಲಿ ಎಂತಹ ಹಿರಿಮೆ, ಹರವು ಹಾಗೂ ನೈಜತೆಗಳಿವೆ! ಇಡೀ ಜಗತ್ತಿನಲ್ಲಿ ಅಂತಹುದು ಬೇರೊಂದಿಲ್ಲ ಎಂದು ಮತ್ತೊಮ್ಮೆ ಹೇಳುತ್ತೇನೆ. ಅದರಲ್ಲಿರುವ ನೈಜತೆಯ ದರ್ಶನವನ್ನು ಎಂದರೆ ಸ್ಫೂರ್ತಿಯ ಹೃದಯದ ಸಾರಭೂತ ದ್ರವ್ಯವನ್ನು ಹೊರಗಿಸಿದಾಗ್ಯೂ ಶ್ಲೋಕಗಳು ಇರುವ ರೀತಿಯನ್ನು ಗಮನಿಸಿದಾಗ ಅವು ಅನನ್ಯವಾದವುಗಳು, ಅತ್ಯಂತ ಶ್ರೇಷ್ಠ ಸಾಂಪ್ರದಾಯಿಕ ರೀತಿಯವು ಎಂಬುದನ್ನು ಕಂಡುಕೊಳ್ಳಬಹುದು. ಅವರು ಸೃಷ್ಟಿಸಿದಂತಹುದನ್ನು ಮನುಷ್ಯ ಕಲ್ಪನೆಯಲ್ಲೂ ಕೂಡ ತಂದುಕೊಳ್ಳಲಾರ. ಏಕೆಂದರೆ ಪ್ರತಿಯೊಂದು ಅದರಲ್ಲಿದೆ.

### ಸಾವಿತ್ರಿಯು ದಿವ್ಯ ಜ್ಞಾನವನ್ನು ಹೊಂದಿದೆ

ಹಾಗಾಗಿ 'ಸಾವಿತ್ರಿ' ದಿವ್ಯ ಜ್ಞಾನ ಹೊಂದಿದೆ, ಧ್ಯಾನಯೋಗ್ಯವಾಗಿದೆ, ಅನಂತ ಹಾಗೂ ಸನಾತನನಾದವನ ಶೋಧ ಕುರಿತಾಗಿದೆ ಎಂದು ಹೇಳಬಹುದು. ಅಮರತ್ವಕ್ಕಾಗಿರುವ ಈ ಅಭೀಪ್ಸೆಯೊಂದಿಗೆ ಅದನ್ನು ಓದಿದರೆ ಅದು ಅಮರತ್ವವನ್ನು ಸಿದ್ಧಿಸಿಕೊಳ್ಳುವದಕ್ಕೆ ಮಾರ್ಗದರ್ಶನ ಮಾಡುವುದು. 'ಸಾವಿತ್ರಿ'ಯನ್ನು ಓದುವುದೆಂದರೆ ನಿಜವಾದ ಭಗವಂತನನ್ನು ಸಿದ್ಧಿಸಿಕೊಂಡ ಹಾಗೆ. ಯೋಗದ ಪ್ರತಿಯೊಂದು ಹೆಜ್ಜೆಯನ್ನು ಇಲ್ಲಿ ಗಮನಿಸಲಾಗಿದೆ, ಇತರ ಎಲ್ಲ ಯೋಗಗಳ ರಹಸ್ಯವೂ ಇಲ್ಲದೆ. ಯಾವಾಗಲೂ ಇರುವುದನ್ನು ಹಾಗೂ ಇಲ್ಲಿ ತೆರೆದು ತೋರಿಸಿರುವದನ್ನು ಮನುಷ್ಯ ಅನುಸರಿಸಿದರೆ ಅವನು ಕೊನೆಗೆ ಅತಿಮಾನಸ ಯೋಗದ ಪರಿವರ್ತನೆಯನ್ನು ನಿಶ್ಚಿತವಾಗಿ ತಲುಪುವನು. ಅದು ನಿಜವಾಗಿ, ವಿಫಲನಾಗದ, ಎಂದೂ ಕೈಬಿಡದ

ಮಾರ್ಗದರ್ಶಕನಿದ್ದ ಹಾಗೆ, (ಆಧ್ಯಾತ್ಮಿಕ) ಮಾರ್ಗವನ್ನು ಅನುಸರಿಸುವವನಿಗೆ ಅವನ ಆಧಾರ ಯಾವಾಗಲೂ ಇರುತ್ತದೆ. 'ಸಾವಿತ್ರಿ'ಯ ಪ್ರತಿಯೊಂದು ಶ್ಲೋಕ ಮಂತ್ರವಿದ್ದ ಹಾಗೆ, ಮನುಷ್ಯ ಜ್ಞಾನದ ಮೂಲಕ ವಶಪಡಿಸಿಕೊಂಡದ್ದನ್ನೆಲ್ಲ ಅದು ಮೀರಿಹೋಗುತ್ತದೆ. ಶಬ್ದಗಳ ಅಭಿವ್ಯಕ್ತಿ ಹಾಗೂ ಅವುಗಳನ್ನು ವ್ಯವಸ್ಥೆಗೊಳಪಡಿಸುವಿಕೆ. ಇವು ಹೇಗಿವೆಯೆಂದರೆ ಅವುಗಳ ಲಯಬದ್ಧತೆಯ ಗುಂಜಾರವ ಧ್ವನಿಯ ಮೂಲವಾದ 'ಓಂ'ದತ್ತ ನಿಮ್ಮನ್ನು ಕರೆದೊಯ್ಯುತ್ತದೆ ಎಂದು ನಾನು ಮತ್ತೊಮ್ಮೆ ಹೇಳುತ್ತೇನೆ.

*

**ಸಾವಿತ್ರಿಯು ಸರ್ವ ಜ್ಞಾನವನ್ನು ಒಳಗೊಂಡಿದೆ**

ನನ್ನ ಮಗು, ಅದರಲ್ಲಿ ಅನುಭಾವ, ಯಕ್ಷಿಣಿ ವಿದ್ಯೆ, ತತ್ತ್ವಜ್ಞಾನ ಹಾಗೂ ಮಾನವ, ದೇವರುಗಳು, ಸೃಷ್ಟಿ, ಪ್ರಕೃತಿ ಇವುಗಳಲ್ಲಿ ಪ್ರತಿಯೊಂದರ ಇತಿಹಾಸ ಇವೆಲ್ಲ ಇವೆ. ವಿಶ್ವವನ್ನು ಹೇಗೆ ಸೃಷ್ಟಿಸಲಾಯಿತು, ಏತಕ್ಕಾಗಿ, ಯಾವ ಉದ್ದೇಶಕ್ಕಾಗಿ, ಯಾವ ಅದೃಷ್ಟವನ್ನು ಕಂಡುಕೊಳ್ಳುವದಕ್ಕಾಗಿ ಅದು ಇದೆ. – ಇದೆಲ್ಲದರ ವಿವರಣೆ ಅಲ್ಲಿದೆ. ಅದರಲ್ಲಿ ನಿನ್ನ ಎಲ್ಲ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವಿ ಪ್ರತಿಯೊಂದನ್ನೂ ವಿವರಿಸಲಾಗಿದೆ. ಮಾನವನ ಹಾಗೂ ಉತ್ಕ್ರಾಂತಿಯ ಭವಿಷ್ಯತ್ತಿನ ವಿಚಾರವೂ ಅಲ್ಲಿದೆ, ಅದನ್ನು ಬೇರೆ ಯಾವ ಮಾನವನೂ ತಿಳಿದುಕೊಂಡಿಲ್ಲ. ಅದನ್ನೆಲ್ಲ ಅವರು ಸುಂದರ ಹಾಗೂ ಸ್ಪಷ್ಟ ಶಬ್ದಗಳಲ್ಲಿ ವರ್ಣಿಸಿದ್ದಾರೆ. ಜಗತ್ತಿನ ರಹಸ್ಯಗಳನ್ನು ಬಿಡಿಸಿ ನೋಡಲು ಬಯಸುವ ಆಧ್ಯಾತ್ಮಿಕ ಸಾಹಸಿಗರು ಅದರಲ್ಲಿ ಅದನ್ನು ಬಹಳ ಸುಲಭವಾಗಿ ತಿಳಿದುಕೊಳ್ಳಬಲ್ಲರು. ಆದರೆ ಈ ರಹಸ್ಯವನ್ನು ಶಬ್ದಗಳು ಹಾಗೂ ಸಾಲುಗಳ ಹಿಂದೆ ವ್ಯವಸ್ಥಿತ ರೀತಿಯಲ್ಲಿ ಗುಪ್ತವಾಗಿ ಇರಿಸಲಾಗಿದೆ, ಅದನ್ನು ಶೋಧಿಸಲು ಮನುಷ್ಯ ಅವಶ್ಯವಿರುವ ನಿಜವಾದ ಪ್ರಜ್ಞೆಯ ಹಂತಕ್ಕೆ ಏರಿ ಹೋಗಬೇಕು. ಭವಿಷ್ಯತ್ತನ್ನು ಕುರಿತು ಎಲ್ಲವನ್ನೂ, ಮುಂದೆ ಬರಲಿರುವದನ್ನೂ ಕುರಿತು ನಿಖರವಾಗಿ, ಅದ್ಭುತ ರೀತಿಯಲ್ಲಿ ಸ್ಪಷ್ಟವಾಗಿ ಪರಿಚಯ ಮಾಡಿಕೊಡಲಾಗಿದೆ. ಶ್ರೀ ಅರವಿಂದರು ಇಲ್ಲಿ ಸತ್ಯವನ್ನು ಕಂಡುಕೊಳ್ಳಲು, ಪ್ರಜ್ಞೆಯನ್ನು ಶೋಧಿಸಲು ಹಾಗೂ ಪ್ರಕಾಶ ಅದರಲ್ಲಿ ಒಳನುಗ್ಗಿ ಅದನ್ನು ಪರಿವರ್ತಿಸಲು ಇರುವ ಸಮಸ್ಯೆಯನ್ನು ಪರಿಹರಿಸಲು ಬೀಗದ ಕೈ ಕೊಡುತ್ತಾರೆ. ಅಜ್ಞಾನದಿಂದ ಮುಕ್ತಿ ಹೇಗೆ ಪಡೆಯಬೇಕು.

ಅತಿಮಾನಸ ಪ್ರಜ್ಞೆಯತ್ತ ಹೇಗೆ ಏರಿ ಹೋಗಬೇಕು, ಅದಕ್ಕಾಗಿ ದಾಟಿ ಹೋಗಬೇಕಾಗಿರುವ ಪ್ರತಿಯೊಂದು ಹಂತ, ಪ್ರಜ್ಞೆಯ ಸ್ತರ ಇವುಗಳನ್ನು ಕುರಿತು ಮಾರ್ಗ ತೆರೆದು ತೋರಿಸಿದ್ದಾರೆ, ಮನುಷ್ಯ ಅಮರತ್ವದತ್ತ ಸಾಗುವಾಗ ಮೃತ್ಯು ಒಡ್ಡುವ ಅಡೆತಡೆಗಳನ್ನು ಹೇಗೆ ದಾಟಿ ಹೋಗಬೇಕು ಎಂಬುದನ್ನೂ ವಿವರಿಸಿದ್ದಾರೆ. ಈ ಪ್ರಯಾಣಕ್ಕಾಗಿ ಅವಶ್ಯವಿರುವ ಪ್ರತಿಯೊಂದು ವಿವರವನ್ನು, ಇನ್ನೂ ಹೆಚ್ಚಿನದನ್ನು ಅದರಲ್ಲಿ ಕಂಡುಕೊಳ್ಳುವಿ. 'ಸಾವಿತ್ರಿ' ವಾಚನ ನಿಜವಾದ ಅನುಭವ. ಮನುಷ್ಯ ಒಶಪಡಿಸಿಕೊಂಡ ಮತ್ತು ಭವಿಷ್ಯತ್ತಿನಲ್ಲಿ ಕಂಡುಕೊಳ್ಳಬಹುದಾದ ಎಲ್ಲ ರಹಸ್ಯಗಳನ್ನು ಅವರು ತೆರೆದು ತೋರಿಸಿದ್ದಾರೆ. ಹೀಗೆ ಇದೆಲ್ಲವನ್ನೂ 'ಸಾವಿತ್ರಿ'ಯ ಆಳದಲ್ಲಿ ಕಂಡುಕೊಳ್ಳಬಹುದು. ಅದೆಲ್ಲವನ್ನೂ ಶೋಧಿಸಲು ಮನುಷ್ಯನಲ್ಲಿ ಜ್ಞಾನವಿರಬೇಕಾಗುತ್ತದೆ, ಮೃತ್ಯುವಿನ ಮೇಲೆ ಜಯ ಸಾಧಿಸಿದ ಅನುಭವ ಇರಬೇಕಾಗುತ್ತದೆ. ಸಮಗ್ರ ಯೋಗದಲ್ಲಿ ಸಮಗ್ರವಾಗಿ ಮುಂದುವರಿಯಲು ಅವರು ಎಲ್ಲ ಹಂತಗಳನ್ನು ಗಮನಿಸಿದ್ದಾರೆ, ಪ್ರತಿಯೊಂದು ಹೆಜ್ಜೆಯನ್ನು ಗುರುತಿಸಿದ್ದಾರೆ.

**ಜ್ಞಾನಪೂರ್ಣ ಟಿಪ್ಪಣಿಗಳು; ಮೋನಾ ಸರ್ಕಾರ**

**ಇದು ಶ್ರೀ ಅರವಿಂದರ ಸ್ವಂತ ಅನುಭೂತಿಯಾಗಿದೆ**

ಇದೆಲ್ಲವೂ ಶ್ರೀ ಅರವಿಂದದ ಸ್ವಂತ ಅನುಭವ, ಅತ್ಯಂತ ಆಶ್ಚರ್ಯಕಾರಕ ವಿಷಯವೆಂದರೆ ಅದು ನನ್ನ ಅನುಭವವೂ ಕೂಡ ಆಗಿದೆ. ಅದು ಅವರು ಕಾರ್ಯಗತಗೊಳಿಸಿದ ನನ್ನ ಸಾಧನೆಯಾಗಿದೆ. ಪ್ರತಿಯೊಂದು ವಸ್ತು, ಪ್ರತಿಯೊಂದು ಘಟನೆ, ಪ್ರತಿಯೊಂದು ಸಿದ್ಧಿ, ಎಲ್ಲ ವರ್ಣನೆಗಳು, ಎಲ್ಲ ಬಣ್ಣಗಳೂ ಕೂಡ ನಾನು ನೋಡಿದವುಗಳೇ ಆಗಿವೆ, ಶಬ್ದಗಳು ಮತ್ತು ಪದಗುಚ್ಛಗಳು ನಾನು ಕೇಳಿಸಿಕೊಂಡವುಗಳೇ ಆಗಿವೆ. ಇದೆಲ್ಲವೂ ನಾನು ಆ ಪುಸ್ತಕವನ್ನು ಓದುವದಕ್ಕಿಂತಲೂ ಮೊದಲೇ ಆಗಿತ್ತು. ನಂತರ 'ಸಾವಿತ್ರಿ' ಪುಸ್ತಕವನ್ನು ಹಲವಾರು ಸಲ ಓದಿದೆ, ಆದರೆ ಅದಕ್ಕೆ ಮೊದಲು ಅದನ್ನು ಅವರು ಬರೆಯುವಾಗ ಅದನ್ನು ನನಗೆ ಓದಿ ಹೇಳುತ್ತಿದ್ದರು. ಪ್ರತಿದಿನ ಬೆಳಿಗ್ಗೆ ಅವರು 'ಸಾವಿತ್ರಿ' ಓದುವುದನ್ನು ಕೇಳುತ್ತಿದ್ದೆ. ಅವರು ರಾತ್ರಿ ಸಮಯದಲ್ಲಿ ಬರೆಯುತ್ತಿದ್ದರು ಮತ್ತು ಬೆಳಿಗ್ಗೆ ಅದನ್ನು ಓದಿ ಹೇಳುತ್ತಿದ್ದರು. ಅವರು ಬೆಳಿಗ್ಗೆ ಓದಿದ್ದನ್ನು ನಾನು ಮೊದಲನೆಯ ದಿನ ರಾತ್ರಿ ಪ್ರತಿ ಶಬ್ದವನ್ನು ಅನುಭವಕ್ಕೆ ತಂದುಕೊಂಡಿರುತ್ತಿದ್ದೆ. ಹೌದು ಎಲ್ಲ ವರ್ಣನೆಗಳು,

ನಾನು ನೋಡಿದ ಚಿತ್ರಗಳು, ಕೇಳಿಸಿಕೊಂಡಿದ್ದ ಶಬ್ದಗಳು ಇವೆಲ್ಲವನ್ನೂ ಅವರು ಅದ್ಭುತ ಕಾವ್ಯ ರೂಪದಲ್ಲಿ ಇಳಿಸಿದ್ದನ್ನು ಕೇಳುತ್ತಿದ್ದೆ. ಹೌದು, ಅವು ನಿಖರವಾದ ಹಿಂದಿನ ದಿನ ನನ್ನ ಅನುಭವಕ್ಕೆ ಬಂದ ವಿಷಯಗಳಾಗಿರುತ್ತಿದ್ದವು, ಅವುಗಳನ್ನು ಅವರು ಮರುದಿನ ಬೆಳಿಗ್ಗೆ ಓದಿ ಹೇಳುತ್ತಿದ್ದರು. ಅದು ಆಕಸ್ಮಿಕ ಘಟನೆ ಎನ್ನುವ ರೀತಿಯಲ್ಲಿ ಎಂದೋ ಒಂದು ದಿನ ನಡೆದದ್ದಲ್ಲ, ಆದರೆ ಹಲವಾರು ದಿನಗಳ ಕಾಲ ಒಟ್ಟಿನಲ್ಲಿ ಸತತ ಹಾಗೆ ನಡೆದು ಬಂದಿತ್ತು. ಅವರು ಹೇಳಿದ್ದನ್ನು ಹಿಂದಿನ ದಿನದ ನನ್ನ ಅನುಭವಗಳೊಂದಿಗೆ ಹೋಲಿಸಿ ನೋಡುತ್ತಿದ್ದೆ, ನಂತರ ಅವರು ಅದನ್ನು ಬರೆದಿಡುತ್ತಿದ್ದರು, ಇಲ್ಲ ನಾನು ನೋಡಿದ್ದು ಅವರಿಗೆ ಅದಾಗಲೇ ತಿಳಿದಿರುತ್ತಿತ್ತು. ಅಜ್ಞಾತವಾದುದರಲ್ಲಿ ಇಲ್ಲವೆ ಅದಕ್ಕೂ ಹೆಚ್ಚಾಗಿ ಅತಿಮನಸ್ಸಿನಲ್ಲಿ ನಾವಿಬ್ಬರೂ ಸಹಯೋಗದಿಂದ ಕೈಕೊಂಡ ಸಾಹಸವನ್ನು ಅವರು ನನ್ನ ಅನುಭವಗಳಿರುವ ರೀತಿಯಲ್ಲಿಯೇ ಪರಿಚಯಿಸಿ ಕೊಟ್ಟಿದ್ದಾರೆ.

ಇವು ಅವರು ಜೀವಿಸಿದ ಅನುಭವಗಳು, ನೈಜತೆಗಳು ಹಾಗೂ ವಿಶ್ವಾತೀತ ಸತ್ಯ. ಅವರು ಇವುಗಳನ್ನೆಲ್ಲ ಮನುಷ್ಯ ಭೌತಿಕವಾಗಿ ಸಂತೋಷ, ದುಃಖಗಳನ್ನು ಅನುಭವಕ್ಕೆ ತಂದುಕೊಳ್ಳುವ ರೀತಿಯಲ್ಲಿ ತೆಗೆದುಕೊಂಡಿದ್ದರು. ಅವರು ಅಚೇತನದ ಕಾರ್ಗತ್ತಲೆಯಲ್ಲಿ ಮೃತ್ಯುವಿನ ನೆರೆಹೊರೆಯಲ್ಲಿಯೂ ಕೂಡ ಅಲೆದಾಡಿದ್ದರು, ನರಕದ ಯಾತನೆಗಳನ್ನು ತಾಳಿಕೊಂಡಿದ್ದರು. ಸಾರ್ವಭೌಮ ಹರಹಿನಲ್ಲಿ ಉಸಿರಾಡಿಸಲು, ಪರಮೋಚ್ಚ ಆನಂದದಲ್ಲಿ ಪ್ರವೇಶಿಸಲು ಅವರು ಜಗತ್ತಿನ ದುಃಸ್ಥಿತಿಯ ಮಣ್ಣಿನೊಳಗಿಂದ ಹೊರಹೊಮ್ಮಿ ಬಂದರು. ಈ ಎಲ್ಲ ಲೋಕಗಳನ್ನು ದಾಟಿ ಹೋದರು. ಮನುಷ್ಯ ಕಲ್ಪನೆ ಮಾಡಿಕೊಳ್ಳಲು ಸಾಧ್ಯವಿರದಂತಹ ವೇದನೆಗೆ ಒಳಗಾದರು, ಅದನ್ನು ತಾಳಿಕೊಂಡರು. ಇಂದಿನವರೆಗೆ ಬೇರೆ ಯಾರೂ ಅವರ ಹಾಗೆ ವೇದನೆಗೆ ಒಳಗಾದವರಿಲ್ಲ. ವೇದನೆಯನ್ನು ಸಂತೋಷವಾಗಿ ಪರಿವರ್ತಿಸುವದಕ್ಕಾಗಿ ಮತ್ತು ಪರಮೋಚ್ಚನೊಡನೆ ಏಕತೆ ಪಡೆಯುವದಕ್ಕಾಗಿ ಅವರು ವೇದನೆಯನ್ನು ಸ್ವೀಕರಿಸಿದರು. ಇದು ಅನನ್ಯವಾದದ್ದು, ಜಗತ್ತಿನ ಇತಿಹಾಸದಲ್ಲಿ ಇದಕ್ಕೆ ಹೋಲಿಸಬಹುದಾದ ಬೇರೊಂದು ಘಟನೆಯಿಲ್ಲ. ಇದು ಹಿಂದೆಂದೂ ಸಂಭವಿಸಿರದ ವಿಷಯವಾಗಿದೆ. ಅತಿಮಾನಸದತ್ತ ನಾವು ನಿಶ್ಚಿತತೆಯಿಂದ ಹೆಜ್ಜೆ ಇಡಲು ಶಕ್ತರಾಗುವುದಕ್ಕಾಗಿ ಅಜ್ಞಾತದಲ್ಲಿ ಮಾರ್ಗವನ್ನು ಗುರುತಿಸಿದ ಮೊದಲ ವ್ಯಕ್ತಿ ಇವರಾಗಿದ್ದಾರೆ. ಅವರು ಆ ಕಾರ್ಯವನ್ನು ನಮಗೆ

ಸುಲಭವಾದದ್ದನ್ನಾಗಿ ಮಾಡಿದ್ದಾರೆ. 'ಸಾವಿತ್ರಿ'ಯಲ್ಲಿ ಅವರ 'ಪರಿವರ್ತನೆಯ ಯೋಗ' ಕುರಿತು ಪೂರ್ತಿ ವಿವರಗಳಿವೆ ಮತ್ತು ಈ ಯೋಗ ಪೃಥ್ವಿ–ಪ್ರಜ್ಞೆಯಲ್ಲಿ, ಈಗ, ಮೊದಲ ಸಲ ಕಾಣಿಸಿಕೊಂಡಿದೆ.

*

**ಸಾವಿತ್ರಿಯ ಮೌಲ್ಯಗಳನ್ನು ಸ್ವೀಕರಿಸಲು ಮಾನವನು ಇನ್ನೂ ಸಿದ್ಧನಾಗಿಲ್ಲ**

ಮನುಷ್ಯ ಅದನ್ನು ಸ್ವೀಕರಿಸಿಲು ಇನ್ನೂ ಸಿದ್ಧನಾಗಿಲ್ಲ ಎಂದು ನನಗನ್ನಿಸುತ್ತದೆ. ಅದು ಅವನಿಗೆ ಅತಿ ಉನ್ನತವಾದದ್ದು ಹಾಗೂ ವಿಶಾಲವಾದದ್ದಾಗಿದೆ. ಅವನು ಅದನ್ನು ತಿಳಿದುಕೊಳ್ಳಲಾರ, ಗ್ರಹಿಸಲಾರ ಏಕೆಂದರೆ ಅವನು ಅದನ್ನು ಮನಸ್ಸಿನಿಂದ 'ಸಾವಿತ್ರಿ'ಯ ಮೂಲಕ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಅದನ್ನು ಅರ್ಥ ಮಾಡಿಕೊಳ್ಳಲು ಹಾಗೂ ಜೀರ್ಣಿಸಿಕೊಳ್ಳಲು ಆಧ್ಯಾತ್ಮಿಕ ಅನುಭವಗಳು ಬೇಕಾಗುತ್ತವೆ. (ಯೋಗದ) ಮಾರ್ಗದ ಮೇಲೆ ಮನುಷ್ಯ ಹೆಚ್ಚು ಹೆಚ್ಚಾಗಿ ಮುಂದುವರಿದು ಹೋದ ಹಾಗೆ ಅವನು ಅದನ್ನು ಹೆಚ್ಚಿನ ರೀತಿಯಲ್ಲಿ ಜೀರ್ಣೀಸಿಕೊಳ್ಳುವನು, ಮತ್ತು ಅದು ಒಳ್ಳೆಯದು. ಇಲ್ಲ, ಕೇವಲ ಭವಿಷ್ಯತ್ತಿನಲ್ಲಿ ಮೆಚ್ಚಿಗೆ ಪಡೆಯಲಿರುವ ವಿಷಯ, 'ಭವಿಷ್ಯತ್ತಿನ ಕಾವ್ಯ' ಎಂಬ ಗ್ರಂಥದಲ್ಲಿ ಶ್ರೀ ಅರವಿಂದರು ಹೇಳಿದ ಹಾಗೆ 'ಸಾವಿತ್ರಿ' ನಾಳಿನ ಕಾವ್ಯ. ಅದು ಬಹಳ ಸೂಕ್ಷ್ಮವಾದದ್ದು, ಹಾಗೂ ಸುಸಂಸ್ಕೃತವಾದದ್ದು. ಧ್ಯಾನದಲ್ಲಿ 'ಸಾವಿತ್ರಿ' ಪ್ರಕಾಶಿತವಾಗುತ್ತದೆ, ಮನಸ್ಸಿನಲ್ಲಾಗಲಿ, ಮನಸ್ಸಿನ ಮೂಲಕವಾಗಲಿ ಆಗುವದಿಲ್ಲ.

ಜನರು ವರ್ಜಿಲ್ ಇಲ್ಲವೆ ಹೋಮರ್ ಇವರ ಕಾವ್ಯದೊಂದಿಗೆ 'ಸಾವಿತ್ರಿ' ಕಾವ್ಯವನ್ನು ಹೋಲಿಸಿ ಅದು ಕೆಳಮಟ್ಟದ್ದಾಗಿದೆ ಎಂದು ಹೇಳುವ ಹುಚ್ಚು ಧೈರ್ಯ ತೋರಿಸುತ್ತಾರೆ. ಅವರು ಅದನ್ನು ಅರ್ಥಮಾಡಿಕೊಂಡಿಲ್ಲ, ಅರ್ಥಮಾಡಿಕೊಳ್ಳ–ಲಾರರು. ಅವರಿಗೇನು ತಿಳಿದಿದೆ? ಏನೂ ಇಲ್ಲ. ಅಂತಹರು ಅರ್ಥಮಾಡಿಕೊಳ್ಳುವಂತೆ ಪ್ರಯತ್ನ ಮಾಡುವುದು ನಿರರ್ಥಕ. ದೂರದ ಭವಿಷ್ಯತ್ತಿನಲ್ಲಿ ಜನರು ಅದೇನಿದೆ ಎಂಬುದನ್ನು ತಿಳಿದುಕೊಳ್ಳುವರು. ಹೊಸ ಪ್ರಜ್ಞೆಯನ್ನು ಹೊಂದಿದ ಹೊಸ ಮನುಕುಲ ಮಾತ್ರ ಅದನ್ನು ಅರ್ಥ ಮಾಡಿಕೊಳ್ಳಬಹುದು, ನೀಲಿ ಆಕಾಶದ ಕೆಳಗೆ 'ಸಾವಿತ್ರಿ'ಗೆ ಹೋಲಿಸಬಹುದಾದಂತಹದು ಯಾವುದೂ ಇಲ್ಲ ಎಂದು ನಾನು ಧೃಡೀಕರಿಸುತ್ತೇನೆ. ಅದು ರಹಸ್ಯಗಳಲ್ಲಿ ಅತ್ಯಂತ ರಹಸ್ಯವಾದದ್ದು, ಅದು ಮಹೋನ್ನತ

ಮಹಾಕಾವ್ಯ, ಸಾಹಿತ್ಯ, ಕಾವ್ಯ ಮತ್ತು ದರ್ಶನ ಇವೆಲ್ಲವುಗಳಲ್ಲಿ ಮಹೋನ್ನತವಾದದ್ದು. ಅವರು ಬರೆದ ಸಾಲುಗಳನ್ನು ಗಮನಿಸಿದಾಗಲೂ ಕೂಡ ಅದು ಮಹೋನ್ನತ ಕೃತಿ. ಇಲ್ಲ, ಮಾನವರ ಬಾಯಿಂದ ಬರುವ ಶಬ್ದಗಳು ಅದನ್ನು ವರ್ಣಿಸಲಾರವು. ಹೌದು, ಅದನ್ನು ವರ್ಣಿಸಲು ಅತಿಶಯೋಕ್ತಿಗಳು, ಉತ್ಪ್ರೇಕ್ಷೆಗಳು ಬೇಕಾಗುತ್ತವೆ. ಅದು ಅತ್ಯುತ್ಕೃಷ್ಟ ಮಹಾಕಾವ್ಯ. ಇಲ್ಲ, 'ಸಾವಿತ್ರಿ'ಯಲ್ಲಿ ಏನಿದೆ ಎಂಬುದನ್ನು ಶಬ್ದಗಳು ಅಭಿವ್ಯಕ್ತಿಪಡಿಸಲಾರವು, ಕನಿಷ್ಠ ಪಕ್ಷ ಶಬ್ದಗಳು ನನಗೆ ಸಿಗುತ್ತಿಲ್ಲ. ಅದಕ್ಕೆ ಗಾಢ ಮೌಲ್ಯವಿದೆ – ಅದರಲ್ಲಿ ಆಧ್ಯಾತ್ಮಿಕ ಹಾಗೂ ಇತರ ಎಲ್ಲ ಮೌಲ್ಯಗಳಿವೆ. ಅದು ವಿಷಯದಲ್ಲಿ ಸನಾತನವಾದದ್ದು, ಆಕರ್ಷಣೆಯಲ್ಲಿ ಅನಂತವಾದದ್ದು, ನಿರ್ವಹಣೆಯ ಸಾಮರ್ಥ್ಯದ ರೀತಿಯಲ್ಲಿ ಅದ್ಭುತವಾದದ್ದು, ಅದು ಅನನ್ಯವಾದ ಒಂದು ವಿಷಯ, ಹೆಚ್ಚು ಹೆಚ್ಚಾಗಿ ಅದರ ಸಂಪರ್ಕಕ್ಕೆ ಬಂದ ಹಾಗೆ ನಿಮ್ಮನ್ನೂ ಇನ್ನೂ ಹೆಚ್ಚಿನ ಎತ್ತರಕ್ಕೆ ಎತ್ತಲಾಗುತ್ತದೆ. ಅಹಾ, ಅದು ನಿಜವಾಗಿಯೂ ಏನೋ ಒಂದು! ಅವರು ಮನುಷ್ಯನಿಗಾಗಿ ಅತ್ಯಂತ ಸುಂದರವಾದ್ದನ್ನು ಕೊಟ್ಟು ಹೋಗಿದ್ದಾರೆ, ಸಾಧ್ಯವಿದ್ದಷ್ಟು ಅದು ಉಚ್ಚ ಮಟ್ಟದ್ದಾಗಿದೆ. ಅದೇನದು? ಮನುಷ್ಯ ಅದನ್ನು ಎಂದು ತಿಳಿದುಕೊಳ್ಳುತ್ತಾನೆ? ಅವನೆಂದು ಸತ್ಯದ ಜೀವನ ನಡೆಸಲಿದ್ದಾನೆ? ಇದನ್ನು ತನ್ನ ಜೀವನದಲ್ಲಿ ಎಂದು ಸ್ವೀಕರಿಸಲಿದ್ದಾನೆ? ಇದು ಇನ್ನೂ ತಿಳಿದುಬರಬೇಕಾಗಿದೆ.

*

## ಸಾವಿತ್ರಿಯನ್ನು ಯೋಗ್ಯವಾದ ರೀತಿಯಲ್ಲಿ ಓದಬೇಕು

ನನ್ನ ಮಗು, ಪ್ರತಿದಿನ ನೀನು 'ಸಾವಿತ್ರಿ' ಓದಲಿರುವಿ, ಅದನ್ನು ಯೋಗ್ಯ ರೀತಿಯಲ್ಲಿ, ಸರಿಯಾದ ಮನೋಭಾವದಿಂದ ಓದು, ಅದರ ಪುಟಗಳನ್ನು ತೆರೆಯುವದಕ್ಕಿಂತ ಮೊದಲು ಏಕಾಗ್ರತೆಯಲ್ಲಿರು, ಮನಸ್ಸನ್ನು ಸಾಧ್ಯವಿದ್ದಷ್ಟು ಬರಿದಾಗಿಸು, ಹಾಗೂ ಸಂಪೂರ್ಣವಾಗಿ ಯೋಚನಾರಹಿತನಾಗಿ ಓದು, ನೇರವಾದ ಮಾರ್ಗ ಹೃದಯದಿಂದಿದೆ. ನೀನು ಈ ಅಭೀಪ್ಸೆಯಿಂದ ಏಕಾಗ್ರತೆಯಲ್ಲಿರಲು ಪ್ರಯತ್ನಿಸಿದರೆ, ಸ್ವಲ್ಪೇ ಸಮಯದಲ್ಲಿ, ಬಹುಶಃ ಕೆಲವೇ ದಿನಗಳಲ್ಲಿ, ಸಾಮಾನ್ಯವಾಗಿ ನೀನು ಕೈಗೊಳ್ಳಲಾಗದೇ ಇದ್ದುದನ್ನು 'ಸಾವಿತ್ರಿ'ಯ ಸಹಾಯದಿಂದ ಮಾಡಬಲ್ಲವನಾಗುವಿ. ಈ ಮನೋಭಾವದಿಂದ, ಈ ಏನೋ ಒಂದನ್ನು ಪ್ರಜ್ಞೆಯ ಹಿಂದಿರಿಸಿಕೊಂಡು ಪ್ರಯತ್ನಮಾಡಿ ನೋಡು, ಅದೆಷ್ಟು

ಭಿನ್ನವಾಗಿರುತ್ತದೆ ಮತ್ತು ಹೊಸದಾಗಿರುತ್ತದೆ ಎಂಬುದನ್ನು ನೋಡುವಿ. ಅದು ಆದ್ಯಂತವಾಗಿ ಶ್ರೀ ಅರವಿಂದರಿಗೆ ಕಾಣಿಕೆ ಅರ್ಪಿಸುವ ರೀತಿಯದಾಗಿರಬೇಕು. ಅದರಲ್ಲಿ ಪ್ರಜ್ಞೆಯ ಶಕ್ತಿಯನ್ನು ಸಂಗ್ರಹಿಸಿ ಇಡಲಾಗಿದೆ, 'ಸಾವಿತ್ರಿ' ನಿಜವಾದ ಮಾರ್ಗದರ್ಶಕ ಸತ್ತೆಯಿದ್ದ ಹಾಗೆ: ಯೋಗವನ್ನು ಆಚರಿಸಲು ಬಯಸುವ ಯಾರಾದರೂ ಅದರ ಅವಶ್ಯಕತೆಯ ಭಾವನೆ ತಂದುಕೊಂಡು ನಿಷ್ಕಾಪಟ್ಯದಿಂದ ಪ್ರಯತ್ನಿಸಿದರೆ 'ಸಾವಿತ್ರಿ'ಯ ಸಹಾಯದಿಂದ ಯೋಗದ ಏಣಿಯ ಅತ್ಯಂತ ಉಚ್ಚ ಮೆಟ್ಟಿಲನ್ನು ತಲುಪಬಲ್ಲನು, 'ಸಾವಿತ್ರಿ' ಪ್ರತಿನಿಧಿಸುವ ರಹಸ್ಯವನ್ನು ಕಂಡುಕೊಳ್ಳಬಲ್ಲನು. ಮತ್ತು ಇದನ್ನು ಗುರುವೊಬ್ಬನ ಸಹಾಯವಿಲ್ಲದೆ ಮಾಡಬಲ್ಲನು. ಅವನು ಯೋಗವನ್ನು ಎಲ್ಲಿ ಬೇಕಾದಲ್ಲಿ ಆಚರಿಸಬಲ್ಲನು, ಅವನಿಗೆ 'ಸಾವಿತ್ರಿ' ಮಾತ್ರ ಮಾರ್ಗದರ್ಶಕವಾಗಿರುತ್ತದೆ, ಅವನಿಗೆ ಅವಶ್ಯವಾದದ್ದನ್ನೆಲ್ಲ 'ಸಾವಿತ್ರಿ'ಯಲ್ಲಿ ಕಂಡುಕೊಳ್ಳಬಲ್ಲನು. ತೊಂದರೆಯೊಂದನ್ನು ಎದುರಿಸಿದಾಗ ಇಲ್ಲವೆ ಮುಂದೆ ಸಾಗಲು ಎತ್ತ ಹೊರಳಬೇಕು, ಅಡೆತಡೆಗಳ ಮೇಲೆ ಜಯ ಹೇಗೆ ಸಾಧಿಸಬೇಕು ಎಂಬುದು ತಿಳಿಯದೇ ಇದ್ದಾಗ ಅವನು ಬಹಳ ಅಚಂಚಲನಾಗಿ ಉಳಿದುಕೊಂಡರೆ, ಪ್ರತಿ ಕ್ಷಣ ನಮ್ಮ ಮೇಲೆ ಎರಗುವ ಈ ಎಲ್ಲ ಹಿಂದು ಮುಂದು ನೋಡುವಿಕೆ ಮತ್ತು ಅನುಶ್ಚಿತತೆಗಳಿಗೆ ಅವಶ್ಯವಾದ ಸೂಚನೆಗಳನ್ನು, ಮೂರ್ತಸ್ವರೂಪದ ಸಹಾಯವನ್ನು ಅವನು ದೊರಕಿಸುತ್ತಾನೆ. ಅವನು ಸ್ಥಿರವಾಗಿ, ತೆರೆದಿರಿಸಿಕೊಂಡವನಾಗಿ ಉಳಿದುಕೊಂಡರೆ, ನಿಷ್ಕಾಪಟ್ಯದಿಂದ ಅಭೀಪ್ಸೆಪಟ್ಟರೆ, ಯಾವಾಗಲೂ ಅವನನ್ನು ಕೈಹಿಡಿದು ಕರೆದೊಯ್ಯಲಾಗುತ್ತಿರುವಂತಿರುತ್ತದೆ. ಅವನಲ್ಲಿ ನಂಬಿಕೆ, ತನ್ನನ್ನು ಕೊಟ್ಟುಕೊಳ್ಳುವ ಸಂಕಲ್ಪ ಮತ್ತು ಅವಶ್ಯವಾದ ನಿಷ್ಕಾಪಟ್ಯ ಇದ್ದರೆ ಅವನು ಕೊನೆಯ ಗುರಿಯನ್ನು ತಲುಪುತ್ತಾನೆ.

ನಿಜವಾಗಿ 'ಸಾವಿತ್ರಿ' ಮೂರ್ತರೂಪದ, ಜೀವಂತವಿರುವ ಏನೋ ಒಂದು, ಅದು ಸಮೃದ್ಧವಾಗಿದೆ, ಪ್ರಜ್ಞೆಯಿಂದ ತುಂಬಿಕೊಂಡಿದೆ, ಎಲ್ಲ ಮಾನವ ಮಟ್ಟದ ತತ್ತ್ವಜ್ಞಾನಗಳು ಹಾಗೂ ಧರ್ಮಗಳು ಇವುಗಳ ಮೇಲಿರುವ ಪರಮೋಚ್ಚ ಜ್ಞಾನವನ್ನು ಹೊಂದಿದೆ. ಸಾರದಲ್ಲಿ ಅದು ಆಧ್ಯಾತ್ಮಿಕ ಮಾರ್ಗ, ಯೋಗ, ತಪಸ್ಯೆ, ಸಾಧನೆ ಹೀಗೆ ಅದು ಪ್ರತಿಯೊಂದೂ ಆಗಿದೆ. 'ಸಾವಿತ್ರಿ'ಯಲ್ಲಿ ಅಸಾಧಾರಣ ಸಾಮರ್ಥ್ಯವಿದೆ, ಅದು ಸ್ವೀಕರಿಸಬಲ್ಲವನಿಗೆ ನಿಜವಾದ ಕಂಪನಗಳನ್ನು ಹೊರಚೆಲ್ಲಿ ಕೊಡುತ್ತದೆ, ಅವು ಪ್ರತಿಯೊಂದು ಹಂತದ ಪ್ರಜ್ಞೆಯ ಕಂಪನಗಳಾಗಿರುತ್ತವೆ. ಅದು

ಹೋಲಿಸಲಾಗದಂತಹದು, ಅದರ ಹರಹಿನಲ್ಲಿ ಸತ್ಯವನ್ನೊಳಗೊಂಡಿದೆ, ಆ ಸತ್ಯವನ್ನು ಶ್ರೀ ಅರವಿಂದರು ಪೃಥ್ವಿಯ ಮೇಲೆ ಕೆಳಗಿಳಿಸಿ ತಂದರು. ಶ್ರೀ ಅರವಿಂದರು ನಮಗಾಗಿ ತೆರೆದು ತೋರಿಸಿರುವ ಪ್ರವಾದಿಯ ಸಂದೇಶವನ್ನು ಒಳಗೊಂಡಿರುವ 'ಸಾವಿತ್ರಿ' ಪ್ರತಿನಿಧಿಸುವ ರಹಸ್ಯವನ್ನು ಕಂಡುಹಿಡಿಯಬೇಕು. ನಿನ್ನೆದುರಿಗೆ ಇರುವ ಕಾರ್ಯ ಇದು, ಅದು ಕಠಿಣವಾದದ್ದು, ಆದರೆ ತೊಂದರೆ ತೆಗೆದುಕೊಳ್ಳುವದಕ್ಕೆ ಯೋಗ್ಯವಾದದ್ದು.

ಆಶೀರ್ವಾದಗಳು.

**– ಶ್ರೀಮಾತೆ**

(ನವ್ಹೆಂಬರ್ 5, 1967 ರಂದು ಮೋನಾ ಸರ್ಕಾರ ಈ ವರದಿಯನ್ನು ನೀಡಿದ್ದರು)

(ಈ ಮೇಲೆ ನೀಡಲಾದ ವಿಷಯವು ಶ್ರೀಮಾತೆಯವರ ಓರ್ವ ಶಿಷ್ಯರಾದ ಮೋನಾ ಸರ್ಕಾರ್ ಎಂಬುವವರು ಶ್ರೀ ಅರವಿಂದರ ಮಹಾಕಾವ್ಯವಾದ ಸಾವಿತ್ರಿಯ ಕುರಿತಾಗಿ ತಮಗಿದ್ದ ಗೊಂದಲಗಳನ್ನು ನೇರವಾಗಿ ಶ್ರೀಮಾತೆಯವರಲ್ಲಿಯೇ ನಿವೇದಿಸಿಕೊಂಡು, ಅವರಿಂದ ಸೂಕ್ತ ಪರಿಹಾರಗಳನ್ನು ಪಡೆದುಕೊಂಡ ಸಮಗ್ರ ವಿವರಣೆಯಾಗಿದ್ದು, ಶ್ರೀಮಾತೆಯವರು ಮತ್ತು ಅವರ ಶಿಷ್ಯ ಮೋನಾ ಸರ್ಕಾರ ಅವರ ಮಧ್ಯೆ ನಡೆದ ಈ ಒಟ್ಟೂ ಸಂವಾದವು 'The Mother on Savitri' ಎಂಬ ಹೆಸರಿನ ಗ್ರಂಥವಾಗಿ ಪ್ರಕಟವಾಗಿದ್ದು, ಆ ಮಹದ್–ಗ್ರಂಥವನ್ನು ಶ್ರೀಯುತ ಕೆ.ಎಸ್. ಅಮೂರ ಅವರು, 'ಶ್ರೀ ಅರವಿಂದರ ಮಹಾಕಾವ್ಯ ಸಾವಿತ್ರಿ ಕುರಿತು ಶ್ರೀಮಾತೆಯವರು' ಎಂಬ ಶೀರ್ಷಿಕೆಯಡಿಯಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಮೇಲೆ ನೀಡಲಾದ ಅನುವಾದವನ್ನು ಅದೇ ಕೃತಿಯಿಂದ ಇಳಿಸಿಕೊಳ್ಳಲಾಗಿದೆ. ಹಾಗೂ ಈ ಕೃತಿಯಲ್ಲಿ 1953 ರಿಂದ 1973 ರ ವರೆಗೆ ಸುದೀರ್ಘ 20 ವರ್ಷಗಳ ಅವಧಿಯಲ್ಲಿ ಶ್ರೀಮಾತೆಯವರು ಸಾವಿತ್ರಿಯ ಕುರಿತು ಹೇಳಿದ ನುಡಿಗಳನ್ನು ದಾಖಲಿಸಲಾಗಿದೆ. ಪ್ರಾಜ್ಞರು ಈ ಕೃತಿಯನ್ನು ಅವಶ್ಯವಾಗಿ ಅವಗಾಹನೆಗೆ ತೆಗೆದುಕೊಳ್ಳಬೇಕು.)

'ಶ್ರೀ ಅರವಿಂದರ ಮಹಾಕಾವ್ಯ ಸಾವಿತ್ರಿ ಕುರಿತು ಶ್ರೀಮಾತೆಯವರು' – ಕೆ.ಎಸ್. ಅಮೂರ

**ಪ್ರಕಾಶಕರು: ಸಾವಿತ್ರಿ ಫೌಂಡೇಶನ್, ನವ ದೆಹಲಿ. 15 ಡಿಸೆಂಬರ್ 2014**

## ಸಾವಿತ್ರಿಯ ಸ್ಪಂದ

**– ಅನು: ಪುಟ್ಟು ಕುಲಕರ್ಣಿ**

**ಸತ್ಯವಾನ ಮತ್ತು ಸಾವಿತ್ರಿ**

ಓ ಸತ್ಯವಾನ, ಓ ತೇಜದೀಪ್ತಿ ಸಾವಿತ್ರಿ, ನಿಮ್ಮನೀಗ
ಆದಿಮೂಲದಾ ನಕ್ಷತ್ರ ತಲದ ತಾಣದೆಡೆ ಇಂತು ಈಗ
ಸಂಯೋಗಗೊಂಡ ದ್ಯುಮಳ–ಶಕ್ತಿಯಾ ಪರಮಾತ್ಮ ಪೂರ್ಣವೆನಿಸಿ,
ಮುಂಚೂಣಿಗಾಗಿ ನಿಮ್ಮನಣಿಗೊಳಿಸಿ ಪ್ರೇರಣೆಗೆ ನಿಗದಿಗೊಳಿಸಿ

ಅಜ್ಞಾನ ಘನದ ಈ ಜಗವನಿಂದು ಸುಜ್ಞಾನದೆಡೆಗೆ ಸೆಳೆಯೆ
ಸಲಹುತಲಿ ಸರ್ವ ಸರ್ವಸ್ವವನ್ನು ನೀವಿಂತು ಇಂತು ಸಾಗೆ,
ಅಪರಿಮಿತ ವ್ಯಾಪ್ತ ಸ್ವಯಂದಿಂದೀಗ ಆವರಣ ಚಾಚುವಿರಿಸಿ
ಬಂಧನದ ಬೇಲಿಯೊಳಗಿಲ್ಲಿ ನಿಂದ ಸಂರಚನೆಯನ್ನು ಬಿಡಿಸಿ,

ಅಚೇತನದಲ್ಲಿ ವಿಚಲಿತಕೆ ಸಿಲುಕಿ ನಲುಗಿರುವ ಗತಿಗೆ ಈಗ
ಅವತರಣಗೊಳಿಸಿ ಪರಮಾತ್ಮನನ್ನು ಪರಿಮಂಡಲದೀ ತಾಣಕೀಗ,
ಮೃಣ್ಮಯದ–ಜೀವ ಜೀವಾತ್ಮಗಳನು ಆರೋಹಗೊಳಿಸುತೀಗ
ಅಮೃತತ್ವವನ್ನು ಶಾಶ್ವತದಿ ಸ್ಪಂದಗೊಳಲವರ ಹರಸಿ ಈಗ.

ಅಹಂ–ಭಾವದಾ ಜ್ಞಾನದಲಿ ಸಿಲುಕಿ ಜೊತೆಗಿದೋ ನಾನು ಹೀಗೆ
ನಾನು ಭ್ರಮಿಸಿರುವ ಲೋಕಸತ್ತೆಯಾ ಅಜ್ಞಾನಘನದ ಒಳಗೆ
ಪರಮಾತ್ಮನನ್ನು ದೃಷ್ಟಿಸಲು ಬರದ ಈ ತಾಣ ತಾಣದೊಳಗೆ
ಜೊತೆಗಿದೋ ನಾಮವಾಲಿಸುತ ಮಾತ್ರ ನಿಸ್ಪಂದಭಾವದೊಳಗೆ

ಮನದ ಮಿತಿ–ಮತಿಯ ಖತಿಗೆ ಜ್ಞಾನವದು ಬಂಧನಕೆ ತಾನು ಸಿಲುಕಿ
ಮತ್ತೆ ಜೀವನವು ಜಾಲ–ಪಾಶದಲಿ ಸೆಳೆಸೆಳೆತದೊಳಗೆ ಕುಲುಕಿ
ವಾಂಛೆಗಳ ಹೆಣಿಕೆ ಹೆಣಿಕೆಯಲಿ ಹೆಣೆದ ಆ ಮಾಯೆ ಬಲೆಯ ಒಳಗೆ
ಜಡವು ಅಡಗಿಸಿದೆ ಪ್ರಾಣವನು, ಅದರರಿವು ಅದಕಿರದ ಹಾಗೆ,

ನೀವಿದೋ ನನ್ನ ಸಾಮರ್ಥ್ಯಪೂರ್ಣ ಬಲದೊಳಗೆ ನಿಗದಿಯಾಗಿ
ಮೃಣ್ಮಯದ ಗತಿಯ ಭವಿತವ್ಯವನ್ನು ಔನ್ನತ್ಯಗೊಳಿಸೆ ಕ್ರಿಯೆಗೆ,
ನನ್ನನೊಳಗೊಂಡು ಅಪರಿಮೇಯದೆಡೆಗದು ಚಲಿಸೆ ಇಚ್ಛೆಯಲ್ಲಿ
ಪ್ರಾಣದಾ ಬೆಳಗು– ಮುಳುಗುಗಳ ಚರಮಸೀಮೆಯಾ ಮಧ್ಯದಲ್ಲಿ.

ತತ್ ಎನ್ನ ಪ್ರಾಣ ತಾನಾಗಿ ಈಗ ಆರೋಹಗೊಂಡು ಸಾಗಿ
ನಿರ್ಜ್ಞಾನಘನದ ತಮವನ್ನು ತೊರೆದು ಮೇಲೇರಿಕೊಂಡು ಸಾಗಿ
ಜೀವನದ ಜೊತೆಗೆ ಮನದೊಡನೆ ನಿತ್ಯ ಸ್ಪಂದದಲಿ ವಿಕಸ ನಿರತ
ಮತ್ತಿದೋ ಪರಾಪ್ರಕೃತಿಯಾ ವ್ಯಾಪ್ತ ಮೂಲಕವೆ ಸ್ಪಂದಗೊಳುತ

ಕಾಲರಾಹಿತ್ಯ ನಿತ್ಯತ್ವ ಪರಮ ಪರಮೋಚ್ಚ ಬೆಳಕಿನೆಡೆಗೆ
ಜೊತೆದಿದೋ ನನ್ನ ಶಾಶ್ವತತೆ ಲೀನ ತಾ ಚಲಿತಕಾಲದೊಳಗೆ
ಮತ್ತಿದೋ ಎನ್ನ ನಿಸ್ಸೀಮತತ್ತ್ವವನ್ನೀಗ ಭೇದಗೊಳಿಸಿ
ವ್ಯೋಮದವಕಾಶ ಭೂಮ ಬಾಗು ತಾ ಏಕೈಕ ನಿತ್ಯ ನೆಲೆಸಿ

ಮಹದ್–ಮಹತಿಯಾ ಶೃಂಗಗಳನೇರಿ ಪಥಗುರುತ ಹಿಂದೆ ಇರಿಸಿ
ತಾನೇರುತಿಹುದು ಔನ್ನತ್ಯ ತುಂಗ ಶೃಂಗಗಳ ತಾಣವಿರಿಸಿ
ಪಥಗಮನದೊಳಗೆ ವಿರಮಿಸಲು ಕುಸಿದು ಕಸಿವಿಸಿಗೆ ಬಳಲಿ ಬೆಂಡು
ಈ ತಾಣದಿಂದ ಆ ದಿವ್ಯ ತೋಷ – ಸೌಂದರ್ಯ ನೆಲೆಯ ಕಂಡು,

ಸರ್ವ ಸರ್ವಸ್ವ ವಸ್ತು–ವಿಷಯಗಳು ಮಧುರಾತಿ ಮಧುರವಾಗಿ
ಮಾಧುರ್ಯಮಯದಿ ಸರ್ವಸ್ವವೆಲ್ಲ ದಿವ್ಯತ್ವ ಪೂರ್ಣವಾಗಿ
ಅದರ ಸಾಮಿಪ್ಯದಲಿ ಸ್ಪಂದಗೊಳಲು ಅಭಿಲಾಶೆ ಪೂರ್ಣವಾಗಿ
ಸಂಯೋಗದೊಳಗೆ ತಾ ಯೋಗಗೊಳುತ ನಿತ್ಯತ್ವ ಭಾವವಾಗಿ,

ಅಪರಿಮೇಯದಾ ವ್ಯಾಪ್ತತ್ವದೊಳಗೆ ಜೀವ ಸಂಜೀವದೆಡೆಗೆ
ಜೊತೆಗಿದೋ ಈ ಅನಂತಾನಂತ ಬೆಳಕಿನಾ ತಾಣದೆಡೆಗೆ,
ಅನಿರ್ವಚನೀಯದಾ ಆಳ–ನಿರಾಳಗಳ ರಸಾಸ್ವಾದಗೊಳುತ,
ಆ ಅನಂತತೆಯ ಜೊತೆ ನಿತ್ಯ–ಪರಮ ಶಾಶ್ವತವ ಸ್ಪರ್ಶಗೊಳುತ.

ಪಶು–ಪಾಶವೀಯ ಆ ಪಾಶದಿಂದ ತಾ ಮುಕ್ತಗೊಳಲು ಸತತ
ತಡಬಡಿಸುತಿರುವ ಈ ಎನ್ನ ಪ್ರಾಣ ತತ್ –ಭಾವವಾಗಿ ನಿರತ
ಪಾರದೀಪಕದ–ಚಿಂತನದಲೀಗ ತಾ ಮೇರು ತಾಣಗಳಲಿ
ಆರೋಹಗೊಳಲಿ ಮನುಜಮತದರಿವು ತಲುಪಿ ತಾ ಊರ್ಧ್ವದಲ್ಲಿ

ಜೊತೆಗಿದೋ ಋತದ ಮಹದ್–ಮಹತಿಯಾ ಸಾನಿಧ್ಯದೊಳಗೆ ಸಂದು
ಪರಮಾನುಭಾವದೊಡನೀಗ ನಿತ್ಯ ಸ್ಪಂದದಲಿ ಸತತ ಮಿಂದು.
ಇವನಿದೋ ಇಂತು ಮಾನವನ ಜೀವ–ಜೀವನದ ಹಂತದೊಳಗೆ
ದೇವಗಣವಾಗಿ ಅವತರಣಗೊಳುವ ರೂಪದಾವರಣದೊಳಗೆ

ಮೃಣ್ಮಯದ–ಜೀವದಸ್ತಿತ್ವದೊಳಗೆ ತಾ ರೂಪಗೊಳುತಲಿಂತು;
ಇವನಿದೋ ಈಗ ಜೀವಾತ್ಮನಾಗಿ ಆರೋಹಗೊಳುತಲಿಂತು
ಆ ಪರಮನೆಡೆಗೆ ಸಾಗುತಲಿ ಸತತ ತನ್ನರಿವ ಅರಿತುಕೊಳುತ,
ಪ್ರಕೃತಿಯಾ ನಿಯತ ಏರಿಳಿತದಲೆಯ ಮೂಲಕವೇ ಸೃಷ್ಟಿಗೊಂಡ
ಮೃಣ್ಮಯದಿ ನಿಂದ ಅಜ್ಞಾನದಿಂದ ಮೇಲೇರೆ ತುಯ್ಲಿನಿಂದ,

ಈಗಿದೋ ಶಮನಗೊಂಡಿಹವು ಮತ್ತೆ ಹಸಿರುಕ್ಕಿ ಪುಟಿದು ತಾನೆ,
ಕಾಲದಾ ಛಿದ್ರ–ವಿಚ್ಛಿದ್ರ ಹೃದಯವದು ಗೈದ ಸರ್ವ ಘಟನೆ
ಬೆಂದ–ಬೇಗೆಯದು ದುಃಖ–ದುಮ್ಮಾನ ಏನೊಂದು ಉಳಿಯದಿಹುದು
ಪ್ರಕೃತಿಯಾ ಹೃದಯದಲ್ಲೀಗ ಇವಕೆ ಇನಿತೊಂದು ತಾಣ ಸಿಗದು

ಹೃತ್ಕರ್ಣ ಮತ್ತೆ ಹೃತ್ಕುಕ್ಷಿ ಎಲ್ಲ ದಿಗ್ಬಂಧಗೊಂಡು ಇರಲು
ಅಲ್ಲಿರುವ ದೇವ ತಾ ವಾಸವಾಗಿ ತನ್ನದೇ ನೆಲೆಯಲಿರಲು,
ಆತ್ಮವದು ತನ್ನ ತೇಜಮಯ ಕಿರಣ ಊಡುತಲಿ ಕಾಂತಿಗೊಳಿಸಿ
ಜಾಗ್ರತದ ದೇಹವನು ಮತ್ತೆ ಸ್ಪಂದ –ಛಂದದಲಿ ವರ್ಣಗೊಳಿಸಿ

ಭೂತ–ಭೌತಿಕದ ದ್ರವ್ಯ ತಾನದುವು ಚೈತನ್ಯದೊಡನೆ ಸ್ಪಂದ
ಸಂಲಗ್ನಗೊಂಡು ತನ್ಮಯತೆಯಲ್ಲಿ ಏಕತ್ವ ಭಾವ–ಛಂದ

ಆ ದಕ್ಷ ಲಿಪಿಕನಽದೃಶ್ಯದಂಗುಲಿಯಲಿಂತೀಗ ಲಿಖಿತವಿಂತು
ಅದು ಅವನ ಬೋಧಿಪ್ರತ್ಯಯದಿ ಶುಭದ ಶೋಭನದ ಶಿಲ್ಪವಾಂತು;

ಬುವಿಯ ರೂಹುಗಳು ಸೃಷ್ಟಿಗೊಂಡಿಹವು ಸಂರಚನೆಗೊಳುತಲಿಂತು
ಅವು ಅವನ ದಿವ್ಯ ದಾಖಲಾತಿಗಳ ಸರಣಿ–ಸರಣಿಗಳ ಕಂತು,

ಧೀಃಶಕ್ತಿಯೀಗ ಸಶರೀರಗೊಂಡು ಅರಿಯದಿದೆ ಮನವು ಇಂದು,
ಈ ಜಗದ ಘನದ ಮೌನದೆದೆಯಿಂದ ಅಚಿತಿ ಅನುಸರಣಗೊಂಡು;
ಯುಕ್ತತ್ವಪೂರ್ಣ ಚಿಂತನದ ಧಾರೆಗಳ ನಿಯತ ಸರಣಿಯೊಳಗೆ
ರೂಪಪರಿವರ್ತನೀಯ ನಿರ್ಧರಿತ ಯೋಜನೆಯ ಪಥದ ಒಳಗೆ;

ಸೃಜಿತ–ವಸ್ತುಗಳ ಆಂತರ್ಯದೊಳಗೆ ಚೇತನವು ವಿಕಸಗೊಳುತ
ಉದಿತಗೊಳ್ಳುತಿದೆ ಉದಿತಗೊಳ್ಳುತಿದೆ ಸಾರೂಪ್ಯ ಪೂರ್ಣಗೊಳುತ,
ತಮದ–ಪರಮಾಣು ಜೊತೆಗೆ ನಿಃಸ್ಪಂದ ಪಿಂಡಗಳ ಗಡಣಕೀಗ
ಅವನು ಅವುಗಳಿಗೆ ಆವರಣವಿರಿಸಿ ವಿಧಿ ಬದ್ಧಗೊಳಿಸಿ ಈಗ

ವಜ್ರಭೇದನೆಯ ಆಲೇಖವಿದುವು ಅವಿನಾಶಿಯಾದ ರೂಹು
ಪೂರ್ಣಪ್ರಜ್ಞೆಯದು ಸೂತ್ರಗೊಂಡಿಹುದು ವಿಕಸನದ ಚಾಚು ಬಾಹು
ಅಂತರಂಗದಾ ಆಂತರ್ಯದಲ್ಲಿ ಶಿಲ್ಪಗೊಳ್ಳುತಲಿ ಚಿರದಿ
ಲಿಪಿಬದ್ಧಗೊಂಡು ಶ್ರುತಿಗೊಂಡು ಸ್ಪಂದ ಛಂದದಲಿ ಹಲವು ವಿಧದಿ,

ಇಳಿದಿಳಿದು ಇಳೆಗೆ ಕಳೆಕಳೆದುಕೊಂಡ ಮಂದ – ವಸ್ತುಗಳ ಬಂಧ
ಆ ಹೃದಯದೊಳಗೆ ತಾ ಶಿಲ್ಪಗೊಂಡ ಇದು ಪ್ರೇಮ–ನಾದ ಸ್ಪಂದ
ಇದು ಮುಕ್ತ–ಮುಕ್ತ ಅನಂತಾನಂತದಾಂತರ್ಯದಿಂದ ಉದಿತ
ವಿಜಯಗಾಥೆಯಿದು ವಿಜಯನಾದವಿದು ವಿಜಯ ಗಾನ–ಗೀತ

ಜೊತೆಗಿದೋ ಅದುವು ಅಭಿಧಾನವಾಗಿ ಪೂರ್ಣತ್ವ ಪ್ರಾಪ್ತಿಯಾಗಿ,
ಶಾಶ್ವತಕೆ ಇದುವು ನಿತ್ಯಸತ್ಯದಾ ಪೂರ್ಣ ಆಧಾರವಾಗಿ,
ಸಚೇತನಗೊಂಡ ಉಲ್ಲಾಸಭರಿತ ಭರತದಲಿ ಭಾವ– ಮುದಿತ –
ಜೀವಕೋಶಗಳ ಮೇಲೀಗ ಮತ್ತೆ ಅನುರೇಖೆಗೊಳಿಸಿ ಸತತ

ವರ್ಣನಾತೀತ–ಭಾವ–ಚಿತ್ರಗಳ–ಲಿಪಿಯಲ್ಲಿ ರೂಪವಿಂದು
ಇದು ಪ್ರೇಮ–ಕಾವ್ಯ ಇದು ವಿಶ್ವಗೀತ ಕಾಲದುದ್ದಕೂ ಕಾದು

ಆನಂದ–ಪರಮ ಗ್ರಂಥ – ಸಂಪುಟವು ಇದು ಗೂಢ ಗುಹ್ಯ ಸತ್ತೆ
ಅತಿಚೇತನೀಯ ದಿವ್ಯಾಗ್ನಿ ತೇಜ ಸಂದೇಶವಿದುವು ಮತ್ತೆ.

ಈ ಪ್ರಾಣ–ಸ್ಪಂದದನುಬಂಧವೀಗ ಪರಮಾತಿ ಪರಮ ಶುದ್ಧ
ಆದಿಭೌತಿಕದ ಸಂರಚನೆಯೊಳಗೆ ಇದು ನಿತ್ಯ ನಿಯತಿ ಬದ್ಧ;
ಆ ನಾರಕೀಯ ಕ್ಷಣಜ್ಯೋತಿಮಿಂಚು ಮರಣಿಸಿತು ಈಗ ಸಂದು
ಅನುರಣನಗೊಳುತ ಮತ್ತೆ ಘಾತಿಸೆನೆ ಇನ್ನೇನು ಶೇಷವಿರದು.

ಇದ್ದಕ್ಕಿದ್ದಂತೆ ಸಿಡಿಸಿಡಿದು ಛಿದ್ರಗೊಂಡಿತಿದೋ ನರಕ–ತಾನು
ಬೃಹತ್–ಗಾತ್ರದಲ್ಲಿರುವ ಬಾಹ್ಯ ಸಮ್ಮುಖವು ಚೂರ್ಣವಿನ್ನು
ಸಮ್ಮೋಹದಲ್ಲಿ ಸಂರಚನೆಗೊಂಡ ಮಾಯಕದ ವಾಸ್ತುವೊಂದು
ಅದು ಕುಸಿದು ಕುಸಿದು ತಂತಾನೆ ತಾನು ನಷ್ಟಗೊಂಡಂತೆ ಇಂದು,

ತೆರೆತೆರೆದುಕೊಂಡು ತಮವೀಗ ಪೂರ್ಣ ಮರೆಯಾಗಿ ಕರಗಿ ಹೋಗಿ
ಸ್ವಪ್ನದಾಖಾತವದು ತಾನು ಶೂನ್ಯಗೊಂಡೀಗ ದೂರವಾಗಿ.

ಜೀವ–ಸತ್ತೆಗಳ ಆಂತರ್ಯದಲ್ಲಿ ಅಡಗಿರುವ ಶೂನ್ಯದೊಳಗೆ
ಪರಿಶೋಧಗೊಳಲು ನಿಶ್ಶೂನ್ಯವಿರುವ ಇದೋ ಅವಕಾಶದೊಳಗೆ
ಆ ಪರಮನೀಗ ಕಾಣದಿಹ ತಾಣವನು ಇವಳು ಪೂರ್ಣಗೊಳಿಸೆ
ಇಲ್ಲಿದೋ ಈಗ ಭರಣಗೊಂಡಿಹಳು ಮತ್ತೆ ಕಾಂತಿಗೊಳಿಸೆ,

ಸುವ್ಯಾಪ್ತ ಘನದ ಆತ್ಮೀಯ ಸ್ಪಂದ ತಾನೊಂದು ಮತ್ತೆ ಹೀಗೆ
ಜೊತೆಜೊತೆಗೆ ತೋಷಸಂಪನ್ನ ಉಷೆಯು ಅಭಿಷೇಕಗೊಳುತ ಸಾಗೆ
ಈಗಿದೋ ಶಮನಗೊಂಡಿಹವು ಮತ್ತೆ ಹಸಿರುಕ್ಕಿ ಪುಟಿದು ತಾನೆ,
ಕಾಲದಾ ಛಿದ್ರ–ವಿಚ್ಛಿದ್ರ ಹೃದಯವದು ಗೈದ ಸರ್ವ ಘಟನೆ

ಬೆಂದ–ಬೇಗೆಯದು ದುಃಖ–ದುಮ್ಮಾನ ಏನೊಂದು ಉಳಿಯದಿಹುದು
ಪ್ರಕೃತಿಯಾ ಹೃದಯದಲ್ಲೀಗ ಇವಕೆ ಇನಿತೊಂದು ತಾಣ ಸಿಗದು
ಹೃತ್ಕರ್ಣ ಮತ್ತೆ ಹೃತ್ಕುಕ್ಷಿ ಎಲ್ಲ ದಿಗ್ಬಂಧಗೊಂಡು ಇರಲು
ಅಲ್ಲಿರುವ ದೇವ ತಾ ವಾಸವಾಗಿ ತನ್ನದೇ ನೆಲೆಯಲಿರಲು,

ಆತ್ಮವದು ತನ್ನ ತೇಜಮಯ ಕಿರಣ ಊಡುತಲಿ ಕಾಂತಿಗೊಳಿಸಿ
ಜಾಗ್ರತದ ದೇಹವನು ಮತ್ತೆ ಸ್ಪಂದ –ಛಂದದಲಿ ವರ್ಣಗೊಳಿಸಿ
ಭೂತ–ಭೌತಿಕದ ದ್ರವ್ಯ ತಾನದುವು ಚೈತನ್ಯದೊಡನೆ ಸ್ಪಂದ
ಸಂಲಗ್ನಗೊಂಡು ತನ್ಮಯತೆಯಲ್ಲಿ ಏಕತ್ವ ಭಾವ–ಛಂದ

**(ಸಾವಿತ್ರಿ; ದಳ 2 ರೇಣು 8 ಪುಟ 232)**

ಕಾಲದಾ ಛಿದ್ರ–ವಿಚ್ಛಿದ್ರ ಹೃದಯವದು ಗೈದ ಸರ್ವ ಘಟನೆ
ಈಗಿದೋ ಶಮನಗೊಂಡಿಹವು ಮತ್ತೆ ಹಸಿರುಕ್ಕಿ ಪುಟಿದು ತಾನೆ,
ಬೆಂದ–ಬೇಗೆಯದು ದುಃಖ–ದುಮ್ಮಾನ ಏನೊಂದು ಉಳಿಯದಿಹುದು
ಪ್ರಕೃತಿಯಾ ಹೃದಯದಲ್ಲೀಗ ಇವಕೆ ಇನಿತೊಂದು ತಾಣ ಸಿಗದು

ಹೃತ್ಕರ್ಣ ಮತ್ತೆ ಹೃತ್ಕುಕ್ಷಿ ಎಲ್ಲ ದಿಗ್ಬಂಧಗೊಂಡು ಇರಲು
ಅಲ್ಲಿರುವ ದೇವ ತಾ ವಾಸವಾಗಿ ತನ್ನದೇ ನೆಲೆಯಲಿರಲು,
ಆತ್ಮವದು ತನ್ನ ತೇಜಮಯ ಕಿರಣ ಊಡುತಲಿ ಕಾಂತಿಗೊಳಿಸಿ
ಜಾಗ್ರತದ ದೇಹವನು ಮತ್ತೆ ಸ್ಪಂದ –ಛಂದದಲಿ ವರ್ಣಗೊಳಿಸಿ

ಭೂತ–ಭೌತಿಕದ ದ್ರವ್ಯ ತಾನದುವು ಚೈತನ್ಯದೊಡನೆ ಸ್ಪಂದ
ಸಂಲಗ್ನಗೊಂಡು ತನ್ಮಯತೆಯಲ್ಲಿ ಏಕತ್ವ ಭಾವ–ಛಂದ

**(ಸಾವಿತ್ರಿ; ದಳ 2 ರೇಣು 8 ಪುಟ 232)**

ಓ, ಸಾವಿತ್ರಿ,
ನನ್ನ ಪ್ರಾಣದಾ ಸಾಮರ್ಥ್ಯವನ್ನು ನಿನ್ನದೇ ಲೀಲೆಗಿಳಿಸಿ,
ನನ್ನ ಈ ಅಮರ–ವಾಣಿಯಲಿ ನಿಯತ ಧ್ವನಿಯಲಭಿವ್ಯಕ್ತಗೊಳಿಸಿ,
ಕಾಲ–ಪಥಗಳಲಿ ಸಾರೂಪ್ಯಗೊಂಡ ಋತದ ಆ–ಯಾಮವಿಂತು
ಗಮ್ಯ ಪಥಗಳಲಿ ಪರಮನೆಡೆಗೆ ಚಲಿಸೆ ಮನುಜರೆದೆಗಿರಿಸು ಗುರುತು.

**(ಸಾವಿತ್ರಿ; ದಳ 12 ರೇಣು ಪುಟ 702–03)**

**ಟಿಪ್ಪಣಿ:**

**ಆ ದಕ್ಷ ಲಿಪಿಕ:** ಶ್ರೀ ಅರವಿಂದರ ಪ್ರಾರಂಭದ ಕವನ **'ಯಾರು?'** ಎನ್ನುವಲ್ಲಿ ಈ ವಿಷಯದ ಬೀಜ ಸ್ವರೂಪವನ್ನು ಕಾಣಬಹುದು.

**ವಜ್ರಭೇದನೆಯ ಆಲೇಖ:** ಇದು 'ವಜ್ರಭೇದಿಕಾ ಪ್ರಜ್ಞಾನಪಾರಮಿತಾ ಸೂತ್ರ'ವೆಂದು ಕರೆಯಲಾಗುತ್ತಿದೆ. ಬೌದ್ಧ ಧರ್ಮದ **'ಮಹಾಯಾನ'** ಪಂಥದಲ್ಲಿ ಇದನ್ನು ಕಾಣಬಹುದು. ಇದಕ್ಕೆ 'ಪ್ರಜ್ಞೆಯ ಪರಿಪೂರ್ಣತೆ'ಯೆಂದೂ ಕರೆಯಲಾಗುತ್ತಿದೆ. ಈ ರೀತಿಯ ಲಿಪಿಯೊಂದು ಇದೆ.

(ಇಂದು 5–12–1950 ಶ್ರೀ ಅರವಿಂದರು ಮುಕ್ತರಾದ ದಿನ; ಪೂರ್ಣ ಯೋಗದ ಹಿನ್ನೆಲೆಯಲ್ಲಿ ಹಾಗೂ ಪ್ರಚಲಿತ ವೈಜ್ಞಾನಿಕ ಯುಗದ – ಅವಧಿಯಲ್ಲಿ ಮನಶಾಸ್ತ್ರದ ಅತ್ಯಾಧುನಿಕ ಬೆಳವಣಿಗೆಯಲ್ಲಿ ಹಾಗೂ ಖಭೌತ ಶಾಸ್ತ್ರದ ನವನವೀನ ಅನ್ವೇಷಣೆಗಳಲ್ಲಿ ರೂಪಣೆಗೊಳ್ಳುತ್ತಿರುವ ನಮ್ಮ ಮಾನವ ಪ್ರಜ್ಞೆಯ ವಿಕಸನದ ಹಂತಗಳನ್ನು ತಮ್ಮ "ಸಾವಿತ್ರಿ"ಯಲ್ಲಿ ನಿರೂಪಿಸಿದ್ದಾರೆ.)

**– ಪುಟ್ಟು ಕುಲಕರ್ಣಿ**

## ಶ್ರೀ ಅರವಿಂದರ
## 'ಗೀತಾ ಪ್ರಬಂಧಗಳು'

**– ಅನು: ಜಾನ್ವಿ**

**38**

### ಎರಡನೆಯ ಸರಣಿ:
### ಅಧ್ಯಾಯ – 4
### ರಾಜಗುಹ್ಯ (4/2)

ಅವತಾರ ಪುರುಷನು, ಗುರುವೂ, ಸಂಸಾರ ಕರ್ಮಮಗ್ನ ಜೀವಾತ್ಮನ ಸಾರಥಿಯೂ ಆಗಿರುವ ಕೃಷ್ಣನು ತನ್ನ ಮಾತಿನುದ್ದಕ್ಕೂ ತನ್ನ ರಹಸ್ಯವನ್ನು, ಪ್ರಕೃತಿಯ ಪರಮ ರಹಸ್ಯವನ್ನು ಪ್ರಕಟಿಸಲು ಹಿನ್ನೆಲೆ ರೂಪಿಸುತ್ತಿದ್ದಾನೆ. ಅದರ ಪೂರ್ವ ಸಿದ್ಧತೆಯಲ್ಲಿ ಗೀತೆಯುದ್ದಕ್ಕೂ ಒಂದು ಸ್ವರ ಮತ್ತೆ ಮತ್ತೆ ನಿನದಿಸುತ್ತಲೇ ಇರುವುದನ್ನು ನೋಡಬಹುದು. ಆ ಸ್ವರವು ಸರ್ವೋಚ್ಚ ಪರಮ ಪ್ರಭುವಿನ ಪರಿಕಲ್ಪನೆಯನ್ನು ಸ್ಪಷ್ಟ ವಿಸ್ತರಿಸುತ್ತದೆ. ಅದು ಅಖಂಡ ಸತ್ಯ, ಅದು ಮಾನವನಿಗಿಂತಲೂ ದೊಡ್ಡದು, ಪ್ರಕೃತಿಗಿಂತಲೂ ದೊಡ್ಡದು. ಆ ಸ್ವರವು ಆತ್ಮದ ನಿರ್ವ್ಯೆಯಕ್ತಿಕ ಸ್ತರದಿಂದ ಮಾತ್ರ ಹೊರಬರುವಂಥದು, ಹಾಗೆಂದು ಆತ್ಮದ ನಿರ್ವ್ಯೆಯಕ್ತಿಕತೆಯೆಂಬುದು ಮಾತ್ರವೇ ಶ್ರೇಷ್ಠವೆಂದೇನೂ ಅರ್ಥವಲ್ಲ. ಮೇಲಿಂದ ಮೇಲೆ ಸ್ಪಷ್ಟವಾಗಿ ಕೇಳಿ ಬರುತ್ತಿರುವ ಆ ಸ್ವರದ ಅರ್ಥವೇನೆಂಬುದನ್ನು ತಿಳಿದುಕೊಳ್ಳಬೇಕು. ಆ ಪರಮ ಪುರುಷನೇ, ಆ ವಿಶ್ವಾತ್ಮನಾದ ಪರಮ ದೈವತ್ವವೇ, ಈ ಮಹಾನ್ ದೈವೀ ಗುರುವಿನ ವಾಣಿಯ ಮೂಲಕ ರಹಸ್ಯವನ್ನು ಉಸುರುತ್ತಿದ್ದಾನೆ. ಮಾನವನ ಸಾರಥಿಯಾಗಿ ರಥದಲ್ಲಿ ಆಸೀನನಾಗಿರುವ ದೈವೀ ಗುರುವೇ ಪರಮ ದ್ರಷ್ಟಾರ ಹಾಗೂ ಕರ್ಮ ಯೋಗಿಯ ಎಲ್ಲವೂ ತಾನೇ ಎಂಬುದನ್ನು ಸ್ಪಷ್ಟವಾಗಿ ಸಾರಿ ಹೇಳುತ್ತಾನೆ. "ನಾನೇ ನಿನ್ನೊಳಗೂ ಇದ್ದೇನೆ, ಮಾನವನ ಶರೀರದಲ್ಲಿರುವ ನಾನು ಸ್ವಯಂಭೂ ಆಗಿರುವ ಆತ್ಮ ಹಾಗೂ ವಿಶ್ವ ಕಾರ್ಯಗಳ ರಹಸ್ಯ ಕರ್ತಾರನಾಗಿದ್ದೇನೆ. ಈ ಬ್ರಹ್ಮಾಂಡವೆಲ್ಲವೂ ಇರುವುದೇ ನನಗಾಗಿ, ಸಮಗ್ರ ಬ್ರಹ್ಮಾಂಡದ ಅಸ್ತಿತ್ವ, ಕಾರ್ಯ ನನಗಾಗಿಯೇ, ನನ್ನ ಪ್ರಾಪ್ತಿಗಾಗಿಯೇ ಬ್ರಹ್ಮಾಂಡದ ಪ್ರತಿ ಜೀವಿ ಪ್ರಯತ್ನಿಸುತ್ತದೆ. ನನ್ನನ್ನೇ ಸಮಗ್ರ

ಜಗತ್ತು, ಗುರಿಯಾಗಿ ಹೊಂದಿದೆ. ನಾನೇ ಸಮಗ್ರ ವಿಶ್ವದ ರಹಸ್ಯವಾಗಿದ್ದೇನೆ. ನಾನು ಹೇಳುತ್ತಿರುವ ಈ "ನಾನು" ಎಂಬುದು ವಿಶಾಲಾತಿವಿಶಾಲವಾದ ಮಾನವನ ವ್ಯಕ್ತಿಮತ್ತೆಯ ನಾನು 'ಅಹಂ'ಗಿಂತ ಬಹಳ ಬೃಹತ್ತಾದ ತತ್ತ್ವವಾಗಿದೆ. ಇದೆಲ್ಲವೂ ಆ "ನಾನು" ಎಂಬುದರ ಕೇವಲ ಒಂದು ಸಣ್ಣ ಭಾಗ ಮಾತ್ರ. ಸಮಗ್ರ ಸೃಷ್ಟಿಯ ಅದರ ಕೇವಲ ಒಂದು ಅಂಶ ಮಾತ್ರ. ಪ್ರಕೃತಿಯ ವ್ಯಾಪಾರವು ಕೂಡ ಆ ದೃಷ್ಟಿಯಿಂದ ತೀರ ಕೆಳಗಿನ ಸ್ತರವೇ. ನಾನು ಸಮಗ್ರ ಜೀವಗಳ, ಜೀವಾತ್ಮಗಳ ಪ್ರಭು, ವಿಶ್ವ ವ್ಯಾಪಾರದ ಈಶ್ವರ, ನಾನೇ ಪ್ರಕಾಶ, ನಾನೇ ಏಕಮೇವ ಶಕ್ತಿ, ನಾನೇ ಅಖಂಡ ಸತ್ ಆಗಿದ್ದೇನೆ. ನಿನ್ನಲ್ಲಿರುವ ಪರಮ ದೈವಕವೇ ಪರಮ ಗುರು, ಪರಾತ್ಪರ ಬೆಳಕಿನ ಸೂರ್ಯ, ಜ್ಞಾನದ ನಿರ್ಮಲ ಜ್ಯೋತಿಯನ್ನು ಎತ್ತಿ ಹಿಡಿಯುವವನು ನಾನೇ. ಅಜ್ಞಾನವೇ ನಿನಗೆ ಅವಿಕಾರಿಯಾದ ಪರಮಾತ್ಮ ಹಾಗೂ ವಿಕಾರಿಯಾದ ಜೀವಾತ್ಮಗಳ ನಡುವಿನ ಭೇದವನ್ನು ದರ್ಶನ ಮಾಡಿಸುವುದು. ನೀನು ಕೇವಲ ಬೆಳಕು ನೋಡಬೇಡ, ಬೆಳಕಿನ ಮೂಲವಾದ ಮಹಾ ಜ್ಯೋತಿಯ ಕಡೆಗೆ ನೋಡು. ಆವಾಗ ಮಾತ್ರ ನಿನಗೆ ಪರಮಾತ್ಮನ ದರ್ಶನವಾಗುವುದು. ಅಲ್ಲಿಯೇ ಪ್ರಕೃತಿಯ ಹಾಗೂ ಸಮಗ್ರ ಜೀವ ಸೃಷ್ಟಿಯ ಆಧ್ಯಾತ್ಮಿಕ ಸತ್ಯದ ಅನಾವರಣವಾಗುವುದು. ಸಮಸ್ತ ಪ್ರಾಣಿಗಳಲ್ಲಿ ನನ್ನನ್ನು ಕಾಣು, ಎಲ್ಲವನ್ನೂ ಎಲ್ಲರನ್ನೂ ಪರಮ ಏಕ ಸತ್ಯದಲ್ಲಿ ಸತ್‌ನಲ್ಲಿ ಕಾಣು. ಎಲ್ಲವನ್ನೂ, ಸಮಗ್ರ ಸೃಷ್ಟಿಯನ್ನು ನನ್ನೊಳಗೆ ಕಾಣಲು ಇರುವ ಏಕೈಕ ಮಾರ್ಗವೇ ಅದು. ಎಲ್ಲದರಲ್ಲಿಯೂ, ಏನೆಲ್ಲ ದೃಗ್ಗೋಚರವೋ ಅದೆಲ್ಲದರಲ್ಲೂ, ಈಶ್ವರನನ್ನೇ ನೋಡಲು ಸಾಧ್ಯವಾಗುವುದು ಆಗಲೇ. ಎಲ್ಲವೂ ಆ ಪರಬ್ರಹ್ಮನಲ್ಲಿಯೇ ಸನ್ನಿವಿಷ್ಟವಾಗಿದೆ. ನಿನ್ನನ್ನು ನೀನು ತಿಳಿದುಕೋ, ನೀನು ನೀನೇ ಅಂದರೆ ಆತ್ಮವೇ ಆಗು, ಅವನೊಳಗೆ ಒಂದಾಗು, ಆ ಪರಮ ತತ್ತ್ವನೇ ನಾನು. ಸ್ಫಟಿಕ ಸದೃಶ ನಿರ್ಮಲ, ನಿರ್ದೋಷವಾದ ನಿನ್ನ ಆತ್ಮವು ನನ್ನಲ್ಲಿ ಅಂದರೆ ಪರಬ್ರಹ್ಮನಲ್ಲಿ ವಿಲಯನವಾಗಲಿ. ನಾನು, ನಾನೇ ಪರಬ್ರಹ್ಮ, ಆತ್ಮ, ಪರಮಾತ್ಮ, ಇತ್ಯಾದಿ ಎಲ್ಲಕ್ಕಿಂತ ಪರಾತ್ಪರ ಸತ್ಯವೇ ನಾನು "ನಾನೇ ಪರಮೇಶ್ವರ" ಎಂದು ಕೃಷ್ಣ ಹೇಳುತ್ತಾನೆ.

ಅರ್ಜುನನಿಗೆ ಅರ್ಥವಾಗಬೇಕಾದುದೇನೆಂದರೆ ಅಥವಾ ಮನದಟ್ಟಾಗ–ಬೇಕಾದುದೇನೆಂದರೆ ಆ ಪರಮ ದೈವತ್ವವೇ ಸರ್ವೋಚ್ಚ ಸತ್ಯ, ಕೇವಲ ಜೀವಾತ್ಮ,

ಜೀವ ಮಾತ್ರ ಅಲ್ಲ ಪ್ರಕೃತಿಯ ಉನ್ನತ ಸತ್ಯ ಕೂಡ ಅದೇ. ತನ್ನ ವ್ಯಕ್ತಿತ್ವ, ವಿಶ್ವದ ಪ್ರತಿ ವ್ಯಕ್ತಿಯ ಮತ್ತು ಸಮಗ್ರ ವಿಶ್ವದ ಪರಮ ಸತ್ಯವೇ ಅವನು. ಅವನ ಸಂಕಲ್ಪವೇ ಪ್ರಕೃತಿಯ ಇಚ್ಛೆ, ಅದು ಪ್ರಕೃತಿಯ ಕಾರ್ಯಗಳಿಗಿಂತಲೂ ಉನ್ನತವಾದುದು. ಪ್ರಕೃತಿಯ ಎಲ್ಲ ಕಾರ್ಯವೂ ಅವನ ನಿಮಿತ್ತವೇ ಆಗಿದೆ. ಇಡೀ ವಿಶ್ವದ, ಪ್ರತಿ ಮಾನವನ ಎಲ್ಲ ಕರ್ಮಗಳ ಪ್ರಭಾವವೂ ಅವನೇ, ಅವುಗಳ ಫಲವೂ ಅವನೇ. ಆದ್ದರಿಂದ ಅರ್ಜುನನು ಎಲ್ಲ ಕರ್ಮಗಳನ್ನು ಯಜ್ಞಭಾವದಿಂದಲೇ ಮಾಡಬೇಕು. ಅರ್ಜುನನ ಎಲ್ಲ ಕರ್ಮಗಳು ಹಾಗು ವಿಶ್ವದ ಎಲ್ಲ ಕರ್ಮಗಳು ಅವನ ಸತ್ಯವೇ ಆಗಿವೆ. ಪ್ರಕೃತಿಯೇ ನಿಜವಾದ ಕರ್ಮಕರ್ತೃವೇ ಹೊರತು "ಅಹಂ" ಅಲ್ಲ. ಪ್ರಕೃತಿಯ ಸತ್‌ನ ಶಕ್ತಿ ಮಾತ್ರ. ಪುರುಷನೇ ಎಲ್ಲ ಕರ್ಮಗಳ ಒಡೆಯ. ಎಲ್ಲ ಶಕ್ತಿಗಳು, ಯುಗ ಯುಗಾಂತರಗಳ ಯಜ್ಞದ ಶಕ್ತಿಗಳು ಎಲ್ಲದಕ್ಕೂ ಅವನೇ ಈಶ್ವರನಾಗಿದ್ದಾನೆ. ಆದ್ದರಿಂದ ತನ್ನೆಲ್ಲ ಕರ್ಮಗಳನ್ನು ತನ್ನೊಳಗೆ ಮತ್ತು ವಿಶ್ವದಲ್ಲಿ ಸರ್ವಾಂತರ್ಯಾಮಿಯಾಗಿ ವಾಸ ಮಾಡುವ ಪರಮಾತ್ಮನಿಗೆ ಅರ್ಪಿಸಬೇಕು.

ಜೀವಾತ್ಮನ ದಿವ್ಯ ಜನ್ಮ, ಜೀವಾತ್ಮನು ಮೃತ್ಯುವಿನ ಬಂಧದಿಂದ ಪಾರಾಗಬೇಕು, ಅಹಂನಿಂದ ಮುಕ್ತವಾಗಬೇಕು, ಶರೀರ ಭಾವದಿಂದ ಬಿಡುಗಡೆ ಹೊಂದಿ ಶಾಶ್ವತವಾದ ಆಧ್ಯಾತ್ಮಿಕ ಭಾವದಲ್ಲಿ ಜಾಗೃತರಾಗಬೇಕೆಂದರೆ, ಎರಡು ಮುಖ್ಯ ನಿಯಮಗಳಿವೆ, ಅವುಗಳನ್ನು ಪೂರೈಸಲೇಬೇಕು. ಒಂದು, ತನ್ನೊಳಗಿರುವ ಕಾಲಾತೀತ ಅವಿಕಾರಿಯಾದ ಆತ್ಮವನ್ನರಿತುಕೊಂಡು ಶಾಶ್ವತವಾದ ದೈವತ್ವದೊಡನೆ ಒಂದಾಗಬೇಕು. ಎರಡನೆಯದಾಗಿ, ವಿಶ್ವದ ಹಿಂದಿನ ರಹಸ್ಯದ ಹಿಂದಿರುವ ಜೀವಂತ ಸತ್ಯ, ಸಮಸ್ತ ಅಸ್ತಿತ್ವದ ಹಾಗೂ ಕರ್ಮಗಳ ಈಶ್ವರನ ಜ್ಞಾನವೂ ಅವಶ್ಯವಿದೆ. ಇದರ ಮೂಲಕ ಮಾತ್ರ ಕಾಲ ಮತ್ತು ದೇಶಗಳಲ್ಲಿ ಅವತರಿಸಿರುವ, ಸಮಸ್ತ ವಿಶ್ವವೇ ತಾನಾಗಿರುವ ವಿಶ್ವಾತ್ಮನ ಜೊತೆ ಒಂದಾಗುವ ಅದಮ್ಯ ಇಚ್ಛೆಯ ಮೂಲಕ ಭಗವಂತನ ಜೊತೆ ಏಕರೂಪವಾಗಬಹುದು. ಇಲ್ಲಿ ಆತ್ಮ ವಿಮೋಚನೆಯ ಯೋಗವೇ ಭಕ್ತಿ ಯೋಗಕ್ಕೆ ಮೆಟ್ಟಲಾಗುತ್ತದೆ. ಸಂಪೂರ್ಣ ಮುಕ್ತಿ ಪ್ರಾಪ್ತಿಗಾಗಿ ಭಕ್ತಿ ಬೇಕೇ ಬೇಕಾಗುತ್ತದೆ. ಭಕ್ತಿಯು ಕ್ಷರ ಪುರುಷನಿಗಿಂತ ಅಥವಾ ಕ್ಷರ ಪ್ರಕೃತಿಗಿಂತ ಶ್ರೇಷ್ಠವಾದ ತತ್ತ್ವದ ಆರಾಧನೆಯೂ ಆಗಿದೆ, ಜೊತೆಗೆ ಆ ಸ್ತರಕ್ಕೆ ಏರುವ ಹಂಬಲವೂ ಆಗಿದೆ. ಆಗ ಎಲ್ಲ ಜ್ಞಾನವೂ ಆರಾಧನೆಯೇ

ಆಗುವುದು, ಅಭೀಪ್ಸೆಯೇ ಆಗುವುದು, ಅದೇ ರೀತಿ ಎಲ್ಲ ಕರ್ಮಗಳೂ ಆರಾಧನೆಯೇ, ಅಭೀಪ್ಸೆಯೇ ಆಗುವುದು. ಪ್ರಕೃತಿಯ ಎಲ್ಲಾ ಕಾರ್ಯಗಳು ಹಾಗೂ ಆತ್ಮದ ಸ್ವಾತಂತ್ರ್ಯಗಳು ಸಮರಸಗೊಂಡು ಒಂದೇ ಆರಾಧನೆ, ಒಂದೇ ಭಕ್ತಿ, ದೈವತ್ವದೆಡೆಗಿನ ಆರೋಹಣದ, ಉತ್ಥಾನದ ಒಂದೇ ಚಲನೆಯಾಗಿ ಮಾರ್ಪಡುವುದು. ಅತ್ಯಂತಿಕ ಮೋಕ್ಷ, ಸಾಮಾನ್ಯ ನಿಮ್ನ ಪ್ರಕೃತಿಯಿಂದ ಉನ್ನತವಾದ ಆಧ್ಯಾತ್ಮಿಕ ಸ್ಥಿತಿಗೆ ಏರುವ ಪ್ರಯತ್ನವಾಗಿ ಬದಲಾಗುವುದು. ಇಲ್ಲಿ ಆತ್ಮ ಅಥವಾ ಜೀವವು ಕರಗಿ ಹೋಗಿಬಿಡುವುದು, ಅಸ್ತಿತ್ವ ಕಳೆದುಕೊಳ್ಳುವುದಿಲ್ಲ. ಇಲ್ಲ ಕೇವಲ 'ಅಹಂ' ಕರಗಿ ಹೋಗಿ, ಇಲ್ಲದಾಗುವುದು. ನಮ್ಮ ಜ್ಞಾನ, ಸಂಕಲ್ಪ ಮತ್ತು ಭಕ್ತಿ(ಅಥವಾ ಪ್ರೇಮ)ಗಳು ಸಂಪೂರ್ಣ ಆತ್ಮ ಜ್ಞಾನದಿಂದ ಕೂಡಿ ಕೇವಲ ಪ್ರಪಂಚದಲ್ಲಿ ಅಥವಾ ಸಂಸಾರದಲ್ಲಿ ಮಾತ್ರ ತೊಡಗಿಕೊಳ್ಳುವುದಿಲ್ಲ. ಬದಲಾಗಿ ವಿಶ್ವೋತ್ತರ ಸತ್ಯದಲ್ಲಿ, ಅಸ್ಮಿತೆಯನ್ನು ಕಳೆದುಕೊಳ್ಳದೇ ಸಾರ್ಥಕತೆಯ ರೂಪದಲ್ಲಿ ಒಂದಾಗಿ ಸೇರುವುದು.

ಈ ಜ್ಞಾನವನ್ನು ಅರ್ಜುನನಿಗೆ ಸರಿಯಾಗಿ ಮನದಟ್ಟು ಮಾಡಿಕೊಡಲು ದಿವ್ಯ ಗುರು ಕೃಷ್ಣನು ಇನ್ನೂ ಎರಡು ತೊಡಕುಗಳನ್ನು ನಿವಾರಿಸಲು ಯತ್ನಿಸುತ್ತಾನೆ. ನಿರ್ವ್ಯೆಯಕ್ತಿಕ (ನಿರಾಕಾರ, ನಿರ್ಗುಣ) ಆತ್ಮ ಮತ್ತು ಮಾನವೀಯ ಜೀವ(ಜೀವಾತ್ಮ, ಸಗುಣ ರೂಪ)ಗಳಲ್ಲಿಯೂ ಹಾಗೂ ಆತ್ಮ ಮತ್ತು ಪ್ರಕೃತಿ ಇವುಗಳ ನಡುವೆ ಕೂಡ ಭೇದವಿದೆ. ಈ ಭೇದಗಳೇ ನಿಜವಾಗಿ ಇರುವ ತೊಡಕುಗಳು. ಕೃಷ್ಣನು ಇವುಗಳನ್ನು ತೊಡೆದು ಹಾಕಲು ಪ್ರಯತ್ನ ಮಾಡುತ್ತಾನೆ. ಈ ಭೇದ ಅಥವಾ ವೈರುಧ್ಯಗಳಿರುವವರೆಗೂ ಪ್ರಕೃತಿಯ ಆಂತರ್ಯದಲ್ಲಿರುವ ಆತ್ಮ ಹಾಗೂ ಮಾನವ ಈ ಎರಡೂ ಅಸ್ತಿತ್ವಗಳಲ್ಲಿರುವ ಅಂತರ ಅಸ್ಪಷ್ಟವಾಗಿಯೇ ಇರುತ್ತದೆ. ಅವೆರಡನ್ನೂ ಸಮನ್ವಯ ಮಾಡಲು ಬರುವುದಿಲ್ಲ. ಅಂಥ ಪ್ರಯತ್ನ ತರ್ಕಹೀನ ಹಾಗೂ ಅಸಾಧ್ಯ ಎನಿಸುತ್ತದೆ. ಪ್ರಕೃತಿಯ ತ್ರಿಗುಣಗಳ ಮೂಲಕ ಯಾಂತ್ರಿಕವಾಗಿ ಜೀವನನ್ನು ಬಂಧಿಸುತ್ತದೆ ಎಂಬ ಸಾಮಾನ್ಯ ತಿಳುವಳಿಕೆ ಪ್ರಬಲವಾಗಿದೆ. ಹೀಗಾಗಿ ಜೀವಾತ್ಮನು ಅವುಗಳ ಬಂಧನದಲ್ಲಿರುವುದರಿಂದ ಅವನೆಂದಿಗೂ ಆತ್ಮ ಅಥವಾ ದೈವೀ ಅಂಶವಾಗಿರಲು ಸಾಧ್ಯ ಎಂದೇ ಅನಿಸುತ್ತದೆ. ಪ್ರಕೃತಿಯು ಅಜ್ಞಾನಜನ್ಯವಾಗಿದೆ, ಅಜ್ಞಾನಮಯವಾಗಿದೆ, ಯಾಂತ್ರಿಕವಾಗಿದೆ. ಅದು ಪರಮಾತ್ಮನ ಶಕ್ತಿಯಾಗಿರಲು

ಸಾಧ್ಯವಿಲ್ಲ. ದೈವೀ ಶಕ್ತಿಯಾಗಿದ್ದರೆ ಅದು ಅನಿರ್ಬಂಧಿತವಾಗಿರಬೇಕಾಗಿತ್ತು, ಸ್ವತಂತ್ರವಾಗಿರಬೇಕಾಗಿತ್ತು, ಜನ್ಮದಿಂದ ಆಧ್ಯಾತ್ಮಿಕವೂ ಕಾರ್ಯದಿಂದ ಸರ್ವತಂತ್ರ ಸ್ವತಂತ್ರವೂ ಆಗಿರಬೇಕಾಗಿತ್ತು. ಆಧ್ಯಾತ್ಮಿಕ ತಥ್ಯದಿಂದ ಕೂಡಿರಬೇಕಾಗಿತ್ತು. ಅಹಂಯುಕ್ತವಾದ ಪ್ರಕೃತಿಯ ಬಂಧನದಲ್ಲಿ ಸಿಲುಕಿರುವ ಜೀವಾತ್ಮನು ಕೇವಲ ಭೌತಿಕ, ಪ್ರಾಣಿಕ, ಮಾನಸಿಕನಾಗಿರುವುನೇ ಹೊರತು ದೈವೀ ಅಂಶವಾಗಿರಲು ಸಾಧ್ಯವಿಲ್ಲ; ದೈವಿಕವಾಗಿದ್ದರೆ ಜೀವಾತ್ಮನು ದಿವ್ಯ ಪ್ರಕೃತಿಯ ಸ್ವಭಾವವನ್ನು ಹೊಂದಿರಬೇಕು, ಸ್ವತಂತ್ರ, ಆಧ್ಯಾತ್ಮಿಕ ಸ್ವಯಂ ವಿಕಾಸ ಪೂರ್ಣ, ಸ್ವಯಂಭೂ, ಮನಃ ಪ್ರಾಣ ಶರೀರಗಳಿಗಿಂತ ಶ್ರೇಷ್ಠನೂ ಆಗಿರಬೇಕಾಗಿತ್ತು. ಈ ಎರಡೂ ತೊಡಕುಗಳನ್ನು, ಅವರೋಧಗಳನ್ನು ಸತ್ಯದ ಒಂದು ಕಿರಣದಿಂದ ಕೃಷ್ಣನು ನಿವಾರಿಸುತ್ತಾನೆ. ಯಾಂತ್ರಿಕ ಪ್ರಕೃತಿಯ ಕೇವಲ ನಿಮ್ನ ಸತ್ಯ; ಅದು ನಿಮ್ನ ದೃಶ್ಯಗೋಚರ ಕಾರ್ಯದ ಸೂತ್ರ. ಇದಕ್ಕಿಂತ ಹಿರಿದಾದ ಆಧ್ಯಾತ್ಮಿಕ ಸತ್ಯವಿದೆ, ಅದೇ ಮಾನವನ ನಿಜವಾದ ಆಧ್ಯಾತ್ಮಿಕ ವ್ಯಕ್ತಿತ್ವ, ನಮ್ಮ ನಿಜ ಪುರುಷ. ಈಶ್ವರನು ಏಕಕಾಲಕ್ಕೆ ನಿರ್ವ್ಯೆಯಕ್ತಿಕನೂ ವ್ಯೆಯಕ್ತಿಕನೂ (ನಿರಾಕಾರನೂ, ಸಾಕಾರನೂ) ಆಗಿದ್ದಾನೆ. ಅವನ ನಿರ್ವ್ಯೆಯಕ್ತಿಕತೆಯು ನಮ್ಮ ಮಾನಸಿಕ ಸಾಕ್ಷಾತ್ಕಾರಕ್ಕೆ ಕಾಲಾತೀತವಾದ ಅನಂತ ಸತ್ ಅಥವಾ ಅಸ್ತಿತ್ವ ಪ್ರಜ್ಞೆ ಅಥವಾ ಚಿತ್ ಹಾಗೂ ಸತ್‌ನ ಆನಂದವಾಗಿ ತೋರುವುದು. ಅವನ ವ್ಯೆಯಕ್ತಿಕತೆಯು ಅಥವಾ ಸಾಕಾರ ರೂಪವು ಸತ್ತೆಯ ಪ್ರಜ್ಞಾಯುಕ್ತ ಶಕ್ತಿಯಾಗಿ, ಜ್ಞಾನದ ಒಂದು ಕೇಂದ್ರವಾಗಿ, ಸಂಕಲ್ಪ ಹಾಗೂ ಆನಂದಗಳ ವೈವಿಧ್ಯಮಯ ಅಸಂಖ್ಯಾ ಆತ್ಮ ಪ್ರಕಟನೆಯಾಗಿದೆ. ನಮ್ಮ ಸತ್ತೆಯ (ಅಥವಾ ಅಸ್ತಿತ್ವದ) ನಿಶ್ಚಲ ಸ್ಥಿತಿಯೇ ನಿರ್ವ್ಯೆಯಕ್ತಿಕತೆ. ವೈವಿಧ್ಯತೆಯಲ್ಲಿ ಅಥವಾ ಅನೇಕತೆಯಲ್ಲಿ ನಾವೆಲ್ಲರೂ, ಪ್ರತಿಯೊಬ್ಬರೂ ನಮ್ಮ ಅಂತರಂಗದ ಆಧ್ಯಾತ್ಮಿಕ ಸತ್ತೆಯಲ್ಲಿ ಆ ದಿವ್ಯ ಸತ್ತೆಯ ಮೂಲಭೂತ ಶಕ್ತಿಯೇ ಆಗಿದ್ದೇವೆ. ಆದರೆ ವೈವಿಧ್ಯತೆಯ ಭೇದವಿರುವುದು ಸ್ವಾತ್ಮ ಪ್ರಕಟನೆಯ ದೃಷ್ಟಿಯಿಂದ ಮಾತ್ರ. ಈ ಭೇದವನ್ನು ದಾಟಿ ಹೋದಾಗ ಆ ದೈವೀ ನಿರ್ವ್ಯೆಯಕ್ತಿತೆಯೇ ಅನಂತ, ಪುರುಷೋತ್ತಮ, ಪರಮಾತ್ಮನಾಗಿ ತೋರುವುದು.

ಇದೇ "ಸೋಹಂ" ನಾನೇ ಅವನು, ನಾನೇ ತತ್, ಅವನ ಮೂಲಕವೇ ಪ್ರಪಂಚವು ನಿರ್ಮಿತವಾಗಿದೆ. ಅವನ ಏಕತ್ವವೇ ಇಲ್ಲಿ ಅನೇಕವಾಗಿ ಮಾರ್ಪಟ್ಟಿದೆ,

ಅಲ್ಲಿನ ನಿರ್ವೈಯಕ್ತಿಕತೆಯೇ ಇಲ್ಲಿ ವೈಯಕ್ತಿಕ ವ್ಯಕ್ತಿಮತ್ತೆ, ಪ್ರತ್ಯೇಕತೆಯಾಗಿ ತೋರುತ್ತದೆ. ಇದನ್ನೇ ಉಪನಿಷತ್ತುಗಳು ಸರ್ವಂ ಖಲು ಇದಂ ಬ್ರಹ್ಮ ಎಂದು ಹೇಳುತ್ತವೆ; ಗೀತೆಯು ಸನಾತನ ಪುರುಷನಾದ ವಾಸುದೇವನೇ ಎಲ್ಲವೂ ಎಂದು ಸಾರುತ್ತದೆ. ಪರಬ್ರಹ್ಮನೇ ಪ್ರಜ್ಞೆಯ ಮೂಲಕ ಈ ಸೃಷ್ಟಿಯನ್ನು ರಚಿಸುತ್ತಾನೆ, ಸಂರಕ್ಷಿಸುತ್ತಾನೆ, ಅವನ ಪ್ರಜ್ಞೆಯೇ ಇಲ್ಲಿ ಮನಃ, ಪ್ರಾಣ, ಬುದ್ಧಿ, ಶರೀರವಾಗಿ, ವಸ್ತು ತಂತ್ರ ಪ್ರಪಂಚವಾಗಿ ತೋರುತ್ತದೆ. ಇದೇ ನಾವು ಕಾಣುವ ಭೌತಿಕ ಪ್ರಪಂಚ. ಜೀವವೆಂಬುದು ಸನಾತನದ ಆಧ್ಯಾತ್ಮಿಕ ಪ್ರಕೃತಿ, ಅವನ ಶಾಶ್ವತ, ಸನಾತನ ಅನೇಕತೆ ಅಥವಾ ವೈವಿಧ್ಯತೆ, ಅವನ ಪ್ರಜ್ಞೆಯ ಸ್ವ–ಶಕ್ತಿಯ ಮೂಲಕವೇ ನಿರ್ಮಾಣವಾಗಿರುವ, ಕೆಲಸ ಮಾಡುತ್ತಿರುವ ಸ್ವ–ದರ್ಶನವೇ ವಿವಿಧ ಮುಖಗಳೇ, ದೇವರು, ಪ್ರಕೃತಿ ಮತ್ತು ಜೀವ ಇವು ಒಂದೇ ಅಸ್ತಿತ್ವದ ಮೂರು ರೂಪಗಳು, ಇವು ಮೂರು ಬೇರೆ ಬೇರೆ ಅಲ್ಲ, ಒಂದೇ.

ಈ ಪುರುಷೋತ್ತಮನು (ದಿವ್ಯ ಸತ್ತೆಯು) ತಾನೇ ವಿಶ್ವವಾಗಿ ಹೇಗೆ ಪ್ರಕಟವಾಗುತ್ತಾನೆ? ಮೊದಲು ಅವನು ಅವಿಕಾರಿ, ಅಕ್ಷರ, ಕಾಲಾತೀತ ಆತ್ಮ, ಅವನು ಸರ್ವಾಂತರ್ಯಾಮಿ, ಸರ್ವಾಧಾರ, ಇದು ಅವನ ಸನಾತನ ಮೂಲ ಸ್ವರೂಪ, ಇಲ್ಲಿ ಗತಿ ಇಲ್ಲ. ಚಲನೆ ಅಂದರೆ ಆಗುವಿಕೆ (ಸಂಭೂತಿ) ಇಲ್ಲ. ಇದು ನಿಶ್ಚಲ ಸ್ಥಿತಿ. ಈ ಅವಸ್ಥೆಯಲ್ಲಿ ಸ್ವ–ನಿರ್ಮಾಣದ, ಆತ್ಮ ಸಂಭೂತಿಯ, ಅಂದರೆ ತಾನೇ ಏನೆಲ್ಲವೂ ಆಗಿ, ಅನೇಕವಾಗಿ ಪ್ರಕಟವಾಗುವ ಸಹಜ ಸಮರ್ಥ ಸ್ವಭಾವ ಅಂತರ್ನಿಹಿತ–ವಾಗಿರುತ್ತದೆ. ತನ್ನ ಆಧ್ಯಾತ್ಮಿಕ ಸ್ವ–ದರ್ಶನದಿಂದ ತನ್ನಲ್ಲಿ ಏನೆಲ್ಲ ಇದೆಯೋ, ತನ್ನ ಅಸ್ತಿತ್ವದಲ್ಲಿನ ಎಲ್ಲವನ್ನೂ ಬಿಡುಗಡೆ ಮಾಡಿ (ಒಂದೊಂದಾಗಿ ಅಥವಾ ಎಲ್ಲವನ್ನೂ ಏಕಕಾಲಕ್ಕೆ) ಪ್ರಕಟ ಮಾಡುತ್ತದೆ. ಸೃಜಿಸುತ್ತದೆ. ಅದರ ಈ ಸ್ವ–ಸಂಭೂತಿಯ ಅಥವಾ ಆತ್ಮ ಪ್ರಕಟನೆಯ ಶಕ್ತಿಯೇ ಕಾರ್ಯ ಪ್ರವೃತ್ತವಾಗಿ ಜಗತ್ತನ್ನು, ಜಾಗತಿಕ ಕರ್ಮಗಳನ್ನು ರೂಪಿಸುತ್ತದೆ. ಇದೆಲ್ಲದರ ನಿರ್ಧಾರಕ ಶಕ್ತಿ ಅಂದರೆ ಆತ್ಮ ಸ್ಥಿತ ಜ್ಞಾನವೇ. ಹೀಗೆ ಇಡೀ ಸೃಷ್ಟಿಯೇ ಒಂದು ಕಾರ್ಯ, ಈ ಕ್ರಿಯೆಯನ್ನೇ ನಾವು ಕರ್ಮ ಎಂದು ಕರೆಯುತ್ತೇವೆ. ಆದರೆ ಈ ಕ್ರಿಯೆಯು ಇಲ್ಲಿ ಕ್ಷರ ಅಥವಾ ನಾಶವುಳ್ಳ ಮನಃ ಪ್ರಾಣ ಶರೀರ, ಬುದ್ಧಿ ಇಂದ್ರಿಯ, ಆಕಾರ ಅಥವಾ ವಸ್ತು / ಜೀವಿ, ಭೌತಿಕ ಸೃಷ್ಟಿಯಾಗಿ ಮಾರ್ಪಡುವುದು. ಈ ಕ್ಷರ ಸೃಷ್ಟಿಯು ಮೂಲ ಪ್ರಕಾಶ(ಜ್ಞಾನ)ದಿಂದ

ಬೇರ್ಪಟ್ಟು ಅಜ್ಞಾನವಾಗಿ ಬದಲಾಗುವುದು. ಎಲ್ಲವೂ ಸಾಂತ ಹಾಗೂ ಮಿತಿಯುಳ್ಳವುಗಳಾಗಿ ಪ್ರಕಟವಾಗುವುವು. ಸೃಷ್ಟಿಯ ಸಮಸ್ತ ಕಾರ್ಯವೂ ಈಗ ಪ್ರಕೃತಿ ಸ್ಥಿತ ಆತ್ಮದ ಯಜ್ಞವಾಗಿ, ತನ್ನೊಳಗೆ ರಹಸ್ಯವಾಗಿ ಅಡಗಿರುವ ಪರಮಾತ್ಮನಿಗೆ ಅರ್ಪಿಸುವ ಯಜ್ಞವಾಗಿ ಮಾರ್ಪಡುವುದು. ಅಂತಯೇ ಎಲ್ಲದರಲ್ಲೂ ಪುರುಷೋತ್ತಮ ನಿವಾಸ ಅವಶ್ಯವಾಗಿ ಇದ್ದೇ ಇರುತ್ತದೆ. ಅವನೇ ಯಜ್ಞದ ಪ್ರಭು, ಅವನ ಶಕ್ತಿಯೇ ಎಲ್ಲವನ್ನೂ ನಿಯಂತ್ರಿಸುವುದು. ಅವನೇ ಯಜಮಾನ, ಅವನೇ ಆಹುತಿ ಸ್ವೀಕರಿಸುವ ದೇವತೆಯೂ ಆಗಿರುವುನು. ಇದನ್ನು ತಿಳಿದುಕೊಳ್ಳುವುದೇ ನಿಜವಾಗಿ ಸೃಷ್ಟಿಯ ರಹಸ್ಯವನ್ನು ಭೇದಿಸುವುದು, ವಿಶ್ವದಲ್ಲಿ ಅಂತರ್ನಿಹಿತನಾಗಿರುವ ಭಗವಂತನನ್ನು ದರ್ಶನ ಮಾಡಿದಂತೆ ಹಾಗೂ ಅಜ್ಞಾನದಿಂದ ಪಾರಾಗುವ ಬಾಗಿಲನ್ನು ಕಂಡು ಹಿಡಿದಂತೆ, ಏಕೆಂದರೆ ತನ್ನೆಲ್ಲ ಕೆಲಸ ಕಾರ್ಯಗಳನ್ನು, ಪ್ರಜ್ಞೆಯನ್ನು ಭಗವಂತನಿಗೆ ಸಮರ್ಪಿಸುವುದರ ಮೂಲಕವೇ ಮಾನವನಿಗೆ ಶಕ್ತಿ ಬರುವುದು. ಇದರಿಂದಲೇ ತನ್ನ ಮೂಲ ಆಧ್ಯಾತ್ಮಿಕ ನೆಲೆಗೆ ಹಿಂತಿರುಗಲು ಸಾಧ್ಯವಾಗುವುದು ಮತ್ತು ಇದರ ಮೂಲಕವೇ ಶಾಶ್ವತವಾದ ವಿಶ್ವೋತ್ತೀರ್ಣ ಸತ್ಯದ ಜೊತೆ ಅನುಸಂಧಾನ ಮಾಡಲು ಸಾಧ್ಯವಾಗುವುದು, ಈ ಕ್ಷರ ಪ್ರಕೃತಿಯಿಂದ ಮೇಲಕ್ಕೆ ಹೋಗಲು ಶಕ್ತಿ ಬರುವುದು.

ಈ ಸತ್ಯವೇ ಅಸ್ತಿತ್ವದ ರಹಸ್ಯವಾಗಿದೆ. ಇದನ್ನು ನಮ್ಮ ಆಂತರಿಕ ಜೀವನಕ್ಕೆ ಹಾಗೂ ನಮ್ಮ ಬಾಹ್ಯ ಕರ್ಮಗಳಿಗೆ ಅನ್ವಯಿಸಿ ಪರಿಣಾಮವನ್ನು ವಿಶ್ಲೇಷಿಸುತ್ತದೆ, ಗೀತೆಯ ಈ ವಿವೇಚನೆಯು ಪರಮ ರಹಸ್ಯವಾಗಿದೆ, ಗುಹ್ಯಾದ್ ಗುಹ್ಯತಮ ರಹಸ್ಯವಾಗಿದೆ (ಗೀ.9/1–3) ಅದು ದೈವತ್ವದ ಸಮಗ್ರ ಜ್ಞಾನ, ಸಮಗ್ರಂ ಮಾಮ್ (ಗೀ.7/1) ಅರ್ಜುನನಿಗೆ ಕೃಷ್ಣನು ಪ್ರಮಾಣ ಪೂರ್ವಕವಾಗಿ ಹೇಳುತ್ತಾನೆ. ಈ ಒಂದು ಜ್ಞಾನವನ್ನು ಚೆನ್ನಾಗಿ ತಿಳಿದುಕೊಂಡೆಯಾದರೆ ವಿಶ್ವದ ಸಂಪೂರ್ಣ ರಹಸ್ಯವನ್ನು ತಿಳಿದಂತಾಗುತ್ತದೆ; ಆಗ ತಿಳಿಯಬೇಕಾದುದೇನೂ ಉಳಿಯುವುದಿಲ್ಲ. ಅರ್ಜುನನ್ನು ಕಟ್ಟಿ ಹಾಕಿದ, ಅವನ ಮನಸ್ಸಿನಲ್ಲಿ ಭಯ, ಗೊಂದಲಗಳನ್ನು ಹುಟ್ಟಿಸಿ, ತನಗೆ ವಿಧಿಸಿದ ದೈವೀ ಕರ್ತವ್ಯದಿಂದ ವಿಮುಖನನ್ನಾಗಿ ಮಾಡುವ ಅಜ್ಞಾನವು ಕತ್ತರಿಸಿ ಹೋಗುವುದು. ಇದು ಎಲ್ಲ ರಹಸ್ಯ ವಿದ್ಯೆಗಳಲ್ಲಿ ಅತಿ ರಹಸ್ಯವಾದ ಶ್ರೇಷ್ಠ ವಿದ್ಯೆ. ಇದು ರಾಜ ವಿದ್ಯೆ, ರಾಜ ಗುಹ್ಯ, ಇದು ಶುದ್ಧ, ಜ್ಞಾನ ಪರಂಜ್ಯೋತಿ, ಇದನ್ನು

ಯಾರೇ ಆಗಲಿ ನೇರವಾದ ಆಧ್ಯಾತ್ಮಿಕ ಅನುಭವದಿಂದ ಖಚಿತ ಪಡಿಸಿಕೊಳ್ಳಬಹುದು. ಈ ಸತ್ಯವನ್ನು ಸ್ವತಃ ಮನಗಾಣಬಹುದು. ಇದು ನಿಜವಾಗಿ ಶ್ರೇಷ್ಠವಾದ ಜ್ಞಾನ. ಇದು ಸತ್ತೆಯ, ಅಸ್ತಿತ್ವದ ನಿಯಮ – ಇದನ್ನು ಶ್ರದ್ಧೆಯಿಂದ ಜೀವನದಲ್ಲಿ ಅನುಷ್ಠಾನದಲ್ಲಿ ತರಲು ಸಾಧ್ಯವಿದೆ. ಶ್ರದ್ಧೆ ಇದ್ದರೆ ಇದು ಸುಲಭವಾಗಿ ದಕ್ಕುತ್ತದೆ (ಗೀ.9/2).

ಆದರೆ ಶ್ರದ್ಧೆ ಬೇಕೇ ಬೇಕು. ಅದು ಅತ್ಯಂತ ಅವಶ್ಯ. ಶ್ರದ್ಧೆ ಇಲ್ಲದೇ ಹೋದರೆ ತನ್ನ ಚಿಕಿತ್ಸಕ ಬುದ್ಧಿಯನ್ನೇ ಬಲವಾಗಿ ನಂಬಿಕೊಂಡು, ಕೇವಲ ಬಾಹ್ಯ ಸಂಗತಿಗಳನ್ನಷ್ಟೇ ಪರಿಶೀಲಿಸುತ್ತ ಅಥವಾ ಸಾಕ್ಷಾತ್ಕಾರದ ಜ್ಞಾನವನ್ನು ಉದ್ದೇಶ ಪೂರ್ವಕವಾಗಿ, ಮತ್ಸರದಿಂದ ಪ್ರಶ್ನಿಸುತ್ತ ಹೋದರೆ ನಿಜವಾದ ಜ್ಞಾನ ದಕ್ಕುವುದಿಲ್ಲ. ಪ್ರಾಪ್ತಿಯಾಗುವುದಿಲ್ಲ. ಏಕೆಂದರೆ ನಿಜವಾದ ಜ್ಞಾನವು ವಿಭಜನೆಯನ್ನು ಒಪ್ಪುವುದಿಲ್ಲ, ಅಪರಿಪೂರ್ಣತೆಯನ್ನು ಒಪ್ಪಿಕೊಳ್ಳುವುದಿಲ್ಲ. ಕೇವಲ ಬಾಹ್ಯ ಸಂಗತಿಗಳನ್ನು ಮಾತ್ರ ಸತ್ಯವೆಂದು ಸ್ವೀಕರಿಸುವುದಿಲ್ಲ; ಅದು ನಮ್ಮ ಪ್ರಾಥಮಿಕ ಜ್ಞಾನದ ಪರಿಧಿಯನ್ನೇ ದಾಟಿ ಹೋಗುವುದು, ನಮ್ಮ ಸದ್ಯದ ಪರಿಸ್ಥಿತಿಯನ್ನು ಮೀರಿ ಹೋಗುವುದು. ನಮ್ಮ ಪ್ರಸ್ತುತ ಜೀವನದ ನೋವು, ಯಾತನೆ, ಕೆಡಕು, ದೋಷ, ಅಸುರಿ ಪ್ರಮಾದಗಳು, ಎಡವುವುದು ಮುಂತಾದ ಎಲ್ಲ ಅಶುಭಗಳನ್ನು ನಮ್ಮ ಮನ ಬುದ್ಧಿಗಳು ಮಾತ್ರ ಗ್ರಹಿಸುವುವು ಇದನ್ನು ಮಾತ್ರ ಹಿಡಿದು ಕುಳಿತುಕೊಂಡರೆ ಆ ಶುದ್ಧ ಶ್ರೇಷ್ಠ ತತ್ತ್ವವನ್ನು ಜೀವನದಲ್ಲಿ ಅನುಷ್ಠಾನಕ್ಕೆ ತರಲಾರೆವು. ಉನ್ನತವಾದ ಸತ್ಯ ಮತ್ತು ನಿಯಮಗಳನ್ನು ಪೂರ್ತಿಯಾಗಿ ನಂಬದೇ ಹೋದರೆ, ಸಾಮಾನ್ಯ, ಮರಣಬದ್ಧ ಜೀವನಕ್ಕೆ, ಅದರ ತಪ್ಪು, ಅಪರಾಧಗಳಿಗೆ ಬಲಿಯಾಗಬೇಕಾಗುವುದು. ಪರಮ ದೈವತವನ್ನೇ ನಿರಾಕರಿಸುವ ಅದು ದಿವ್ಯತೆಗೆ ಎಂದಿಗೂ ಏರಲಾರದು. ಈ ಪರಮ ಸತ್ಯವನ್ನು ಜೀವನದಲ್ಲಿ ಅನುಷ್ಠಿಸಬೇಕಾಗಿದೆ. ಆತ್ಮದ ನಿರಂತರ ವರ್ಧಿಸುವ ಬೆಳಕಿನಲ್ಲಿ ಬೆಳೆಯಬೇಕಾಗಿದೆ. ಮನದ ಅಜ್ಞಾನದ ಕತ್ತಲಲ್ಲಿ ತಡಕಾಡುತ್ತ ಕುಳಿತಿರುವುದು ಬೇಡ – ಮನುಷ್ಯನು ಅದಾಗಿ ಬೆಳೆಯಬೇಕು, ಪೂರ್ಣತಃ ಅದೇ ಆಗಬೇಕು – ಇದನ್ನು ಪರೀಕ್ಷಿಸುವ ದಾರಿ ಅಂದರೆ ಅದೇ ಆಗಿ ಪರಿವರ್ತನೆ ಹೊಂದುವುದು. ನಿಮ್ಮ ಸ್ತರದ ಆತ್ಮವನ್ನು ಮೀರಿ ಬೆಳೆದಲ್ಲದೇ ಉನ್ನತ ಆಧ್ಯಾತ್ಮಿಕ ಪಾರಮಾರ್ಥಿಕ 'ಸತ್ತೆ'ಯನ್ನು ನಡೆಯಲು ಸಾಧ್ಯವಿಲ್ಲ. ಮೇಲೆ ತೋರುವ ಎಲ್ಲ

ವಿರೋಧಿ ಸತ್ಯಗಳೆಲ್ಲವೂ ನಿಮ್ಮ ಪ್ರಕೃತಿಯವುಗಳೇ. ಈ ನಿಮ್ಮ ಪ್ರಕೃತಿಯ ದೋಷಗಳಿಂದ, ಪಾಪಗಳಿಂದ "ಅಶುಭ"ಗಳಿಂದ ಮುಕ್ತಿಯು ಕೇವಲ ಉನ್ನತ ಜ್ಞಾನವನ್ನು ನಂಬಿಕೊಂಡಾಗ ಮಾತ್ರ ಸಿಕ್ಕುವುದು. ಆಗ ಈ ಎಲ್ಲ ತೋರಿಕೆಯ ಅಶುಭಗಳು ಸತ್ಯವಲ್ಲವೆಂಬುದು ನಿಚ್ಚಳವಾಗುವುದು. ಇವೆಲ್ಲ ಕತ್ತಲೆಯ ಸಂತಾನವೆಂಬುದು ಅರಿವಾಗುವುದು. ಆದರೆ ಈ ರೀತಿ ದೈವೀ ಪ್ರಕೃತಿಯ ಸ್ವಾತಂತ್ರ್ಯದಲ್ಲಿ ಬೆಳೆಯಬೇಕಾದರೆ ನಮ್ಮೊಳಗೆ ರಹಸ್ಯವಾಗಿ ವಾಸವಾಗಿರುವ ಈಶ್ವರನನ್ನು ನಂಬಲೇಬೇಕು. ಆಗ ಯೋಗ ಸಾಧನೆಯು ಸುಲಭವಾಗುವುದು, ನಾವು ಆಗ ನಾವು ಮಾಡುವದೆಲ್ಲವನ್ನೂ ಈಶ್ವರನಿಗೆ ಅರ್ಪಿಸುತ್ತೇವೆ, ಆಗ ಸಹಜವಾಗಿ ಆ ದಿವ್ಯ ಪುರುಷನ, ಈಶ್ವರನ ಸಮರ್ಥ ಕೈಗಳಲ್ಲಿರುತ್ತೇವೆ. ನಮ್ಮೊಳಗೆ ಇರುವ ಆ ಈಶ್ವರನು ನಮ್ಮ ದಿವ್ಯ ಜನ್ಮದ ಯೋಜನೆಯನ್ನು ತನ್ನ ಕೈಗೆತ್ತಿಕೊಳ್ಳುತ್ತಾನೆ. ಅದನ್ನು ನಿಧಾನವಾಗಿ ಹಂತ ಹಂತವಾಗಿ ಪ್ರಗತಿಪರವಾಗಿ ರೂಪಿಸುತ್ತಾನೆ. ನಮ್ಮೊಳಗೆ ತನ್ನ ಜ್ಞಾನವನ್ನು, ಶಕ್ತಿಯನ್ನು "ಜ್ಞಾನ ದೀಪೇನ ಭಾಸ್ವತಾ" ತುಂಬಿಸುತ್ತಾನೆ. ನಮ್ಮ ಅಜ್ಞಾನದ ಪ್ರಕೃತಿಯನ್ನು ಸ್ಪರ್ಶಿಸಿ ಅದನ್ನು ತನ್ನ ಪ್ರಕಾಶವನ್ನಾಗಿ, ವೈಶಾಲ್ಯವನ್ನಾಗಿ ಪರಿವರ್ತಿಸುತ್ತಾನೆ. ಸಂಪೂರ್ಣ ಶ್ರದ್ಧೆಯಿಂದ, ಅಹಂದಿಂದ ಮುಕ್ತರಾಗಿ ಅದನ್ನು ನಂಬಿ, ಈಶ್ವರ ಪ್ರೇರಣೆಯಂತೆ, ನಾವು ಏನಾಗಲಿ ಎಂದು ಬಯಸುತ್ತೇವೆಯೋ ಸಂಕಲ್ಪಿಸುತ್ತೇವೆಯೋ ಖಂಡಿತವಾಗಿಯೂ ಅದೇ ಆಗುತ್ತೇವೆ. ಇದಕ್ಕಾಗಿ ನಮ್ಮ ಸದ್ಯದ ಅಹಂಕಾರಯುಕ್ತ ಮನಃ ಪ್ರಾಣಗಳನ್ನು ಈಶ್ವರನಿಗೆ ಅರ್ಪಿಸಬೇಕು, ನಮ್ಮಲ್ಲಿ ರಹಸ್ಯವಾಗಿರುವ ಈಶ್ವರನ ಹಸ್ತಗಳಲ್ಲಿ 'ಪರಿವರ್ತನೆಗಾಗಿ' ಸಮರ್ಪಿಸಬೇಕು.

(ಸಶೇಷ)

## ಶ್ರೀ ಅರವಿಂದರ
## ‘ಊರ್ವಶಿ’

**– ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ), ಕಲಬುರ್ಗಿ**

**7**

### ಅಧ್ಯಾಯ 2

ಭವದ ಭೂತವದು ಬೆಂಬಿಡದ ಬೇತಾಳವಾಗಿ ಬಾಳಬಟ್ಟೆಯ ಬದಿಗೆ
ಬಂದುಹೋಗುವ
ಬೈಗು–ಬೆಳಗಿನಂತಿಹ ಪ್ರೇಮ–ಮೃತ್ಯುಗಳ ಮಡುವಿನೊಳಗೆ ಮಾನವನನು
ಮುಳುಗೇಳಿಸುವುದು.
ಸುಖ–ದುಃಖಗಳ ಸುಳಿಯೊಳಗೆ ಸುರಾಸುರರನೇ ಸೆರೆಪಾರಾಗಿಸುವುದು.
ಬಾಲಭಾಸ್ಕರನ
ಬೆಳಕುಮಳೆಯೊಳಗೆ ಬಾಳಬೀಜವ ಬಿತ್ತಿ ಭವದ ಬೇಸಾಯದೊಳು ಭವ್ಯ
ಭವಿಷ್ಯವನೇ ಬೆಳಗಿಸುವುದು.
ಪರಂಧಾಮಸುತೆಯೆಡೆಗಿನ ಪ್ರೇಮವದು ಪುರೂರವನ ಪ್ರಾಣವನೇ ಪಿಶಾಚದೊಲು
ಪೀಡಿಸಿರಲು,
ಹೃದಯಾಕ್ಷಿಗಳ ಹರ್ಮ್ಯದಲಿ ಹಿಮಾರಣ್ಯದೆಡೆಗಿನ ಹಾತೊರೆಯುವಿಕೆಯದು
ಹೊಂಬೆಳಕಾಗಿ ಹಾರೈಸಿರಲು,
ಪ್ರತಿಷ್ಠಾನಕೆ ಪೂರ್ವದಲಿಹ ಪರ್ವತಕನ್ಯೆಯರ ಕೆಂಪುಗಲ್ಲದಾ ಕಣಿವೆ–
ಕಂದರಗಳವು
ಅರುಣಾರುಣ ರೇಷ್ಮೆಯುಡುಪಿನ ಅಪ್ಸರಿಯರೊಲು ಬಿರುಗಾಳಿ–ಬೀಸುಗಾಳಿಗಳಿಂದ
ಮನುಕುಲದಾದಿಪುರುಷನ ಮುಚ್ಚಿದ ಮನಃಪಟಲದ ಮುಚ್ಚಳವನು ಮೇಲೆತ್ತಿರಲು,
ಪ್ರಭಾತವೊಂದರಲಿ ಪುರೂರವನ ಪುರತ್ಯಾಗದ ಪ್ರಮೇಯವದು
ಪೂರ್ಣಗೊಂಡಿತ್ತು!
ಅದೊಂದು ಬೆಳಗಿನಲಿ ಇಲಾಪಟ್ಟಣವನು ತೊರೆದು ತನ್ಮಯತೆಯ
ತಾಣವೊಂದನರಸಿ ತೆರಳಿದನು.

ಇಲಾವರ್ಧನವನು ಇಬ್ಬಗೆಯಿಂದ ಸುತ್ತಿ ಮೂಡಣದೆಡೆ ಮುನ್ನೂಕಿ
ಪೂರ್ವಸಾಗರದೆಡೆ ಪಯಣಿಸುವ
ಗಂಗೆಯು, ಯಮನೆಯೊಡನೆ ಯಾನಹೊರಟು, ಸೋನೆಯೆಡೆಗೆ ಸರಿದು,
ಗಂಡಕಿಯೊಳು ಗಮಿಸಿ,
ಕೋಶಿಯೊಡನೆ ಕಲೆತು, ಬ್ರಹ್ಮಪುತ್ರನೊಳು ಬೆರೆತು, ಪದ್ಮಳೊಡನೆ ಪಯಣಿಸಿ,
ಪೂರ್ವಾಬ್ಧಿಗಿಳಿವಳು.
ಹುಟ್ಟಿದಾರಭ್ಯ ಹರಿದು ಹಾದಿಹೊಳು ಹತ್ತಾರು ಹೊನ್ನರಾಜ್ಯಗಳನು ಹೆತ್ತು
ಹೂವಾಗಿಸುವಳು.
ನೀರದಾರಿಯೊಳು ನೂರುಶಾಖೆಗಳಾಗಿ ನರೆತು, ನಾರುತಿಹ ನಾಡ
ನಿರ್ಮಾಲ್ಯಗಳನೆಲ್ಲ ನಿರ್ಮೂಲಿಸುವಳು.
ಬಾಯಾರಿ ಬಂದವರಿಗೆ ಬಂಗಾರನೀರ ಭರಿಸುವ ಭಾಗೀರಥಿಯು
ಬಂಗಾಳಕೊಲ್ಲಿಯೊಳು ಭವನೀಗಿಸುವಳು.
ಆದರೆ, ಇಲಾನಗರದ ಆಸುಪಾಸಿನಲಿನ್ನೂ ಅಂಬೆಗಾಲಿಕ್ಕುವ ಅಂಬುದಳಂತಿರುವಾ
ಅಂಬೆ ಗಂಗಾಂಬೆಯೆಡೆ
ಪದವಿರಿಸಿದ ಪುತ್ರ ಪುರೂರವನು ಪ್ರಜ್ವಲಿಸುತಿಹ ಪ್ರೇಮಾಗ್ನಿಯ ಪ್ರಖರತೆಯನ್ನು
ಪೂರ್ಣಚಂದಿರನ
ಶೀತಲಕಾಂತಿಯೊಳು ಕಳೆದು ತಂಪೆರೆಯಲೆಂದು ತೀರ್ಥಯಾತ್ರೆಯಲಿ ತೆಂಕಣವನು
ತೊರೆದು ತೆರಳಿದನು.
ಉತ್ತರುತ್ತರಕೆ ಎತ್ತರೆತ್ತರಕೆ ಬೆಳೆದು ಭವಾದ್ರಿಯ ಬೆನ್ನಮೇಲೆ ಬರೆದ ಬಿಳಿಬಣ್ಣದ
ಭೂತಬೆಟ್ಟಗಳೆಡೆ ಭವಿಸಿದನು.
ಘಟ್ಟಮಾರ್ಗವನೇರಿ–ಬೆಟ್ಟದಾರಿಯನಿಳಿದು, ಕೊಳ್ಳಕೊನ್ನಾರದಲಿ ಜರಿವ
ಜಿನುಮಿನುಗಿನ ಜೀರಂಗಿ ಜಲಪಾತಗಳು
ನೂರುನದಿಗಳಿಗೆ ನೀರೆರೆವ ನೇಮದಲಿ ನೂಕುತಿರಲು, ಆ ನೀರದಾರಿಯೊಳು
ನೀರನಾರಿಯನರಸಿ ನಡೆದಿಹನು.
ಪರ್ಗೆಟರಿಯೆಂಬ ಪ್ರಾಯಶ್ಚಿತದ ಪರ್ವತವನೇರಿ ಪ್ಯಾರಾಡೈಸ್‌ಗೆಂದು
ಪಯಣಸುತಿಹ ಪ್ರಾಕ್ತನದ ಪದಕಬ್ಬಿನಂತೆ

ನೃಪನವ ನೂರುನಿಲಯಗಳಿಹ ನಗರದಿಂದ ನಡೆದು ನೂರುನಾಗಮುರಿಗಳಿಹ
ನಗದ ನೆತ್ತಿಯನೇರಿ ನಿಂದನು.
ಸಂವತ್ಸರವೊಂದರಲಿ ಷಟ್‌ಪೌರ್ಣಮಿಗಳನು ಮುಚ್ಚಿದ ಹಿಮರಾಶಿಯ
ಹೊದಿಕೆಯೊಳು ಮಲಗಿ, ಮತ್ತಾರು
ಮಹಾಮಾಸದ ಮುಂಬರುವಿನಲಿ ಮೈಮುರಿದು ಮೇಲೆದ್ದು
ಶುಕ್ಲಪಕ್ಷವನಾಚರಿಸುವ ಬದರಿಕೇಶ್ವರದ ಬೆಟ್ಟವನು
ದಾಟಿ ಹಿಮಾರಣ್ಯದ ಮಂಜುವೃಕ್ಷಾದಿ–ಮಂಜುಕಂಟಿಗಳ ಮಂಜರಿಯೊಳು
ಮಂಜುಲಗಾನಗಳಿಂದ ಮೈಮರೆತು
ಷಣ್ಮಾಸಗಳನು ಸಂಕಲ್ಪಧಾರಿಯಂತೆ ಸವೆಸಿಹನು. ವಜ್ರಶೈಲದಾ ವಕ್ಷಸ್ಥಲದಿ
ಒಂಟಿಜಂಗಮನಂತೆ ಜೀವಿಸಿಹನು.
ವಾನಪ್ರಸ್ಥದ ಆರನೇ ತಿಂಗಳಾರಂಭಕ್ಕೆ ಪ್ರೇಮಾತುರನಿಹ ಪುರೂರವನು
ಪರ್ವತಾಗ್ರದ ಪ್ರಯಾಸಪಟ್ಟವನೇರಿದನು.
ಸುತ್ತ ಸಹಸ್ರಾರು ಮೈಲಿಯೊರೆಗೆ ಮಾನವನೊಂದು ಮಾತಿರದೆ ಮೌನದಲೇ
ಮಣ್ಣಾದ ಮೂಕಮಲೆಯ
ಮೂಲೆಯೊಂದರೊಳಗೆ ಮುನ್ನೂಕಿದನು. ದೂರದಿಗಂತದಲಿ ದೇವದೂತರುಗಳು
ದೌಡಾಯಿಸಿ,
ಶ್ವೇತಶೈಲದಾ ಸಾಲಿನೊಳಗಿಂದ ಶಿಲಾಖಂಡಗಳನೆತ್ತಿ ಒಂದರಮೇಲೊಂದನಿತ್ತಿ
ಶಿಖರರೂಪವನಿತ್ತಿಹರೋ?
ಇಲ್ಲಿ, ಗಂಧರ್ವ ಗೋಪುರಗಳು ಗಾಳಿದೇರನೇರಿ ಗಮಿಸಿ ಗಗನದಂಚಿನಲಿಂತು
ಗೋಚರಿಸಿಹವೋ?
ಎಂಬಂತೆ ನೀಲನೀಲಿಮದಲಿ ನೂಕುತಿಹ ನೂರುಪರ್ವತಗಳು ತೇಲುತಿಹ
ತಪ್ಪಲುವೀಡುಗಳಾಗಿ ತೋರಿಹವು.
ಕಾಲದರಿವಿಲ್ಲದೆ ಕಳೆದುಹೋದ ಕೋಟಿಕೊಂಡಗಳು ಹಿಮರಾಶಿಯ ಹುತ್ತದಡಿ
ಹೂತು ಹಸನಾಗಿಹವು.
ತನ್ನ ತೆಕ್ಕೆಯೊಳು ತೂರಿದ ತಿಗಿಂಛಗಳನೆಲ್ಲ ಮಂಜುಬೆಟ್ಟಗಳಾಗಿ–
ಮಿಹಿಕಾಮಲೆಗಳಾಗಿ ಮುಕ್ಕುವ

ಹಿಮಾರಣ್ಯವು ಕಣಿಕೆ–ಕಂದರದ ಕೂಟಗಳ ಮೇಲೆ ಕುಳಿತು ಕಟ್ಟಾಜ್ಞೆಯ ವಿಧಿಸುವುದು,
ಶೈಲಾಗ್ರದಾ ಶಿಲಾಖಂಡಗಳ ಮೇಲೆ ಸುಳಿದು ಸಾರ್ವಭೌಮತೆಯನ್ನೇ
ಸಾಕ್ಷೀಕರಿಸುವುದು.
ಕಮರಿರಂಧ್ರದಲಿ–ಕುಹರಕೇಂದ್ರದಲಿ ಕುಳಿತು ಕ್ರಾಂತದರ್ಶನಕೆಂದು ಕಾಯುತಿಹ
ಕೇವಲಿಗಳಿಗೆ
ಸ್ವರ್ಗದ್ವಾರವದು ಸನಿಹವಾಗಿರಲೆಂದು ದಿವದ ದುರ್ಬೇಧ್ಯ ದಾರಿಯೊಳು
ದಾಪುಗಾಲಿಟ್ಟಿಹುದು.
ಭವದ ಬಾಂದಿನೆಡೆಗೇರಲೆಂದು ಬೂದುಬೆಟ್ಟಗಳಾಚೆ ಭವಿಸುವುದು, ವಲಯವನೆಲ್ಲ
ವ್ಯಾಪಿಸುವುದು.
ನೃಪನು ಕಣ್ಣಿಟ್ಟಿಹನು ದೂರ, ನಿಂತಡಿಗೆ ನೋಡಿದನು. ಸುತ್ತೇಳು ಕೋಟೆಯಂತೆ
ಕಟ್ಟಿ ಕೇಂದ್ರದಲಿಹ
ಕಟ್ಟಡವನು ಕಾಯ್ವಂತೆ ಕುಳಿತಿರುವ ನೀರ್ಗಲ್ಲ ನಿಲಯಗಳು ನೆಲದಿಂದ
ನೀಲಿಮದೆಡೆಗೇರಿ ನಿಂತಿಹವು.
ನಟ್ಟಿರುಳಿನಲಿ ನಡೆವ ನಿಶಾರಾಜ್ಞಿಗೂ ನಡುಕವನುಟ್ಟಿಸುವ ದೈತ್ಯಪ್ರಪಾತಗಳು
ದೂರದೂರದೊರೆಗೆ
ಹಿಮವೃಕ್ಷಾದಿ–ಹಿಮಬಳ್ಳಿಗಳಿರುವ ಹಿಮಾರಣ್ಯವ ಹಬ್ಬಿಸಿಹವು, ಕಣಿವೆ–ಕಂದರಗಳ
ಕಟ್ಟಿಸಿಹವು.
ಆ ನೀರ್ಗಲ್ಲ ನಿಲಯದಲಿ ನಿರಜೆಗಾಗೆಂದು ನೋಂತು ನಿಂತು ನೊಂದಿರುವ
ನೃಪನಿಗಲ್ಲಿ
ಕಾಣಿಸಿತೊಂದು ಕತ್ತಲಿನೊಳು ಕಾರ್ಮಣವನು ಕಾಪಿಡಲೆಂದೊಂದು
ಕಮರಿಯಾಶ್ರಯದ ಕೇಂದ್ರವೊಂದು.
ಹಿಮಬೆಟ್ಟದಡಿ ಹಾಯಗಿ ಹಸನಾಗಿ ಹಾಸಿರುವಾ ವಾಸನೋಚಿತ
ಗವಿಯಾಸರೆಯೊಳು ಗಮಿಸಿದನವ.
ಅಳಿದುಳಿದ ಆಯುವನೆಲ್ಲ ಕಳೆದ್ಹೋದ ಕಾಂತೆಗಾಗೆಂದೇ ಕಾಯುತ ಕಾಯವದನು
ಕಳೆಯಲೆಂದು
ಕಮರಿಯೊಳು ಕುಳಿತು ಕಾಲವನೇ ಕೆಣಕಿ ಕದನಕಿಳಿಸಲೆಂಬ ಕಾಂತಾರಪಥಕೆ
ಕಟ್ಟುಬಿದ್ದು ಕಾದಿಹನವ.

ಹತ್ತಾರು ಹರಿದಿನಗಳು ಹರಿದಂತದ ಹಾದಿಯೊಳು ಹುಟ್ಟಿ ಹತ್ಯೆಯಾದವು.
ಮತ್ತೆ ಪತ್ತೆಯಾದವು.
ಬಾನೊಳೆಸೆದ ಚೆಂಡಸೂರ್ಯನು ನಿಗಿನಿಗಿ ಕೆಂಡವಾಗಿ, ಹಿಮವನೆಲ್ಲ ಕರಗಿಸಿ
ಕೊಂಡವಾಗಿ,
ಪ್ರಾಚಿಯೊಳು ಪುಟ್ಟುವನು, ವೀಚಿಯೊಳು ಒಟ್ಟುವನು, ಪರ್ಯಾಯವಸನದಿ
ಪ್ರತೀಚಿಯೊಳು ಅಟ್ಟುವನು,
ಕಾಲದ ಕೈಗೆ ಕಂಕಣಗಟ್ಟಿರಲು, ಕಣಿವೆಯೊಳು ಕಣ್ತೆರೆದ ಕೋಟಿಕಿರಣಗಳು
ಕೊನೆಗೆ ಕಂದರದೊಳು ಕಣ್ಮುಚ್ಚಿದವು.
ಗವಿವಾಸರದಲಿ ರವಿಕಾಸರಗಳ ಮೂವತ್ತು ಮೂಡುಮುಳುಗಳಿಗೆ
ಮೂಕಸಾಕ್ಷಿಯಾಗಿ ಮಲೆಯ
ಬಲೆಯೊಳಗೆ ಮುದುಡಿ ಮಂಕಾಗಿ ಕುಳಿತ ಕಾರ್ಮಣನನು ದಿನರಾತ್ರಿಗಳು
ದಾಂಗುಡಿಯಿಟ್ಟು ದಿಕ್ಕುತಪ್ಪಿಸಿದವು,
ಬೆಳಗಿನಲಿ ಬೆಳ್ಳಿಚುಕ್ಕಿಯದು ಬಂದು ಬೆದರಿಸಿಹುದು, ಕತ್ತಲೆಯಲಿ ಕೊಳ್ಳಿತಾರೆಗಳು
ಕಣ್ಕೆಸಿದು ಕೆಣಕಿಹವು.
ಸಹಸ್ರಸೂರ್ಯಮಂಡಲದಿಂದ ಸುಳಿದು ಇಳೆಗಿಳಿದ ಸವಿತೃಪುಂಜಗಳು
ಭೂವ್ಯೋಂತರಿಕ್ಷಗಳನೆಲ್ಲ ಬೆಳಗಿಸಿತ್ತು.
ಸೋಮವಲ್ಲರಿಯಿಂದ ಸುರಿದು ಸಾನಿಧ್ಯವ ಶೀತಲಮಯಗೊಳಿಸಿದ
ಮಧುಚಂದ್ರಕಾಂತಿಗಳು, ಮಧುಮಕ್ಷಿಕೆಯ
ಮುಕ್ಕೋಟಿಭಟರೊಲಂತೆ ಮುನ್ನೂಕುವ ಲಕ್ಷನಕ್ಷತ್ರಗಳ ಕಕ್ಷೆಯನು ಕರೆದು
ಅಕ್ಷವನೇ ಸುಭಿಕ್ಷವಾಗಿಸಿತ್ತು.
ದಿನದಿನದ ದಾರಿಹೋಕರಂತೆ ದಿಟ್ಟಿಗೆದುರಾಗುತಿಹ ಉದಯಾಸ್ತಗಳ ಉವಧಿಯದು
ಉರ್ವಶಿಯ
ಪ್ರೇಮಕೆಂದು ಪರಿತಪಿಸಿ ಪರ್ವತಾರೋಹಿಯಾಗಿಲ್ಲಿ ಪೀಠಸ್ಥನಾದ ಪುರೂರವನನು
ಪೀಡಿಸಿತ್ತು.
ಬ್ರಾಹ್ಮಿಗರ್ಭದೊಳಗಿಂದ ಬಿತ್ತರವಡೆದು, ಸಹಧರ್ಮಿಣಿ ಸೂರ್ಯೆಯೊಡನೆ
ಸಹಚರರಾಗಿ ಒಡಮೂಡುವ

ದಸ್ರ–ನಾಸತ್ಯರ ದಿವ್ಯರಥವನೇರಿ, ಹಾದಿಯೊಳಗೆದುರಾದ ಹತ್ತುಲೋಕಗಳಿಗೆ
ಹೊನ್ನಗಿರಣವ ಹರಿಸಿ
ನಿಶಾರಾಜ್ಞಿಯು ತಾ ಹೆತ್ತ ಕತ್ತಲೆಯ ಪುತ್ರರೊಡನೆ ಪಗಡೆಯಾಡಲೆಂದು
ಕರಿಗಂಬಳಿಯ ಮೇಲೆಸೆದ
ಕೋಟಿ ಕವಡೆಗಳು ಬೆಳ್ಳಕ್ಕಿ ಚುಕ್ಕೆಗಳಾಗಿ ಚದುರಂಗದಾಟಕೆಂದು
ಚಾಲನೆಯಿತ್ತಿರುವಾಗ
ಆ ಕತ್ತಲೆಯನೇ ಬೆತ್ತಲೆಯಾಗಿಸಿ ಗುಡಿಚಾಪೆಸುತ್ತಿ ಗೋಮಂಡಲವನ್ನೇ
ಭೂಮಂಡಲಕಿಳಿಸುವ
ಉಷೋದೇವಿಯು, ಅರುಣಸಾರಥ್ಯವಿಹ ಸಪ್ತಾಶ್ವನಿಯುಕ್ತ ಏಕಚಕ್ರದ
ಸೂರ್ಯರಥಕೆ
ದಾರಿಬೆಳಕನಿತ್ತು ದಿಗಂತದಲಿ ದೂರವಾಗಿರಲು, ನೇಸರನವ ನೀಲದೊಳು
ನೇರವೇರಿ ನಿಂತಿರಲು,
ಅಪ್ಸರೆಯ ಅಪಸ್ಮಾರಕೊಳಗಾದ ಅಮೃತಾಂಶನವ ಹತ್ತುಪರ್ವತಗಳನೆಲ್ಲ
ಹತ್ತಿಳಿಯುವನು.
ಶೈಲಾಗ್ರವನೇರಿ–ಶಿಖರಾಳವನಿಳಿದು, ನಗದ ನಖಶಖಾಂತವನಳೆದು, ನದಿಯ
ನಿರಾಳದೆಡೆ ನಡೆದು,
ಪರ್ವತರಂಧ್ರದೊಳು ಪದವಿರಿಸಿ ಪೆಚ್ಚಾಗುವನು, ಹಿಮಾರಣ್ಯದ ಹಿತ್ತಲಿನೊಳಗಲೆದು
ಹುಚ್ಚಾಗುವನು.
ಕೊನೆಗೆ ಬಾನಂಗಳದ ಭಗನು ಬಾವಿಯಾಸರೆಗೆಂದು ಭವಿಸಿ ಬಾನಂಚಿನಲಿ
ಬೀಳ್ದಿರಲು,
ನೂರುನಕ್ಷತ್ರಗಳವು ನೆತ್ತಿಮೇಲೆ ನೀಳ್ದಿರಲು, ನೃಪನವ ನಡೆಯುವನು. ನಿಕುಂಜ
ನಿಲಯದೆಡೆ ನೂಕುವನು.
ಬೆಳಗಾಗುತ್ತಲೇ ಬೆಟ್ಟಗಳನೇರಿ ಭವಿಸುವನು. ಕತ್ತಲಾಗುತ್ತಲೆ ಕಮರಿಯೊಳು ಕೂತು
ಕಣ್ಣೀರಿಡುವನು.
ಅವನ ಅನ್ನಾಹಾರಗಳೆಂಬ ಆಸೆಯದು ಆರಿಹೋಗಿತ್ತು. ನಿದ್ದೆ–ನೀರಡಿಕೆಗಳೆಂಬ
ನಾಮವದು ನಂದಿಹೋಗಿತ್ತು.

ಪುರೂರವನ ಪ್ರತಿನಿತ್ಯದ ಪ್ರಗಾಥಗಳಿಂತು ಪುನರುಜ್ಜೀವನವಿಲ್ಲದೆ
ಪುನರಾವರ್ತನೆಯಾಗುತ್ತಿರಲು,
ಷಣ್ಮಾಸವದು ಸರಿದು ಸುಪ್ತವಾಗಿತ್ತು. ಸಪ್ತಾಗಮನವು ಸುಪ್ತಿಗೊಳಗಾದಂತೆ ಗಮಿಸಿ
ಗುಪ್ತವಾಗಿತ್ತು.
ಮಾಸಗಳು ಮರೆಯಾಗುತ್ತಾ ಬಂದು ಆರೆಂಬುದು ಆರಿಹೋಗಿ, ಏಳೆಂಬುದು
ಏಳುತ್ತೇಳುತ್ತ ಎದ್ದಿರಲು,
ನೃಪನ ನಿತ್ಯದ ನಡೆಗಳವು ನಿಂತುಹೋದವು. ಅಲ್ಲಿಂದವನು ಹಿಮಾವೃತವನು
ಹತ್ತಲಿಲ್ಲ, ಶಿಖರಾಗ್ರವನು ಸುತ್ತಲಿಲ್ಲ.
ಶೈಲದಾ ಸಮಾಧಿಮೌನದೊಳಗವನು ಸೇರಿಹೋದನು. ತನ್ಮಯತೆಯಾ
ತೋರುದಾರಿಯೊಳಗವನು ತೂರಿಹೋದನು.
ಕಾರ್ಮಣನಿಗಿನ್ನು ಕಾಯುವುದೊಂದೇ ಕಾಯಕವಾಗಿರಲು ಪುರೂರವನವ
ಪರ್ಯಂಕಾಸನದಿ ಪೀಠಸ್ಥನಾದನು.
ಹಗಲಿಲ್ಲ–ಇರುಳಿಲ್ಲ, ಬೆಳಗಿಲ್ಲ–ಮಳೆಯಿಲ್ಲ, ಮೇಲಿಲ್ಲ–ಕೆಳಗಿಲ್ಲ. ಕುಳಿತಲ್ಲೇ ಚಳಿತ
ಚಂದ್ರಾಮರಾಯನು
ಅಚಲನಾಗಿ ಆರುದಿನಗಳನು ಕಳೆದಿಹನು, ಏಳನೆಯ ದಿನದಾಂರಂಭಕ್ಕೆ
ಏಳುಮಲೆಗಳು ಎಚ್ಚೆತ್ತುಕೊಳ್ಳುವ
ಸಮಯಕ್ಕೆ ಸ್ವರ್ಗದ ಸೀಮೆಯಲ್ಲೊಂದು ಸುರುಳಿಯಾಕಾರದ ಸುಳಿಯೊಂದು
ಸುಳಿದು ಸಂಚಲನವ ಸೃಜಿಸಿತ್ತು.
ಮುಗಿಲಿನೊಳು ಮೂಡಿರುವ ಮಹಾದ್ವಾರದೊಳಗಿಂದ ಮಂದಾಕಿನಿಯರ
ಮಹಾಗಮನವಾಗಿತ್ತು.

ಸ್ವರ್ಲೋಕದಿಂದಿಳಿದ ಸುಂದರಿಯರು ಸಹಜವಿಹ ಸಮ್ಯಕ್ಜ್ಞಾನದಿಂದ
ಸುದ್ದಿಗ್ರಾಹ್ಯವನರಿತಿಹರು:
'ಪುರೂರವನು ಪುರಾತನ ಪಟ್ಟಣದಿಂ ಪಾರಾಗಿ ಪುರಾಣಪುರುಷರೊಲು
ಪರ್ವತಾಗ್ರವನೇರಿ ಪೀಠಸ್ಥನಿಹನು.
ಜನನಿಬಿಡವಿಹ ಜಾತ್ರೆಯಾದ ಜನಾಂತಿಕವನು ಜರಿದು ಜನಲೋಕದೆಡೆ ಜಿಗಿವ
ಜಲಪರ್ವತದಿ ಜಾಗೃತನಿಹನು.'

ನಿಲಿಂಪನಾಕದ ನಿಜವಾಸಿಗಳಿಗೆಂದು ನಿತ್ಯನಿಯುಕ್ತವಾದ ನಿಸ್ತಂಗರಂಗ
ನೀತಿಯಿಂದವರು ನೋಂತಿಹರು:
'ಬುಧ–ವಿಬುಧ–ವಿಭುದಾನರುಗಳು ವಿಭುವಿನ ವಜ್ರಾಂಕಿತದಲಿಹ ವಿಜ್ಞಾನಮಯವ
ವಶಪಡಿಸಿಕೊಳಲೆಂದು
ಶೈಲಾಗ್ರವ ಸುತ್ತಿ, ಶಿಖರಾಗ್ರವನೆತ್ತಿ, ಸ್ವರ್ಣಾಂಶುಗಳ ಬಿತ್ತಿ ಬಂಗಾರವನು ಬೆಳೆಸುವ
ಬದರಿಕೇಶ್ವರದ ಬಳಿಸಾರಿಹನು.'
ಕಣ್ರೆಪ್ಪೆಯಲುಗಿಸದ ಕಡಲುಕನ್ಯೆಯರು ಕಮಲಕೊಳದೊಳಗಿಂದ ಕಣ್ತೆರೆವ
ಕಾರಂಜಿಯೊಲು ಕ್ರಮಿಸಿಹರು.
ಕಾಲದ ಕಟ್ಟಾಜ್ಞೆಯಲಿ ಕನಲಿ ಕಪ್ಪಿಡಿವ ಕಾರ್ಮಣದೇಹಿಗಳು ಕೂಡಿ–ಕೆಲೆವ
ಕೇಂದ್ರದೆಡೆ ಕಾಲಿಟ್ಟಿಹರು.
ಸಪ್ತಾಶ್ವ ಸೂರ್ಯರಥದ ಸಂಕ್ರಮಣದಿ ಸಪ್ತೇಂದುಗಳು ಸುಪ್ತವಾಗಿ ಸಪ್ತಾಹ್ನಿಕವು
ಸಪ್ತಪದಿಯನಿಟ್ಟು
ಸುಳಿದಿರುವ ಸಂಧಿಸಮಯದಲಿ ಸ್ವರ್ಲೋಕದ ಸಂದಿಯೊಳಗಿಂದ ಸುಂದರಿಯರು
ಸಂಧಿಸಿಹರು.
ಪರಂಧಾಮದಿಂ ಪರಿತ್ಯಕ್ತರಾಗಿ, ಪ್ರಾಣಮನದಾ ಪೌಳಿಯಿಂ ಪುರೋಗಮಿಸಿ,
ಪರ್ವತದಂಚಿನಲಿಂತು ಪ್ರತ್ಯಕ್ಷರಿಹರು.
ಚಂದ್ರಾಶ್ಮ–ಚಂದ್ರಮಲ್ಲಿಗೆಗಳೇ ಚಂದ್ರಪಾದ–ಚಂದ್ರವದನಗಳಾಗಿ ಚಕೋರಿಯರ
ಚೈತನ್ಯವ ಚಿತ್ರಿಸಿದೊಲಿಹ
ಚಲುವ ಚಂಚಲೆಯರು ಇಂದ್ರನಂಕಿತದ ಈಡನೋದ್ಯಾನದಿಂದಿಳಿದ
ಇಡಾಕನ್ಯೆಯರಾಗಿ ಇಳೆಯೆಡೆಗೆ ಇಂಗಿಹರು.
ಪುಷ್ಪಾದಿ ಲತೆಗಳೊಂದು ಪರಿಚಯವಿಲ್ಲದೆ ಬದುಕಿನಾರಭ್ಯ ಬರಡಾಗೇ ಬೀಗುತಲಿಹ
ಬಂಜರು ಬಂಡೆಗಳ
ಬಳಿಸಾರಿಹರು. ಹಿಮಕಂಟಿ–ಮಂಜುಮಲ್ಲಿಗೆಗಳಿಗಾಗೇ ಮೀಸಲಿರುವ ಬಿಳಿಬಣ್ಣದ
ಬೆಂತರಬೆಟ್ಟಗಳ ಬದುವೇರಿಹರು.
ಶಿಲಾಖಂಡಾದಿ ಶೀತಲಬೆಟ್ಟಗಳ ಸೀಮೆಯಲಿ ಶೀಲಸುಶೀಲೆಯರು ಸುಳಿಯುತ್ತಲೇ
ವಲಯವದು ವಂದಿತವಾಗಿತ್ತು.

ಸ್ವರಾಂಗಿಯರ ಸ್ವರ್ಣಕೇಶಗಳವು ಶಿಖಾಬಂಧನವಿರದೆ ಸ್ವಚ್ಛಂದವಾಗಿ
ಸುಳಿಯುತ್ತಿಹವು. ಸ್ವತಂತ್ರವಾಗಿ ಸೆಳೆಯುತ್ತಿಹವು.
ದಿವ್ಯಾಂಗಿಯರು ಧರಿಸಿದ ದ್ಯಾಲೋಕದ ಧಿರಿಸು–ದ್ರಾಪಿಗಳವು ಸೂಕ್ಷ್ಮವಾಗಿ
ಸುತ್ತುವರಿದವರನ್ನು ಸರಿಯುತ್ತಿಹವು.
ಸೂರ್ಯಾಂಶುಗಳಿಗಾಗೆಂದು ಸಮೀಕ್ಷಿಸುತಿಹ ಸೂರ್ಯಹಾಸದ ಸೋಂಪುಗಳಂತೆ,
ಸೂರ್ಯಪಾನದ ತೋಪುಗಳಂತೆ
ಪರಂಧಾಮದಿಂದಿಳಿದ ಪರಿಪೂರ್ಣ ಪುತ್ಥಳಿಗಳು ಪುರೂರವನೊಡನೆ
ಪ್ರಿಯವಾಣಿಯನಾಡಲೆಂದು ಪ್ರತೀಕ್ಷಿಸಿಹರು.
ಸುಪ್ತಿಯೆಂಬುದು ಸುಪ್ತಪ್ರಜ್ಞೆಯೊಳು ಸುಪ್ತವಾಗಡಗಿ ಸಪ್ತಾಹವಾಗಿರಲು
ನಿದ್ರಾಂಗನೆಯಿಂದ ನಿಂದನೆಗೊಳಗಾದ ನೃಪನು,
ಪ್ರಹರಿ–ಪ್ರದೋಷಗಳನು ಪಡೆಯಲೆಂದು ಪಣತೊಟ್ಟು ಪಂಚಪ್ರಾಣವನೇ
ಪಣವಿಟ್ಟು ಪೀಠಸ್ಥನಿರುವ ಫಾಲನೇತ್ರನಂತೆ
ನಿಶಾಚರಳಾಗಿ ನಡೆದು ನೂರು ನರೇತಿಗಳಿಗೆ ನಾಯಕಳೆನಿಸಿ ನಲಿವ
ನರಪಿಶಾಚಿನಿಯಾದ ನಿಶೀಥಿನಿಯಂತೆ
ಕಣ್ತೆರೆದು ಕಾಯುತ ಕುಳಿತಿರುವ ಕಾಂತನ ಹಗಲುಗನಸಿನಲಿ ಹೊತ್ತು–
ಹೊನ್ನಾರಗಳನೇ ಹತ್ಯೆಯಾಗಿದ್ದವು.
'ಚಂದ್ರಮಂಡಲದಿಂದಿಳಿದ ಚಂದ್ರಾನನೆಯರು ಛತ್ರ–ಚಾಮರವನಿಡಿದು
ಚಂದ್ರಾಮರಾಯನಿಗೆಂದು ಚಲಿಸುತಿರುವಂತೆ
ಕನಸು ಕಂಡೆನೋ?' ಎಂಬ ಭ್ರಾಂತಿಯಲಿ ಕಣ್ಮುಂದೆ ಕುಳಿತ ಕಾಂತೆಯರನು
ಕನಸು ಕನ್ಯೆಯರೇ ಎಂದು ಕಡೆಗಣಿಸಿಹನು.
ಕಾರ್ಮಣನ ಕಾಣ್ಕೆಯಲಿ ಕಂಡರಿಸಿದ ಕೋಟಿಕನಸುಗಳ ಕರುಣಾಂತ್ಯವಾಗುವ
ಕಾಲವದು ಕೂಡಿಬಂದಿತ್ತು.
ಆನಂದವದು ಆಸೆ–ಆಕಾಂಕ್ಷೆಗಳಿಗೆಲ್ಲ ಆಳ–ನಿರಾಳವನಿತ್ತು
ಆಹ್ಲಾಲಮಯಗೊಳಿಸಲೆಂದಲ್ಲಿ ಆವಿರ್ಭವಿಸಿತ್ತು.
ಅದೋ! ಅಮರಲೋಕದಾ ಅಶರೀರ ಅಮೃತಾಂಗಿಯರ ಅವನಿದೇಹದ
ಅವಳಿರೂಪವದು ಅವಿರ್ಭಾವಿಸಿತ್ತು.

'ತೀರ್ಥ'ರೂಪಳಿಹ ತಿಲೋತ್ತಮೆಯು ತಮದೊಳಗೆ ತೆವಳುತ ತಂಗಳನಾದ
ತಿಂಗಳನೆದುರು ತೋರಿಬಂದಿಹಳು.
ಶಿಲಾಖಂಡದಲಿ ಶಿಲ್ಪಿಕಂಡರಿಸಿದ ಶಿಲ್ಪಸ್ವಾರಸ್ಯದ ಶಿವಮೂರುತಿಯಂತೆ, ಶಬರ–
ಶಂಕರನ ಶಾಂತರೂಪದಂತೆ
ಕದಲದೆ–ಕುಲುಕದೆ ಕಲ್ಲಾಗಿ ಕುಳಿತು ಕಣ್ರೆಪ್ಪೆಯನಲುಗಿಸದಾ ಕಾಂತನಿಗಾಗೆಂದು
ಕಾಂತಿಯನೇ ಕೈಹಿಡಿದು ಕರೆತಂದಿಹಳು.
ಮಧುಚಂದ್ರಕಾಂತಿಯನು ಕರೆವಾ ಸೋಮಶೇಖರನು ಗೊತ್ತಿರದೆ
ಗೋಮಂಡಲಕೆದುರಾಗಿ ಗಮಿಸಿ ಗ್ರಹಣವಿಡಿಸಿ,
ಮತ್ತರೆಮುಹೂರ್ತದಲಿ ಮುಂದೋಡಿರಲು, ಮರೆಮಾಚಿದಾ ಮಿಹಿರ
ಮಂಡಲಾತ್ಮನು ಮತ್ತೆ ಮೈದೋರಿ ಮಿನುಗುವೊಂತೆ,
ತಿಲೋತ್ತಮೆಯ ಹಿಂದೆ ಅವಿತು ಉನ್ಮಾದಳಿಹ ಉರ್ವಶಿಯು ನಾಚಿ–ನೀರಾಗಿ
ನಡೆತಂದಿಹಳು. ನೃಪನೆದುರಾಗಿ ನಿಂದಿಹಳು.
ಕಾರ್ಮಣ ಕನ್ಯೆಯರಂತೆ ಕನಲಿ ಕಪ್ಪಿಡಿದು ಕವಿಸಿವಿಸಿಗೊಳ್ಳಲಿಲ್ಲ. ಭೌತಿಕದ
ಭಾಮಿನಿಯರಂತೆ ಬೆದರಿ ಬಾಯಾರಿ ಬಿಳಿಚಿಕೊಳಲಿಲ್ಲ
ತುಂಬುಗಲ್ಲಗಳವು ನೃಪನೆದುರಲಿ ನಾಚಿ ಕೆಂಪೇರಿತ್ತು, ಅಕ್ಷಿಗಳವು ಅಕ್ಷರಪುರುಷನ
ಅವಲೋಕಿಸದೆ ಅವಿತುಕೊಂಡಿತ್ತು.
ಮೆಲ್ಲಮೆಲ್ಲನೆ ಮೇಲೇರಿ ಮೊಗದೋರಿ ಮೃಣ್ಮಯವನೆಲ್ಲ ಮಹಾಪ್ರಕಾಶದಿ
ಮುಳುಗಿಸುವಾ ಮಾರ್ತಾಂಡನಂತೆ,
ಪ್ರೇಮಭಯದಿ ಪೆಚ್ಚಾದ ಪ್ರೇಮಾಂಗಿಯು ಅನುಮಾನಿಸುತವನನು ಅವಲೋಕಿಪಳು,
ವಿಸ್ಮಿತಳಾಗುತ ವಿಚಲಿತಳಾಪಳು.
ಬೆದರಿ ಬಾಯ್ತೆರೆಯಲಾರಳು. ಪ್ರಿಯಕರನೆದುರು ಪದವಿಟ್ಟು ಪ್ರಿಯವಾಣಿಯನಾಡಲು
ಪರದಾಡುವಳು.
ಮೀನಾಮೇಷವನೆಣಿಸುತ ಮಾನವನ ಮುಂದೋಡಿ ಮಿನುಗಲು ಮುಹೂರ್ತವನೇ
ಮುನ್ನೂಕುವಳು.
ಇಂತು ಆಸೆ–ಆನಂದಗಳ ಶಾಂತವಾರಿಧಿಯಲಿ ತಳ್ಳಂಕವಿಡುತ ಉಬ್ಬೇರುವಳು–
ಉಕ್ಕಿಳಿಯುವಳು.

ಪ್ರೇಮದಾ ಪ್ರಕ್ಷುಬ್ಧ ಪಾರಾವಾರವನು ಪರಿಹರಿಸಲೆಂಬಂತೆ ಹಿನ್ನೆಲೆಯಲಿಹ
ಹೊನ್ನಬಂಗಾರವನು ಮುನ್ನೆಲೆಗೆ
ತಂದು ತೋರಿದಾ ತಿಲೋತ್ತಮೆಯು ತೀಕ್ಷ್ಣತಮವಿಹ ತನ್ನ ತೋಳೆತ್ತಿಹಳು.
ನೃಪನಿಗಾಗೆಂದಲ್ಲಿ ನುಡಿದಿಹಳು:
“ಪುರೂರವ ನಾಮಾಂತು ವಿಜಯ ವಿಕ್ರಮನೇ, ನಿನ್ನ ವಿಜಯಕೆ ಒಲಿದಾ
ವಿಕ್ರಯವನು ಒಪ್ಪಿಸಲೆಂದಿಲ್ಲಿ
ಒಂಟಿಗಾಲಿತ್ತಿರುವೆನು. ನಿನಗಾಗಿ ಬರಿ ಸ್ವಪ್ನಸೌಧವನ್ನಲ್ಲ, ಸ್ವಪ್ನರಾಜ್ಯದಾ
ಸುಂದರಿಯನೇ ಸೆಳೆತಂದಿರುವೆನು!
ನಿನ್ನ ಉರಿತಾಪಕೆಲ್ಲ ಉಶ್ಯಾಪನೀವ ಊರ್ಧ್ವಲೋಕದಾ ಉರ್ವಶಿಯನೇ
ಉಡುಗೊರೆಯನಾಗಿಲ್ಲಿ ಉಂಬಳಿಸಿರುವೆನು!”
‘ಉರ್ವಶಿ’ ಅದೊಂದು ನಾಮವು ಅವನ ಧೀಮಂಡಲದೊಳಗೆ
ದೇವದುಂದುಭಿಯೊಲು ಧುಮುಗುಟ್ಟಿತ್ತು.
ಬಗೆಯ ಬಾನೊಳು ಮಿಂಚಿ ಮೊಳಗಿತ್ತು. ಮರ್ತ್ಯನ ಮಸ್ತಿಷ್ಕದೊಳು
ಮಹಾಮಂತ್ರವನೇ ಮೊಳಗಿಸಿತ್ತು.
ಪೂರುಷನಿಂದ ಪುಟ್ಟಿ ಪ್ರಾಕೃತದಿ ಪರಿಚಿತವಿಹ ಪದಪುಂಜಗಳವು ಪರಂಧಾಮದಿಂ
ಪಾತಾಳದೊರೆಗೂ ಪವಡಿಸಿಹವು.
ಅನೃತದ ಅಲೆಯೊಳಗೆ ಅಂಕಗಳವು ಅಂಕುಡೊಂಕಾಗುತ ಅಲೆದು ಅಪಭ್ರಂಶವನೇ
ಅನುರಣಿಸುವವು
ಸೂನೃತದ ಸೀಮೆಯೊಳಗೆ ಸುಳಿದು ಸುಸ್ಪಷ್ಟವಿಹ ಸೂಕ್ತಗಳಾಗಿ–ಸ್ತೋತ್ರಗಳಾಗಿ
ಸ್ತುತಿಗೊಳಗಾಗುವವು.
ಕವಿಯ ಕಲ್ಪನೆಯಲಿ ಕೋಟಿಪದಗಳವು ಕಸೂತಿಯಾಗುತ ಕಲೆತು
ಕಾವ್ಯಧಾರೆಯನೇ ಕರೆಸುವವು.
ಅದರೊಲಂತೆ ಅಪ್ಸರಿಯುಲಿದ ಅಮರವಾಣಿಗಳವು ಗವಾಯಿ
ಗಂಧರ್ವಗಾನದೊಲು ಗಮಿಸಿರಲು
ಮಗುವೊಂದು ಮಾತೆಯ ಮಾತಿಗೆ ಮೈಮರೆತು ಮಲಗುವಂತೆ, ಕುಳಿತಲ್ಲೇ
ಕೇಳಿದನವ ಕಾರ್ಮಣ.

ನೃಪನೆದುರಲಿ ನಿಯತಿ–ನೇಮವನು ನುತಿಸಲೆಂಬಂತೆ ನುಡಿದಿಹಳವಳು ನಿರ್ಮಲೆ,
ತೀರ್ಥಳಿಹ ತಿಲೋತ್ತಮೆ:
"ಇಲಾಸುಕುಮಾರನೇ! ಸೃಷ್ಟಿಯಾದಿಯಾ ಸಲಿಲದಾಳದಲಿ ಸುಳಿದು ಸುಪ್ತವಾಗಿದ್ದ
ಗುಪ್ತಗಾಮಿನಿಯರು ನಾವು.
ಸಾಗರಾಧಿಪತಿಯ ಸಾರಸರ್ವಸ್ವವೇ ಸುಕುಮಾರಿಯರ ಸ್ವರೂಪದಿ ಸಿದ್ಧವಿರಲು
ಸೃಜಿತರಿಹ ಸುಂದರಿಯರು ನಾವು.
ಸಮುದ್ರಮಂಥನವೆಂಬಾ ಸುರಾಸುರ ಸಮರದಲಿ ಸ್ವರ್ಣಸಾಗರದ ಸುಳಿಯೊಳಗಿಂ
ಸೆಳೆತಂದ ಸುರಾಂಗನೆಯರು ನಾವು.
ಸಾಗರೋತ್ಪನ್ನಳಿಹ ಶ್ರೀಲಕ್ಷ್ಮಿಯಂತೆ ಅಪಸ್ಸಿನಾಂತರ್ಯದಿಂದ ಅವಿರ್ಭೂತರಿಹ
ಅಮರಲೋಕದಾ ಅಪ್ಸರಿಯರು ನಾವು.
ವರುಣ–ವಾರುಣಿಯರ ವಕ್ಷಸ್ಥಲದಿಂ ಒಡಮೂಡಿ ಒನಪು–ವೈಯಾರದ
ವಾರಸುದಾರಿಕೆಯರಾದ ವಾರಾಂಗನೆಯರು ನಾವು.
ಅಸ್ತಿತ್ವದಲಿ ಅರ್ಣವದಂತಿರುವ ನಮಗೆ ಸಾಗರದಿಂದಿಡಿದು
ಸ್ವರ್ಲೋಕಪರ್ಯಂತದೊರೆಗಿನ ಸಂಚಾರದಲಿ ಸಂಚಕಾರವೆಂಬುದಿಲ್ಲ.
ಏಕಮೇವಾದ್ವಿತೀಯವೆಂಬ ಪಾಠವನೇ ಪಠಿಸದಿರುವ ನಾವು ಏಕಮೇವ
ಪ್ರಭುವಿಗೆ ಶರಣಾಗಿ ಸತಿಯೆನಿಸುವದಿಲ್ಲ.
ಪರಂಧಾಮವನು ಪರಿತ್ಯಜಿಸಿ ಪತಿ–ಪುತ್ರರೆಂಬ ಪಂಚಾಯತನದೊಳಗೆ
ಪಂಚಪ್ರಾಣವನೇ ಪಣವಿಟ್ಟು ಪವಡಿಸುವದಿಲ್ಲ.
ಮಾನವನೊಂದು ಮೊಗದೊಳಗೆ ಮೂಲೋಕಗಳ ಮಾಯೆ–ಮಂಡಲಗಳನೆಲ್ಲ
ಮಿತಿಗೊಳಿಸಿ ಮಣ್ಣಾಗುವದಿಲ್ಲ.
ಪೂರ್ವಗ್ರಹ ಪೀಡಿತರಿಹ ಪುರಜನರಂತೆ ಪರಮಾಣುವಿನಲೇ ಪರತತ್ವವನು
ಪ್ರತಿಮಾಂಕಿತಗೊಳಿಸುವದಿಲ್ಲ.
ಏಕಾತ್ಮನ ಏಕರೂಪದಲಿ ವಿಶ್ವಾತ್ಮನ ವಿರಾಟರೂಪವನು ವಿಕ್ಷಿಪ್ತಗೊಳಿಸಿ,
ವಿಗ್ರಹವದನು ವಂದಿಸುವದಿಲ್ಲ.
ಜನ್ಮದಾರಭ್ಯ ಜಲಕನ್ಯೆಯರಾದ ನಮಗೆ ಜಲಪರ್ಯಟನದಂತೆ ಜಂಗಮವೇ
ಜೀವನಜಾತ್ರೆಯಾಗಿಹುದು.

ಅಲ್ಲಿಲ್ಲಿ ಅಲೆತು, ಕಲ್ಲಲ್ಲಿ ಕಲೆತು, ಮತ್ತೆಲ್ಲೊ ಮಲೆತು, ಮುನ್ನೂಕುತ ಮರೆತು
ಮೆರೆವ ಮಂದಾಕಿನಯರಾವು.
ನಮಗೆ ನೇಹ–ನಲುಮೆಯ ನಂಟೆಂಬ ಗಂಟು ಗಾಳಿಗೋಪುರದಿ ಗಣಗುಡುವ
ಗಂಟೆಯಷ್ಟೇ ಗೌಣ!
ಪತಿಯಲೇ ಪರಮಾತ್ಮನನು ಪಡೆವ ಪತಿವ್ರತಾ ಪದಬೇಕಿಲ್ಲ. ಪತಿತರಾಗಿ
ಪರದಾಡುವ ಪ್ರಮೇಯವನೂ ಪಡೆದಿಲ್ಲ.
ಪ್ರಾಣಮನದ ಪ್ರಾಂಗಣದಲಿ ಪ್ರವಹಿಸುವ ನಂದನದ ನಿರ್ಮಲಾನಿಲದಂತೆ
ನೀಲಕಿರಣದ ಛಾಯೆಯನು ಹೊತ್ತು,
ಚಿರಂತನವಿಹ ಚೈತ್ಯಪುರುಷನ ಚೈತ್ಯಾಲಯದಿಂ ಚಂದ್ರಮಂಡಲದೊರೆಗಿನ
ಚಾರುಮಾರ್ಗದೊಳು ಚರಿಸುವೆವು.
ಗಂಧರ್ವನಗರದ ಗಾನಮಂದಿರದೊಳಗಿಂದ ಗಮಿಸಿದ ಕಂಚಿನ ಕಂಠದ
ಸ್ನಿಗ್ಧಾಲಾಪವನು ಸೂತ್ರದೊಳು
ಸಮನ್ವಯಿಸಿ ತೆರೆತೆರೆಯಾಗಿ ತೂರುತ ತಿರುಗಾಳಿ–ತಂಗಾಳಿಗಳಲದನು ತುಂಬುತ
ತೋಷಿಸುವೆವು.
ವಿಶ್ವಾತ್ಮದಾಳದಾ ಮೌನ ಮಂದಿರದೊಳಗೆ ಮಂಡಲಾತ್ಮನಾಗಿ ಮಂಡಿಸಿ ಮುಕ್ಕೋಟಿ
ಮಂತ್ರಗಳ ಮಂತ್ರಿಸುತಿಹ
ಅಂತಃಸ್ಫುರಣದ ಅಧಿದೈವನಿಹ ಸೂರ್ಯನಾರಾಯಣನ ಸುವ್ಯಕ್ತ
ಸನ್ನಿಧಿಯೊಳಗಿಂದ ಸ್ಫುರಣವಿಹ ಸಪ್ತರಶ್ಮಿಗಳ
ಸೂಡಿಯಾಗಿ ಸುತ್ತುಹಾಕುವೆವು. ಅಚಿರಾಂಶಗಳಂತೆ ಅನಂತಾವಕಾಶದೊಳು
ಅವಿಚ್ಛಿನ್ನರಾಗಿ ಅಂಡಲೆಯುವೆವು.
ಪೃಥಿವಿ ಪ್ರಕೃತಿಯೊಳು ಪವಡಿಸಿಹ ಪಂಕಪಥದಿಂದ ಪಯಣಿಸಿ ನೀಲಾವರ್ತದಾ
ನೂರುಮಂಡಲಗಳಲಿ
ಹಾಳ್ಬೆಳಕ ಹರಿಸಿ ಹುಬ್ಬೇರಿಸುತಿಹ ಲಕ್ಷನಕ್ಷತ್ರಗಳ ಅಕ್ಷಯಾಂಬರದಾ ಕಕ್ಷೆಯೆಡೆಗಿನ
ಸುಭೀಕ್ಷಮಾರ್ಗದಲಿ
ಸಂಚರಿಸಿ ಆ ಬೆಳಕಿನ ಬಟ್ಟಲಿನೊಳು ಶಕ್ತಿ–ಆನಂದಗಳ ಅಮೃತಧಾರೆಯನೇ
ತುಂಬಿ ಹರಿಸುವೆವು.

ಸಪ್ತಗೋಮಂಡಲದಿ ಸುಪ್ತವಾಗಿರುವ ಸಪ್ತರಶ್ಮಿಗಳಿಗೆ ಸಪ್ತಸಿಂಧುಗಳೆಂಬ
ಸಪ್ತಾನ್ನವನುಣಿಸುವೆವು.
ಋತುವಿಗೊಮ್ಮೆ ಋತದ ವ್ರತಿಯಾಗಿ ವೃದ್ಧಿಯಾಗುತಾ ಮತ್ತೆ ಮುದ್ದೆಯಾಗುತಾ
ಮರೆಯಾಗುವ ಮಧುಚಂದ್ರನನು
ಕಂಡು ಕ್ಷೋಭೆಗೊಳಗಾದ ಕಡಲೊಂದು ಕೆಸರಾಳದಿ ಕುಳಿತ ಕಾಲರಕ್ಕಸರನು
ಕದನ–ಕೋಲಾಹಲಕಿಳಿಸುವಂತೆ,
ಕತ್ತಲೆಯು ಕಳೆದು ಬೆಳಗು ಮೂಡುವ ಮುನ್ನ ಮೂಡಣದಿ ಮಿನುಗುವ
ಬೆಳ್ಳಿಚುಕ್ಕೆಯನು ಕಂಡು
ಗೂಡಿನೊಳಗೆ ಗೌಪ್ಯವಾಗಿದ್ದ ಗಂಡು–ಹೆಣ್ಣುಗಳು ಗುಟರ್ ಗುಂಯ್ಗುಡುತ
ಗರಿಗೆದರಿ ಗಾಳಿದೇರನೇರ್ವಂತೆ,
ತಾರಾಧಿಪತಿಗಳವರು ತಮ್ಮ ತೆಕ್ಕೆಯೊಳಗೆ ತೂರಿಕೊಂಡ ತಾಸಿನೊಳಗೆಮ್ಮ
ಸ್ವರ್ಣಸ್ತನಗಳ ಸುಖಸ್ಪರ್ಷಕೊಳಗಾಗಿ
ಸೃಷ್ಟಿನಿಯಮಗಳನೇ ಸಡಿಲಿಸಿ ಸೋಲೊಪ್ಪಿಕೊಳ್ವರು, ಮರುಘಳಿಗೆಯಲೇ
ಮುಷ್ಠಿಯೊಳಗಿದ್ದ ಮಾನಿನಿಯರು ಮರೆಯಾಗಿರಲು
ಬಲೆಗೆ ಬಿದ್ದ ಬಲಿಪಶುವನು ಬಾಯ್ತೆರೆದು ಬಚ್ಚಿಟ್ಟುಕೊಳುವನಿತರೊಳದು
ಬದುವಿನೊಳಗೋಡಿ ಬಿಸಿಲ್ಗುದುರೆಯಾಗಿರಲು
ರುರು–ರೌಹಿಣವು ಬೇಕೆಂದು ಶಶ–ವಿಶಣವು ಸಾಕೆಂದು ವಟಗುಡುವ ವ್ಯಾಘ್ರವು
ವಿಕ್ಷಿಪ್ತಗೊಳುವಂತೆ
ಬರ್ಬರದ ಭಾವಾನಲದೊಳಗೆ ಬೆಂದೇಳುವರು. ಮರ್ಮರದ ಮಂದಾನೀಲದೊಳಗೆ
ಮಿಂದೇಳುವರು.
ಮನೋಮಯದಾ ಮುಕ್ಕೋಟಿ ಮಂಡಲದಲಿ ತೈಜಸಧಾರಿಗಳಾಗಿ ಅನಿಮೇಷರ
ಅಂಗವನು ಅಪ್ಪಿಕೊಳುವೆವು.
ಕೆಳಲೋಕದಾ ಕಾಂತನಿಗಾಗೆಂದು ಕಾರ್ಮಣರಂತೆ ಕಂಡರಿಸಿ ಮಾನವರ
ಮಂತ್ರಾತ್ಮವನು ಮುತ್ತಿಕೊಳುವೆವು.
ಪರ್ವತ ಪಾರಿಜಾತಾದಿ ಪುಷ್ಪಗಳಲ್ಲದೇ ಪಂಕದೊಳು ಪುಟ್ಟುವ ಪದುಮದೊಳಗೂ
ಪ್ರಾಣವನು ಪ್ರವಹಿಸುವೆವು.

ಅನಿಲ–ಅನಲಾದಿಯಾಗಿ ಅವ್ಯಕ್ತವಿಹ ಅನಂತಾತ್ಮಗಳೊಡನೆ ಅವಿನಾಭಾವದ
ಅನುಬಂಧವನು ಅರಸುವೆವು.
ನೃಪ–ನಾಯಕರಾಗಿ ನಡೆವ ನಿಮಗೆ ನೀರೊಳಗೆ ನಿಂತು ನಲಿವ
ನೀಲಕಮಲದೊಡನೆಯ ನಂಟಿದೆಯೇ?
ಪರ್ವತದೆದೆಗೂ ಪಿಸುಮಾತನಿಟ್ಟು ಪೀಡಿಸುವ ಗಾಳಿಗಂಧರ್ವರ ಗೌಪ್ಯನಿಯಮಗಳ
ಗಂಟಿದೆಯೇ?
ಶ್ವೇತಸಾಗರದಾ ಹಂಸಪಾವಿತ್ರ್ಯಗಳನು ಹಸನಾಗಿಯೇ ಹತ್ತು ಹಾದಿಯೊರೆಗೆ
ಹೊತ್ತೊಯ್ಯಬಹುದೇ?
ಕತ್ತಲರಾತ್ರಿಯಲಿ ಕಣ್ತೆರದು ಕಾಂತಿಮಯವಿಹ ಕಣ್ಣಾಣಿಮುತ್ತೊಂದು ಕತ್ತಲು
ಕಳೆದು ಕೆಂಡಸೂರ್ಯನು
ಕಂಡರಿಸುವ ಕಾಲದೊರೆಗೂ ಕಣ್ಕುಕ್ಕುವಾ ಕಾಂತಿಯನೇ ಕರೆದು ಕಾಲಕೆದುರಾಗಿ
ಕೆನೆಯಬಲ್ಲುದೆ?
ನೃಪನೇ, ನಿನ್ನ ಶುದ್ಧ–ಉದ್ಬುದ್ದ ಶ್ರೇಷ್ಠತೆಯನು ಮಲಿನಗೊಳಿಸದೇ ಮರಣದೊರೆಗೂ
ಮುನ್ನೂಕಬಹುದೇ?
ಭೂತಲದಿ ಭವಿಸುವಾ ಭಾಗೀರಥಿಯು ಮಾನವರ ಮನೆಮಾರುಗಳ ಮುಟ್ಟದೆ
ಮುನ್ನೂಕುವಳು.
ಮಾನುಷರ ಮಹಾಭಿಲಾಷೆಗಳನೆಲ್ಲ ಮೆಟ್ಟಿ ಮೂರು–ಮುನ್ನೂರಾಗಿಸುವಳು.
ಮತ್ತೆ ಮುಂದೋಡುವಳು.
ನೌದಂಡಗಳನಿಡಿದ ನೂರು ನಾವಿಕರ ನಾನ್ನೂರು ನೆನಹುಗಳನೆಲ್ಲ ನೀರಮೇಲೆ
ನೂಕುತ ನೌಕಾಯಾನವ ನಡೆಸುವಳು.
ನೂರು ನದಿಗಳ ನಾಲೆಗೆ ನೀರುಣಿಸಿ ನಲಿಸುವಳು. ಸರಿದು ಸಾಗರಕಿಳಿದು
ಸತ್ಯ–ಸಾಕ್ಷಾತ್ಕಾರಕೆ ಸಾಕ್ಷಿಯಾಗಿಹಳು.
ಗಂಗೆಯಂತೆ ಗಾಂಗೇಯರು ನೀವಿಲ್ಲಿ. ನಾಗರೀಕತೆಯನೇ ನೋಡದೊಂದು
ನಡುಗಡ್ಡೆಗೆ ನಡೆದು
ನೀರವೀರರಿಗೆ ನೂರುವಿದ್ಯೆಗಳ ನೆರವಿತ್ತು. ನೀತಿ–ನಡೆಗಳೆಂಬ ನೂರೆಂಟು
ನೇಮಗಳ ನೆನಹಿತ್ತು.

ರಾಷ್ಟ್ರಗಳನೇ ರಚಿಸುವಿರಿ. ಬರಿ ಭೌತಿಕದ ಬಲದಿಂದಲ್ಲ ಅಂತರಾತ್ಮಾಯನದ
ಅಮೃತ ಶಕ್ತಿಯಿಂದ
ಅದ್ಭುತಗಳನೇ ಆವಿಷ್ಕರಿಸುವಿರಿ. ಭೂಮಧ್ಯದಿಂ ಖಮದ್ಯದೊರೆಗೆ ವಿಕಸನದ
ನಿಃಶ್ರೇಣಿಯೊಂದನು
ನೆಟ್ಟು ನೆಲದಿಂದ ನಾಕದೆಡೆಗೇರಿ ನಿಂತು ನಿಲಿಂಪರಾಜ್ಞಿಯರನೇ
ನಿತ್ಯಸತಿಯರನಾಗಿಸಿ ನಲಿಯುವಿರಿ.
ಅದರ ಆರಂಭವೆಂಬಂತೆ ಅಮರಲೋಕದಾ ಅಪ್ಸರಿಯಿವಳು ಅವನಿತಲದ
ಅನುರಾಗಕಾಗಿ ಅನುಲಾಪಿಸಿಹಳು!"
ಸ್ವಪ್ನಸೀಮೆಯನು ಸೇರಿ ಸಮ್ಮೋಹಿತನಿಹ ಸಂಗೀತಗಾರನೋರ್ವ ಸ್ನಿಗ್ಧಾಲಾಪಕೆ
ಸೋತು ಸಾಮಗಾನವನೊರೆವಂತೆ,
ಜನ್ಮಾಂದ ಜಾತನೋರ್ವ ಝಗ್ಗನೆ ಜರಿದಿಳಿದ ಜ್ವಾಲಾಶಿಖೆಯಲಿ ಅಂತಃಚಕ್ಷುಗಳವು
ಅವತರಿಸಿರಲು
ಹುಟ್ಟುಗುರುಡನವ ಬೆರಗುಗಂಗಳಿಂದ ಭವ್ಯಲೋಕವಿದನು ಸೂಕ್ಷ್ಮದಲೀಕ್ಷಿಸಿ
ಸುಖಿಸುವೊಂತೆ,
ಅಮೃತಾಂಶನವ ಅಮರಲೋಕದಾ ಅಪ್ಸರವಾಣಿಯ ಅಮಲಿನಿಂದ ಅರಿವೆದ್ದು
ಅಲ್ಪನುಡಿಗಳನಾಡಿಹನು:
"ಅಂದೊಮ್ಮೆ ಅದೇ ಹಳೆಯ ವಿಚಾರವಾದದ ವಾಙ್ಮಯದೊಳು ಒತ್ತೆಯಾಳಾಗಿದ್ದ
ಹೊತ್ತಿನಲಿ
ಪರಾತ್ಪರನಿಂದ ಪುಟ್ಟಿ ಪ್ರಕೃತಿಯಲಿ ಪ್ರಾಣಬೀಜವನಿತ್ತ ಶ್ವೇತಶುಕ್ಲಾದಿ
ಹಂಸಪಾವಿತ್ರ್ಯಗಳು
ಮನುಕುಲದಾತ್ಮವನ್ನು ಮುನ್ನಡೆಸಿದ ಮಹಾಗಾಥೆಗಳನು ಮಂತ್ರದೊಲಂತೆ
ಮಂಡಿಸುತಿದ್ದೆ,
ಮಧುರಾಜ್ಞಿಯ ಮಾತಿಗೆ ಮಣಿದು ಮಧುಸಂಗ್ರಹಕೆಂದು ಮುಂದೋಡುವ
ಮರಿಮಕ್ಷಿಕೆಗಳಂತೆ
ಅಂದು ಅವೆಲ್ಲವೂ ಅಧಿಕಾರಬದ್ಧವಾದೆನ್ನ ಅಂಗೈಯೊಳಗೆ ಅವಿತು ಅರಳುತ್ತಿದ್ದವು.
ಮತ್ತೆ ಮರಳುತ್ತಿದ್ದವು.

ಆದರೀಗ ಆಧ್ಯಾತ್ಮಿಕದ ಆವರಣದೊಳು ಆರೋಹಿಸಿದೆನಗೆ ನೀಲಾಕಾಶದೊಡನೆ
ನಲುಮೆಯ ನಂಟಿದೆ.
ಆನಂದಮಂಡಲವೆಂಬಾ ಆಸ್ಥಾಣುವಿನ ಆಲಯದಲಿ ಚ್ಯುತಿಯಿರದ ಹಗಲು
ಮೂಡಿ ಮೆರೆಯುತ್ತಿರುವೊಂತೆ,
ದಿನದಿನವೂ ವಸಂತವೇ ವಾಸರವಾಗಿ ಆಸರೆಯನಿತ್ತಿಹುದು. ಋತುಮಾನಗಳೆಲ್ಲ
ಋತಮಾನಗಳಾಗಿಹವು.
ದಿಗಂಬರರಾಗಿ ದ್ಯುಲೋಕ–ದ್ಯೌಲೋಕಗಳಿಗೆಲ್ಲ ದಾರಿಬೆಳಕನೀವ ಚತುರ್ಮಾನಸ
ಪುತ್ರರೊಲಂತೆ,
ದಿವ್ಯಮಾತೆಯ ಮಡಿಲೇರಿ ಮೊಲೆಯೂಡಿ ಮಲಗಿರುವ ಸೂರ್ಯಲೋಕದಾ
ಶಕ್ತಿಶಿಶುವಿನಂತೆ,
ಪ್ರಕ್ಷುಬ್ಧ ಪಾರಾವಾರದ ತುಮುಲ ತರಂಗಗಳೆದೆಯಲಿ ತೇಲುತಿಹ ಔದುಂಬರ
ಪರ್ಣದ
ಮೇಲೆ ಮೆಟ್ಟಿ ಮೂಡಿ ಅಂಗುಷ್ಠದಲಿಹ ಅಮೃತಪಾನಗೈದು ಅಮರವಿಹ
ಆನಂದಕಂದನಂತೆ,
ಸ್ವರ್ಲೋಕದೊಂದು ಸುಳಿಯೊಳಗಿಂದ ಸರಿದು ಸಾಕ್ಷ್ಯವಿಹ ಸ್ವರ್ಣಶಿಶುವೊಂದರ
ಸ್ನೇಹವಿತ್ತಿಹುದು.
ಬರಿ ಬಂಗಾರದ ಬೆಳೆ ಬಿಡುವ ಭವ್ಯಲೋಕದಾ ಬದುವಿನಂತಿರುವ, ಬೆಳ್ಳಿಬೆಟ್ಟದಾ
ಭಾಗದಂತಿರುವ
ಹೊಲಗದ್ದೆಗಳಾ ಹರಿದ್ವರ್ಣದ ಹಸಾದವದು ಹಗಲುಗನಸಿನಂತೆನ್ನ ಹಾಸಿ
ಹೊದ್ದುಕೊಂಡಿಹುದು.
ಸಪ್ತಸ್ವರಗಳಲೂ ಸಿದ್ಧವಿರದ ಸಾಕಾರ ಸ್ವರೂಪಗಳವು ಸುಳಿದೆನ್ನ ಸಮೀಪದಿ
ಸಾಲಂಕೃತಗೊಂಡಿಹವು.
ಕನಸಿನೊಳು ಕಾರಣಲೋಕದಾ ಕೃತ್ರಿಮ ಕನ್ಯೆಯರ ಕೆಚ್ಚಲನು ಕಂಡು
ಕನವರಿಸುವೆನು.
ಮೂಡಣದಿ ಮೆರೆವ ಮಲೆಗಳನೆಲ್ಲ ಮಂದಾಕಿನಿಯರ ಮೊಲೆಗಳೆಂದೆನಿಸಿ
ಮಂಪರಿಸುವೆನು.

ಕೊನೆಗೆ ಕೈಗೂಡದಿರುವಾ ಕನಸು ಕಾಙ್ಕೆಗಳನೆಲ್ಲ ಕೈಬಿಟ್ಟು ಮುಚ್ಚಂಜೆಯ
ಇಬ್ಬನಿಯೊಳು ಇಂಪನ್ನರಸುವೆನು.
ಬಾಂದಳಕೇರಿ ಭವಿಸುವ ಬಾನಾಡಿಗಳ ಬಳಗದೊಡನೆ ಭವ್ಯ ಬಾಂಧವ್ಯವನೇ
ಬೆಳೆಸುವೆನು.
ಸುತ್ತಿ ಸುರುಳಿಯಲಿ ಸರಿವ ಸರ್ಪಗಳೊಡನೆ ಸಹಜ ಸಂಬಂಧವನೇ ಸಾಧಿಸುವೆನು.
ಕಾರ್ಗಾಲ ಕರೆವ ಕಾಲದಲಿ ಕೋಲ್ಮಿಂಚೊಂದು ಕೊರಳರಿದು ಕಾಡ್ಗಿಚ್ಚಿಗೆ
ಕಾರಣವಿರುವ ಕಾಲದಲಿ
ದಂಡಕಾರಣ್ಯವದು ಕೆಂಡಕಾರುಣ್ಯವಿಲ್ಲದೆ ಉರಿದು ಅರಣ್ಯರೋಧನದಿ
ಅವುಡುಗಚ್ಚಿರಲು,
ವೃಕ್ಷದೊಳಗಣ ಯಕ್ಷಿಯರು ಬೆಂಕಿಯೊಳು ಬೂದಿಯಾಗಿರಲವಗೆ
ದುಃಖಾಶ್ರುಗಳೆಂಬ ದಾರಿನೀರುಣಿಸುವೆನು.
ನೀಲಸಾಗರದ ನಟ್ಟನಡುವೆ ನೀರುನೀರಾದ ನಾವಿಕರನು ನೆಲಮುಟ್ಟಿಸುವ
ನೀರಲೆಯಾಗಿ ನೂಕುವೆನು.
ಪೂರುಷನಲಿ ಪುಟ್ಟಿ ಪ್ರಕೃತಿಯಲಿ ಪರಿಚಿತವಿಹವೀ ಪದಾರ್ಥಗಳೆಡೆ ಪಯಣಿಸಿ
ಪಾವನನಿರುವೆನು.
ಪರಂಧಾಮಸುತೆಯಾದೆನ್ನ ಪ್ರೇಮಪೌರ್ಣಮಿಯ ವಕ್ಷಸ್ಥಲಾದಿ ಅಕ್ಷೀತಲದೆಡೆಗೆ
ಅಂಬೆಗಾಲಿಕ್ಕುವೆನು.
ಆದರೆ, ಆ ಭಗವಂತನ ಬೆಳಕು ಬುವಿಗಿಳಿದೀ ಭಾಗ್ಯಹೀನನ ಬದುಕ
ಬಂಗಾರವಾಗಿಸುವುದೇ?
ಅವನ ಸ್ವಾಮಿತ್ವದಲಿ ಸೃಷ್ಟಿಯಾದ ಸಕಲವಿಶ್ವವನು ಬಿಟ್ಟು ಬರಿಯೋರ್ವ
ಭಾಮಿನಿಗಾಗಿ
ಬವಣೆಗೆಟ್ಟು ಬಿದ್ದಿರುವೀ ಭೂಮಿಯಣುಗನಿಗೆಂದು ಭಾಗ್ಯಲಿಪಿಯನ್ನೇ
ಬರೆಯುವನೇ?
ಸ್ವಪ್ನರಾಜ್ಯರಾ ಸೌದಾಮಿನಿಯನ್ನು ಸರ್ವಸಾಕ್ಷೀಭೂತಗಳೆದುರಲ್ಲಿ
ಸ್ಥೂಲರೂಪಕಿಳಿಸುವನೇ?”
ತಮ್ಮ ನೀರ ಸೆಳವಿನಲಿ ತಮ್ಮ ಸೀರೆಯ ತಾವೇ ತೋಯಿಸಿಕೊಳ್ಳುವ ಜೀವನದಿ
ಜಲಜೆಯರಂತೆ,

ತನ್ನ ತುಡಿತಗಳಿಂದ ತಾನೇ ತಡವರಿಸಿಕೊಂಡೆದ್ದ ತನುಜನವ ತನ್ನೆದುರು
ತೋರಿಬಂದಿಹ
ಕನಸು ಕನ್ಯೆಯನು ಕಂಡು ಕಿರಿದಿರುವ ಕಾಣ್ಕೆಯನು ಕಾಂತಾರಪಥಕೆ ಕ್ರಮಿಸಿದನು.
ಭೂಸೀಮೆಯೊಡನೆಯ ಬಾಂಧವ್ಯಕೆಂದು ಬಾಯಾರಿ ಬಂದು ಬಡಿವ
ಬಲ್ದೆರೆಯೊಲಂತೆ,
ಪುರೂರವಸ್ಸನವ ಉರ್ವಶಿಯೆಡೆಗೆ ಉಕ್ಕುತುಕ್ಕುತ ಉಬ್ಬಿದನು, ತೂಕುತೇಕುತವಳ
ತಬ್ಬಿದನು.
ಗ್ರೀಷ್ಮದಲಿ ಗೊಂಡಾರಣ್ಯದೊಲಾಗಿ ತೃಷಿತವಿಹ ನೆಲವು ಶ್ರಾವಣದಿ ಸುರಿವ
ಮೊದಲ ಮಳೆಯ
ಅಪ್ಪುಗೆಯಲಿ ಅಮೃತಧಾರೆಯ ಅರಸುವೊಂತೆ, ಅಪ್ಸರೆಯವಳು ಅಮೃತಾಂಶನ
ಕಂಗಳಲಿ
ಮಡುವುಗಟ್ಟಿದ ಪ್ರೇಮದ ಪೂರ್ಣಕುಂಭವನು ಪರ್ಜನ್ಯರೂಪದಿ ಪಡೆದು
ಪಾವನಳಿಹಳು.
ಒಡನೆಯೇ, ಈ ನೆಲಮುಗಿಲಿನ ನಂಟಿಗೆ ನಿರ್ಮಾತೃಹಳಿಹ ನಿರ್ಮಲೆಯವಳು
ನುಡಿದಿಹಳು.
ತೇಜಸ್ಸಿನಾ ತವರುಮಂಡಲದಿಂದಿಳಿದ ತಿಲೋತ್ತಮೆಯವಳು ತೀರ್ಥೋಕ್ತಿಗಳ
ತೀಡಿಹಳು:
"ಪ್ರಾಣಮನದಾ ಪ್ರಮೋದಿನಿಯನ್ನೇ ಪ್ರೇಮಪೌರ್ಣಮಿಯಾಗಿಸಿಕೊಂಡ
ಪೂರ್ಣಚಂದಿರನೇ,
ತ್ಯಾಗದಿಂದ ತಾರಾವಲಯವನೇ ತನ್ನೆದೆಗೆ ತಂದಿರಿಸಿಕೊಳುತಿರುವ
ತೂರ್ಯಸೂರ್ಯನೇ,
ಕಾಣ್ಕೆಯಲಿ ಕಂಡರಿಸಿ ಕಾರುಣ್ಯವನು ಕರೆದು, ಕಣ್ತೆರೆದು ಕುರುಡಾಗುವನಿತರೊಳು
ಕರುಣಿಸಿದಾ
ಭಾಗ್ಯವನು ಬೇರೊಂದು ಬಾಗಿಲಿನಿಂದ ಬಂದು ಬರಸೆಳೆದೆಮ್ಮ ಬರಡಾಗಿಸುವಾ
ಭಗವಂತನು,
ಅಮರವಿಹ ಅನುದಾನವನೆಂದೂ ಅನುಗ್ರಹಿಸುವದಿಲ್ಲ. ಕಾಲಾಂತ್ಯದೊರೆಗದನು
ಕಾಯ್ದಿರಿಸುವದಿಲ್ಲ.

(ಸಶೇಷ)

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 01ನೇ ನವೆಂಬರ್ 2025 ಶನಿವಾರ ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಾಲೆಯಲ್ಲಿ 70ನೇ ಕನ್ನಡ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಸಂಸ್ಥೆಯ ಮುಖ್ಯಸ್ಥರಾದ ಡಾ॥ ಅಜಿತ್ ಸಬ್ನೀಸ್‌ರವರು ಕನ್ನಡ ಬಾವುಟದ ಧ್ವಜಾರೋಹಣವನ್ನು ನೆರವೇರಿಸಿದರು. ನಂತರ, ಪ್ರಾಂಶುಪಾಲರು ಮತ್ತು ಆಡಳಿತ ಮಂಡಳಿ ಸದಸ್ಯರು ಜ್ಯೋತಿ ಬೆಳಗಿಸಿ ತಾಯಿ ಭುವನೇಶ್ವರಿಗೆ ಪುಷ್ಪ ನಮನ ಸಲ್ಲಿಸಲಾಯಿತು. ವಿದ್ಯಾರ್ಥಿಗಳು ಕರ್ನಾಟಕದ ವೈಭವವನ್ನು ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿದರು. ಕನ್ನಡದಲ್ಲಿ ರಾಷ್ಟ್ರಗೀತೆ ಹಾಡುವುದರೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು.

ದಿನಾಂಕ 22ನೆ ನವೆಂಬರ್ 2025 ಶನಿವಾರ ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ವತಿಯಿಂದ 'ದೈಹಿಕ ಶಿಕ್ಷಣ' ದಿನವನ್ನು ಆಚರಿಸಲಾಯಿತು. ಬೆಳಿಗ್ಗೆ ಪೂರ್ವ ಪ್ರಾಥಮಿಕ ತರಗತಿ ಮಕ್ಕಳು ಹಾಗೂ ಒಂದರಿಂದ ನಾಲ್ಕನೇ ತರಗತಿ ವಿದ್ಯಾರ್ಥಿಗಳು ಯೋಗ, ನೃತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಪ್ರದರ್ಶಿಸಿದರು. ಆನಂತರ, ಮಧ್ಯಾಹ್ನ ಐದರಿಂದ ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಆಯೋಜಿಸಿದ ಕ್ರೀಡಾಕೂಟದಲ್ಲಿ ಜಯನಗರ ವಿಧಾನಸಭೆ ಸದಸ್ಯರಾದ ಶ್ರೀಯುತ ಸಿ.ಕೆ. ರಾಮಮೂರ್ತಿರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಸಂಸ್ಥೆಯ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್, ಪ್ರಾಂಶುಪಾಲರು, ಆಡಳಿತ ಮಂಡಳಿ ಸದಸ್ಯರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಶ್ರೀಮಾತಾರವಿಂದರ ಭಾವಚಿತ್ರಕ್ಕೆ ಪುಷ್ಪಗಳನ್ನು ಸಮರ್ಪಿಸುವ ಮೂಲಕ ಕ್ರೀಡಾಕೂಟವು ಆರಂಭವಾಯಿತು. ವಿದ್ಯಾರ್ಥಿಗಳು ಧ್ವಜ ಕವಾಯತಿನೊಂದಿಗೆ ಮುಖ್ಯ ಅತಿಥಿಗಳಿಗೆ ಗೌರವವನ್ನು ಸೂಚಿಸಿದರು. ಆನಂತರ ವಿದ್ಯಾರ್ಥಿಗಳು ಉತ್ಸಾಹದಿಂದ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ, ವಿಜೇತರಾಗಿ ಪ್ರಶಸ್ತಿಗಳನ್ನು ಸ್ವೀಕರಿಸಿದರು. ನಂತರ ಯೋಗ, ಕರಾಟೆ ಮತ್ತು ನೃತ್ಯ ಪ್ರದರ್ಶಿಸಿ, ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಕ್ರೀಡಾಕೂಟದಲ್ಲಿ ಪೋಷಕರು, ವಿದ್ಯಾರ್ಥಿಗಳು,

ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಭಾಗವಹಿಸಿದ್ದರು. ವಂದೇಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಸಮಪ್ತಿಯಾಯಿತು.


ದಿನಾಂಕ 17ನೇ ನವೆಂಬರ್ 2025 ಸೋಮವಾರ "ಶ್ರೀಮಾತೆಯವರ ದೇಹ ತ್ಯಾಗ" ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 10.00 ಗಂಟೆಯಿಂದ 10.20ರ ವರೆಗೆ ಸಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ಸಾಯಂಕಾಲ 05.00 ರಿಂದ 06.00 ಗಂಟೆಯವರೆಗೆ ಶ್ರೀ ಎಸ್.ಎಸ್. ಸಿಂಹ, ಇವರು "ಶ್ರೀಮಾತೆಯವರ ಅವತಾರ ಸಮಾಪ್ತಿ" ಎಂಬ ವಿಷಯದ ಬಗ್ಗೆ ಕನ್ನಡದಲ್ಲಿ ಉಪನ್ಯಾಸ ನೀಡಿದರು.

ದಿನಾಂಕ 20ನೇ ನವೆಂಬರ್ 2025 ಗುರುವಾರ "ಶ್ರೀಮಾತೆಯವರ ಸಮಾಧಿ" ದಿನ ಆಚರಿಸಲಾಯಿತು. ತತ್ಸಂಬಂಧ 10.00 ಗಂಟೆಯಿಂದ 10.20ರ ವರೆಗೆ ಸಮೂಹಿಕ ಧ್ಯಾನವನ್ನು ಏರ್ಪಡಿಸಲಾಯಿತು. ಸಾಯಂಕಾಲ 5.00 ರಿಂದ 5.30 ಗಂಟೆಯವರೆಗೆ "Terrace Darshans – The Mother 1963–1973" ಎಂಬ ವಿಷಯ ಬಗ್ಗೆ ವೀಡಿಯೋ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ದಿನಾಂಕ 24ನೇ ನವೆಂಬರ್ 2025 ಸೋಮವಾರ "ಶ್ರೀ ಅರವಿಂದರ ಸಿದ್ಧಿ" ದಿನ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 10.00 ಗಂಟೆಯಿಂದ 10.20ರ ವರೆಗೆ ಸಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ಸಾಯಂಕಾಲ 5.15 ರಿಂದ 6.15 ಗಂಟೆಯವರೆಗೆ ಡಾ॥ ನಾಗೇಂದ್ರ (ಸಾಕ್ಷಿ) ಇವರು "Darshana and Siddhi in the light of Sri Aurobindo" ಎಂಬ ವಿಷಯ ಬಗ್ಗೆ ಉಪನ್ಯಾಸ ನೀಡಿದರು.

ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಸಹ ಪ್ರಸ್ತುತ ಪಡಿಸಲಾಯಿತು.

ಫೋಟೋ ಚಿತ್ರ ಪ್ರದರ್ಶನ "Meditations on Savitri Book Two, Canto 5-9" ವಿಷಯವಾಗಿ ದಿನಾಂಕ 15ನೇ ನವೆಂಬರ್ 2025 ಇಂದ 20ನೇ ಜನವರಿ 2026ರ ವರೆಗೂ ಶ್ರೀ ಅರವಿಂದೋ ಸಂರ್ಕೀಣದ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಲಾಗಿದೆ.



ಫೋಟೊ: ಇಮೇಜಿಂಗ್ ಸಾವಿತ್ರಿ

**RNI No. 22511/1971**
No. of Pages **72 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.